# ಸುಖದ ಕೀಲಿಕೈ

(ದಿನಾಲು ಮಾಡಬೇಕಾದ ಚಿಂತನ)


ಲೇಖಕರು :

ಶ್ರೀ ಸಿ. ಎ. ಜಯೇಶ ಮೋಹನಲಾಲ ಸೇಠ, ಬಿ.ಕಾಂ., ಎಫ್.ಸಿ.ಎ.

(ಬೋರಿವಿಲಿ)

ಕನ್ನಡ ಅನುವಾದಕರು :


ಬ್ರ. ಶ್ರೀ ರತನಚಂದ ನೇಮಿನಾಥ ಕೋಟಿ ಎಂ.ಎ.


ಯಾವ ಜೀವವು ರಾಗ ದ್ವೇಷ ರೂಪದಿಂದ ಪರಿಣಮಿತವಾದ ಬಳಿಕವೂ ಸಹ ಕೇವಲ ಶುದ್ಧಾತ್ಮನಲ್ಲಿಯೇ (ದ್ರವ್ಯಾತ್ಮನಲ್ಲಿ ಸ್ವಭಾವದಲ್ಲಿ) ನನ್ನತನ (ಏಕತ್ವ) ಮಾಡುತ್ತಾನೆ ಮತ್ತು ಅದರದೇ ಅನುಭವ ಮಾಡುತ್ತಾನೆ, ಆ ಜೀವವೇ ಸಮ್ಯಗ್ದೃಷ್ಟಿಯಿದೆ. ಅರ್ಥಾತ್ ಇದುವೇ ಸಮ್ಯಗ್ದರ್ಶನದ ವಿಧಿ ಇದೆ.


ಪ್ರಕಾಶಕರು :

ಸೌ. ಸುನೀತಾ ಶಾಂತಿನಾಥ ಮುತ್ತೀನ

ಶ್ರೀ ಶಾಂತಿನಾಥ ಗುಣಧರ ಮುತ್ತೀನ, ವಿಜಯಪುರ



ಭ. ಶ್ರೀ 1008 ಸಹಸ್ರಫಣಿ ಪಾರ್ಶ್ವನಾಥ ತೀರ್ಥಂಕರರು
ಶ್ರೀ ಕ್ಷೇತ್ರ ವಿಜಯಪುರ

# ಸುಖದ ಕೀಲಿಕೈ

(ದಿನಾಲು ಮಾಡಬೇಕಾದ ಚಿಂತನ)

ಲೇಖಕರು :

ಶ್ರೀ ಸಿ. ಎ. ಜಯೇಶ ಮೋಹನಲಾಲ ಸೇಠ, ಬಿ.ಕಾಂ., ಎಫ್.ಸಿ.ಎ.

(ಬೋರಿವಿಲಿ)

ಕನ್ನಡ ಅನುವಾದಕರು :

ಬ್ರ. ಶ್ರೀ ರತನಚಂದ ನೇಮಿನಾಥ ಕೋಟಿ ಎಂ.ಎ.

ಯಾವ ಜೀವವು ರಾಗ ದ್ವೇಷ ರೂಪದಿಂದ ಪರಿಣಮಿತವಾದ ಬಳಿಕವೂ ಸಹ ಕೇವಲ ಶುದ್ಧಾತ್ಮನಲ್ಲಿಯೇ (ದ್ರವ್ಯಾತ್ಮನಲ್ಲಿ ಸ್ವಭಾವದಲ್ಲಿ) ನನ್ನತನ (ಏಕತ್ವ) ಮಾಡುತ್ತಾನೆ ಮತ್ತು ಅದರದೇ ಅನುಭವ ಮಾಡುತ್ತಾನೆ, ಆ ಜೀವವೇ ಸಮ್ಯಗ್ದೃಷ್ಟಿಯಿದೆ. ಅರ್ಥಾತ್ ಇದುವೇ ಸಮ್ಯಗ್ದರ್ಶನದ ವಿಧಿ ಇದೆ.

೨೦೨೩

ಪ್ರಕಾಶಕರು :

ಸೌ. ಸುನೀತಾ ಶಾಂತಿನಾಥ ಮುತ್ತಿನ

ಹಾಗೂ

ಶ್ರೀ ಶಾಂತಿನಾಥ ಗುಣಧರ ಮುತ್ತಿನ, ವಿಜಯಪುರ

ಕೃತಿ : **ಸುಖದ ಕೀಲಿಕೈ** (ದಿನಾಲು ಮಾಡಬೇಕಾದ ಚಿಂತನ)

ಪ್ರಸಂಗ : ಭಗವಾನ ಶ್ರೀ ೧೦೦೮ ಸಹಸ್ರಫಣಿ ಪಾರ್ಶ್ವನಾಥ ತೀರ್ಥಂಕರರ ಪವಿತ್ರ ಅತಿಶಯ ಕ್ಷೇತ್ರ ವಿಜಯಪುರದಲ್ಲಿ ಪೂಜ್ಯ ಆರ್ಯಿಕಾ ಶ್ರೀ ೧೦೫ ಸುನೀತಿಮತಿ ಮಾತಾಜಿಯುವರು ೨೦೨೩ನೇ ಸಾಲಿನ ವರ್ಷಾಯೋಗವನ್ನು ಆಚರಿಸುತ್ತಿರುವ ಸವಿನೆನಪಿಗಾಗಿ)

ಲೇಖಕರು :

**ಶ್ರೀ ಸಿ. ಎ. ಜಯೇಶ ಮೋಹನಲಾಲ ಸೇಠ,** ಬಿ.ಕಾಂ., ಎಫ್.ಸಿ.ಎ.
**(ಬೋರಿವಿಲಿ)**

ಕನ್ನಡ ಅನುವಾದಕರು :

**ಬ್ರ ಶ್ರೀ ರತನಚಂದ ನೇಮಿನಾಥ ಕೋಟಿ** ಎಂ.ಎ.

ಪ್ರಕಾಶಕರು :

**ಸೌ. ಸುನೀತಾ ಶಾಂತಿನಾಥ ಮುತ್ತೀನ**
ಹಾಗೂ
**ಶ್ರೀ ಶಾಂತಿನಾಥ ಗುಣಧರ ಮುತ್ತೀನ, ವಿಜಯಪುರ**

ಪ್ರಥಮ ಮುದ್ರಣ : ಕನ್ನಡ - ೨೦೨೩
ಹಿಂದಿ - ೧೫ ಸಂಸ್ಕರಣ, ಗುಜರಾತಿ ಇಂಗ್ಲೀಷ
ಒಟ್ಟು ೭,೯೭,೦೦೦ ಪ್ರತಿಗಳು ಮುದ್ರಣಗೊಂಡಿವೆ.

ಪ್ರತಿಗಳು : ೧೦೦೮ ಪುಟಗಳು: ೮೦+೮

ಬೆಲೆ : ಅಮೂಲ್ಯ

ಮುದ್ರಣ :

ರವೀಂದ್ರ ಆಕಳವಾಡಿ
ಮನೋಹರ ಮುದ್ರಣಾಲಯ, ಮಾರ್ಕೆಟ್ - ಧಾರವಾಡ
ದೂರವಾಣಿ : 0836 2790030, 9141201170

# आशीर्वचन

भारत धर्म प्रधान देश है । यहाँ पर सदैव अलौकिक ज्ञान प्राप्त करने के लिए मनुष्य प्रयत्न करता रहता है, परन्तु सम्यक्त्व बिना अलौकिक ज्ञान की प्राप्ति नहीं हो सकती है । यह सम्यक्त्व ऐसी निधि, जिसमे जीव अभ्युदय और निःश्रेयस दोनों प्रकार के सुख प्राप्त कर सकता है । सम्यक्त्व जिसके पास है उसके पास सुख की चाबी है और उस चाबी के द्वारा जीव अनन्त दुख के तालों को खोल सकता है ।

ऐसे ही एक खुशी होने की चाबी नामक पुस्तक का सृजन श्रीमान जयेश जी ने किया है । जिन्होंने अपनी अन्तरमुखी साधना के द्वारा ऐसे आगमनिष्ठ बिन्दुओं को लिखा है, जिसके माध्यम से प्रत्येक पाठक को निश्चित रूप से सम्यक्त्व प्राप्त सरलता से हो सके लेखक कई वर्षों से चारों अनुयोगों का विशेष स्वाध्याय कर रहे है, और श्रावक के योग्य क्रियाओं मे संलग्न रहते हुये सम्यक्त्व का दृढता पूर्वक श्रद्धान कर रहे है ।

लेखक ने स्वयं ने तो सुख की चाबी प्राप्त कर ही ली है पर उनकी करुणा उन्हें बार बार यह प्रेरणा देती है कि वो हर लोगों तक यह चाबी पहुँचाये और सबको सम्यक्त्व प्राप्त करने के लिए प्रेरणा दे ।

सुखी होने की चाबी नामक इस पुस्तक को सभी श्रावक गण पढे और उस पुस्तक के माध्यम अपने अनादि के कर्म बन्धन को तोडकर सुरन को प्राप्त करने का अभ्यास करें।

लेखक के लिए मंगलमय आशीर्वाद है की उनके जीवन का हर एक क्षण धर्म, ध्यान की ओर सदैव बढता जाए।

**आर्यिका सुनीतिमती**
२४-८-२०२३
बिजापुर (कर्नाटक)

# ಪ್ರಸ್ತಾವನೆ

ಅನಂತ ಅನಂತ ಕಾಲದಿಂದ ಸಂಸಾರ ಸಾಗರದಲ್ಲಿ ವ್ಯರ್ಥ ಅಲೆದಾಡುವ ಜೀವನಿಗೆ, ಭಗವಾನರ ಮೂಲಕ ಹೇಳಲ್ಪಟ್ಟ ದುರ್ಲಭತೆಗಳು (ಮನುಷ್ಯ ಭವ, ಆರ್ಯಕ್ಷೇತ್ರ, ಉತ್ತಮ ಕುಲ, ದೀರ್ಘ ಆಯು, ಪೂರ್ಣ ಇಂದ್ರಿಯಗಳು, ನಿರೋಗಿ ಶರೀರ, ನಿಜವಾದ ಗುರು, ನಿಜವಾದ ಶಾಸ್ತ್ರ, ನಿಜವಾದ ಶ್ರದ್ಧೆ ಅರ್ಥಾತ್ ಸಮ್ಯಗ್ದರ್ಶನ ಮತ್ತು ಮುನಿತ್ವ) ಇವುಗಳಲ್ಲಿಂದ ಮೊದಲಿನ ಎಂಟು ದುರ್ಲಭಗಳು ಅನಂತ ಸಲ ದೊರಕಿವೆ. ಆದರೂ ಸಹ ನಮ್ಮ ದಿಕ್ಕು ಬದಲಾಗಿಲ್ಲ. ಗಾಣದ ಎತ್ತಿನಂತೆ ನಾಲ್ಕೂ ಗತಿಗಳಲ್ಲಿ ಪರಿಭ್ರಮಣ ಮಾಡುತ್ತಿದ್ದೇವೆ. ಆದರೆ ಪಂಚಮ ಗತಿ ಅರ್ಥಾತ್ ಮೋಕ್ಷದ ಸಲುವಾಗಿ ತೀವ್ರ ಪುರುಷಾರ್ಥ ಮಾಡಿಯೇ ಇಲ್ಲ. ಜ್ಞಾನಿಗಳು ಇದರ ಕಾರಣ ಹೇಳಿದ್ದಾರೆ. ಏನೆಂದರೆ ಎಂಟು ದುರ್ಲಭತೆಗಳು ದೊರಕಿದ ಬಳಿಕ ಜೀವವು ಒಂಬತ್ತನೇ ದುರ್ಲಭತೆಯನ್ನು ಪಡೆಯಲೇ ಇಲ್ಲ. ಅಂದರೆ ಆತ್ಮ ಅನುಭವ (ಸಮ್ಯಗ್ದರ್ಶನ) ಮಾಡಲಿಲ್ಲ. ಅಂದರೆ ಸಮ್ಯಗ್ದರ್ಶನ ಪ್ರಾಪ್ತ ಮಾಡಲೇ ಇಲ್ಲ. ಅದರಿಂದ ಸಂಸಾರದ ತಿರುಗುವಿಕೆ ನಿಲ್ಲಲಿಲ್ಲ. ಮೋಕ್ಷಪ್ರಾಪ್ತಿ ಆಗಲಿಲ್ಲ.

ಇಲ್ಲಿ ಉಪಸ್ಥಿತ 'ಸುಖದ ಕೀಲಿಕೈ' ಆತ್ಮನನ್ನು ಪ್ರಾಪ್ತ ಮಾಡಿಕೊಳ್ಳುವ ಒಂದು ಬಹಳ ವೇಧಕ ನಿರ್ದಿಷ್ಟ ಮತ್ತು ನೇರವಾದ ಉಪಾಯವಾಗಿದೆ. ಲೇಖಕ ಶ್ರೀ ಜಯೇಶ ಭಾಈ ಸೇಠ ಇವರು ಉದ್ಯೋಗದಿಂದ ಚಾರ್ಟೆಡ್ ಅಕೌಂಟಂಟ ಇದ್ದಾರೆ. ಅವರು ತಮ್ಮ ಎಷ್ಟೋ ವರ್ಷಗಳ ಸ್ವಾಧ್ಯಾಯ, ಚಿಂತನ, ಮನನ, ಅಭ್ಯಾಸ ಮತ್ತು ಅನುಭವಗಳನ್ನು ಆಚರಣೆಯಲ್ಲಿ ತಂದ ಬಳಿಕ, ಮಾನವ ಸಮಾಜದ ಕಲ್ಯಾಣಾರ್ಥ ಕರುಣಾ ಭಾವ ಮಾಡಿ ಶಾಸ್ತ್ರಗಳಲ್ಲಿ ತೋರಿಸಿದ ಸನಾತನ ಸತ್ಯದ ಮೂಲಕ ಆತ್ಮಪ್ರಾಪ್ತಿಯ ಸರಳ ಮಾರ್ಗವನ್ನು ತೋರಿಸಿದ್ದಾರೆ.

ಎಷ್ಟೋ ಆಗಮ ಗ್ರಂಥಗಳನ್ನು ಓದುತ್ತಿದ್ದರೂ, ಪುಸ್ತಕಗಳನ್ನು ಓದುತ್ತಿದ್ದರೂ ವ್ಯಾಖ್ಯಾನ ಕೇಳುತ್ತಿದ್ದರೂ, ಮಾಡುತ್ತಿದ್ದರೂ ಮನಸ್ಸಿನಲ್ಲಿ

ಎಷ್ಟೋ ಪ್ರಶ್ನೆಗಳು ಮೂಡತೊಡಗಿದವು. ಆಗಾಗ ಅನೇಕ ಮತಗಳ ಕಾರಣ ಮೂಲ ಸಿದ್ಧಾಂತಗಳು ವಿಸ್ಮರಣೆಯಾಗುತ್ತವೆ ಮತ್ತು ವಿಷಯಾಂತರ ಹಾಗೂ ವಿವಾದಗಳಲ್ಲಿ ಮುಖ್ಯ ಮಾತುಗಳನ್ನು ಮರೆತು ಬಿಡುತ್ತಾರೆ. ಲೇಖಕರ ಭಾವನೆಯಿದೆ ಏನೆಂದರೆ ಈ ವಿಶ್ವದ ಪ್ರತಿಯೊಂದು ಜೀವವು ಸುಖಿಯಾಗಲಿ ಎಂದು ಭಾವಿಸಿ ಸುಖದ ಶಾಶ್ವತ ಸಿದ್ಧಾಂತಗಳನ್ನು ಅವರು ಸಂಕ್ಷಿಪ್ತ, ಸರಳ ಮತ್ತು ತಿಳಿಯುವ ಭಾಷೆಯಲ್ಲಿ ಸಂಗ್ರಹಿಸಿ ತಿಳಿಸಿದ್ದಾರೆ.

ಇಂಗ್ಲೀಷಿನಲ್ಲಿ ಒಂದು ಗಾದೆ ಇದೆ. ಏನೆಂದರೆ ಸಫಲ ವ್ಯಕ್ತಿ ಸ್ವಲ್ಪವೂ ಹೊಸದನ್ನು ಮಾಡುವದಿಲ್ಲ. ಯಾವ ಮೂಲಭೂತ ನಿಯಮ ಮತ್ತು ಸಿದ್ಧಾಂತಗಳಿವೆ ಅವನ್ನೇ ನಿಯಮಿತ ರೂಪದಿಂದ ತಮ್ಮ ಜೀವನದಲ್ಲಿ ಇಳಿಸಿಕೊಂಡವರು ಯಶಸ್ವಿಯಾಗುತ್ತಾರೆ. ಇದೇ ನ್ಯಾಯದಿಂದ ತಾವು 'ಸುಖಿಯಾಗುವ ಕೀಲಿಕೈ' ಇದರ ಪುರಾತನದ ಮಾತುಗಳನ್ನು ಜೀವನದಲ್ಲಿ ಇಳಿಸಿಕೊಳ್ಳಿರಿ ಮತ್ತು ಭವಸಾಗರ ಚಕ್ರದಿಂದ ಉಳಿದುಕೊಳ್ಳಿರಿ.

ಭಗವಾನರ ಕೃಪೆ, ಲೇಖಕರ ಕರುಣೆ ಮತ್ತು ತಮ್ಮ ಅಹೋಭಾಗ್ಯದಿಂದ ನಮಗೆ ಈ ಭವಭವದ ಚಕ್ರವ್ಯೂಹವನ್ನು ಭೇದಿಸುವಂತಹ ಸಹಜ-ಸರಳ ಕೀಲಿಕೈ ಇದು, ಸಾಮಾನ್ಯ ಮನುಷ್ಯರಿಗೂ ಸಹ ತಿಳಿವಳಿಕೆಯಲ್ಲಿ ಬರುತ್ತದೆ. ಇಂತಹ ಭಾಷಾ ಮತ್ತು ಶೈಲಿಯಲ್ಲಿ ಪ್ರಾಪ್ತವಾಗಿರುತ್ತದೆ. ಯಾವಾಗ ಈ ಕೀಲಿಕೈಯಿಂದ ಪ್ರತಿಯೊಬ್ಬ ಓದುಗನು ತಮ್ಮ ಆತ್ಮನನ್ನು ಭವರೂಪಿ ಬಂಧನವನ್ನು ಈ ಕೀಲಿಕೈಯಿಂದ ಮುಕ್ತಗೊಳಿಸಿಕೊಳ್ಳಬೇಕು. ಆಗ ಲೇಖಕರ ಪ್ರಯತ್ನವು ಸಫಲವಾಗುವದು. ನಿತ್ಯ ಸ್ವಾಧ್ಯಾಯ, ಮನನ, ಚಿಂತನ ಮತ್ತು ಪಾಲಿಸುವದರಿಂದ ಏನು ಅಸಂಭವವಿದೆ ? ಸ್ವಲ್ಪವೂ ಅಸಂಭವ ಇಲ್ಲ.

ಒಂದು ವೇಳೆ ಒಂದು ಕಪ್ಪೆ ಮತ್ತು ಒಂದು ಸಿಂಹ ಇವು ಎರಡೂ ಸಮ್ಯಗ್ದರ್ಶನ ಪ್ರಾಪ್ತ ಮಾಡಿಕೊಂಡು ಮೋಕ್ಷಗಾಮಿ ಆಗಿರುತ್ತವೆ. ಆದರೆ ವಿವೇಕ ಸಹಿತ ಐದು ಇಂದ್ರಿಯಗಳುಳ್ಳ ನಾವು ಅರ್ಥಾತ್ ಮನುಷ್ಯನು ಒಂದು ಪಕ್ಕ ಹಾಗೂ ಸರಿಯಾದ ನಿರ್ಣಯ ತೆಗೆದುಕೊಂಡು ಸಮ್ಯಗ್ದರ್ಶನ ಪ್ರಾಪ್ತ ಮಾಡಿಕೊಂಡು ಮೋಕ್ಷ ಮಾರ್ಗಿ ಆಗುವದಿಲ್ಲವೇ ? ಅವಶ್ಯವಾಗಿ ಆಗುತ್ತಾರೆ.

ಆದರೆ ಮುಂದೆ ವಿಚಾರಿಸಿರಿ, ಚಿಂತನೆ ಮಾಡಿರಿ ಮತ್ತು ನಿಮ್ಮದನ್ನಾಗಿ ಮಾಡಿಕೊಳ್ಳಿರಿ. ಈ 'ಸುಖಿಯಾಗುವ ಕೀಲಿಕೈ' ಇದನ್ನು ಬಳಸಿ ಅದರಿಂದ ಮೋಕ್ಷಮಾರ್ಗ ಮತ್ತು ಕೊನೆಯಲ್ಲಿ ಮೋಕ್ಷವನ್ನು ಪಡೆದು ಅನಂತ ಅವ್ಯಾಬಾಧ ಸುಖವನ್ನು ಸಹ ಪ್ರಾಪ್ತ ಮಾಡಿಕೊಳ್ಳಿರಿ. ಇದೇ ಭಾವನೆಯೊಂದಿಗೆ ನಾವು ತಮ್ಮ ಆಜ್ಞೆಯನ್ನು ಪಡೆಯುತ್ತೇವೆ.

**ಜಿತೇಂದ್ರ ಶಾಂತಿಲಾಲ ಶಾಹ** **ಸಿ.ಎ. ಮುಕೇಶ ಪೂನಮಚಂದ ಶಾಹ**
**ಶೈಲೇಶ ಪೂನಮಚಂದ ಶಾಹ** **ಜಯಕಲಾ ನಲಿನ ಗಾಂಧಿ**
**ನಮಿತಾ ರಸೇಶ ಶಾಹ**

# ಲೇಖಕರ ಹೃದಯೋದ್ಗಾರ

ಈ ಪುಸ್ತಕವು ಆಧ್ಯಾತ್ಮಿಕ ಕ್ರಾಂತಿಯನ್ನುಂಟು ಮಾಡುವ ಸಲುವಾಗಿ ಬರೆಯಲಾಗಿದೆ. ಏಕೆಂದರೆ ಈ ಕಾಲದಲ್ಲಿ ಜೈನಸಮಾಜವು ಎರಡು ವಿಭಾಗಗಳಲ್ಲಿ ವಿಭಾಗವಾಗಿದೆ. ಅವುಗಳಲ್ಲಿಂದ ಒಂದು ವಿಭಾಗವು ಕೇವಲ ವ್ಯವಹಾರ ನಯವನ್ನೇ ಮಾನ್ಯ ಮಾಡುತ್ತದೆ. ಕೇವಲ ಅದಕ್ಕೇನೇ ಪ್ರಾಮುಖ್ಯತೆ ಕೊಡುತ್ತಾರೆ ಮತ್ತು ಕೇವಲ ಅದರಿಂದಲೇ ಮೋಕ್ಷ ಎಂದು ಮನ್ನಿಸುತ್ತಾರೆ. ಆದರೆ ಎರಡನೇ ವಿಭಾಗ ಮಾತ್ರ ನಿಶ್ಚಯ ನಯವನ್ನೇ ಮಾನ್ಯ ಮಾಡುತ್ತದೆ. ಕೇವಲ ಅದಕ್ಕೇನೇ ಪ್ರಾಮುಖ್ಯತೆ ಕೊಡುತ್ತಾರೆ ಮತ್ತು ಕೇವಲ ಅದರಿಂದಲೇ ಮೋಕ್ಷ ಎಂದು ಮನ್ನಿಸುತ್ತಾರೆ. ಆದರೆ ನಿಜವಾಗಿಯೂ ಮೋಕ್ಷಮಾರ್ಗವು ನಿಶ್ಚಯ ವ್ಯವಹಾರದ ಯೋಗ್ಯ ಕೂಡುವಿಕೆಯಲ್ಲಿಯೇ ಇರುವದು. ಈ ಮಾತು ಕೇವಲ ಕೆಲವೇ ವಿರಳ ಜನರು ತಿಳಿದಿರುತ್ತಾರೆ. ಇದೇ ಮಾತನ್ನು ಈ ಪುಸ್ತಕದಲ್ಲಿ ತಿಳಿಸುವಂತಹ ಪ್ರಯತ್ನ ಮಾಡಲಾಗಿದೆ.

ಈಗ ಜೈನ ಸಮಾಜದಲ್ಲಿ ಪರಿವರ್ತಿತಗೊಂಡ ತತ್ವಸಂಬಂಧಿ ತಪ್ಪು ತಿಳಿವಳಿಕೆಯನ್ನು ದೂರ ಮಾಡುವದರ ಸಲುವಾಗಿ ನಾವು ತಮ್ಮ ಆತ್ಮನ ಅನುಭೂತಿಪೂರ್ವಕ ವಿಚಾರ ಮಾಡಿ ಶಾಸ್ತ್ರಗಳ ಆಧಾರ ಸಹಿತ ಈ ಪುಸ್ತಕದಲ್ಲಿ ಪ್ರಸ್ತುತ ಮಾಡಿದ್ದೇವೆ. ಇವುಗಳ ವಿಚಾರ-ಚಿಂತನ-ಮನನ ತಾವು ತೆರೆದ ಮನಸ್ಸಿನಿಂದ ಮತ್ತು 'ಯಾವದು ಉತ್ತಮವಿದೆ ಅದು ನನ್ನದು' ಮತ್ತು 'ಯಾವುದು ಸತ್ಯವಿದೆ ಅದು ನನ್ನದು' ಹೀಗೆ ಯೋಗ್ಯವಾದುದನ್ನು ನಮ್ಮದನ್ನಾಗಿ ಮಾಡಿಕೊಳ್ಳೋಣ. ಆದರೆ ಅವಶ್ಯವಾಗಿಯೇ ತಾವೂ ಸಹ ಪರಮತತ್ವದ ಪ್ರಾಪ್ತಿಯನ್ನು ಮಾಡುವಿರಿ ಎಂದು ನಮಗೆ ಪೂರ್ಣ ವಿಶ್ವಾಸವಿದೆ.

ನನಗೆ ಸಣ್ಣ ವಯಸ್ಸಿನಿಂದಲೇ ಸತ್ಯದ ಶೋಧ ಮಾಡಬೇಕಾಗಿತ್ತು ಮತ್ತು ಅದರ ಸಲುವಾಗಿ ಎಲ್ಲ ದರ್ಶನಗಳ ಅಭ್ಯಾಸ ಮಾಡಿದೆನು.

ಕೊನೆಯಲ್ಲಿ ಜೈನದರ್ಶನದ ಅಭ್ಯಾಸದ ನಂತರ 1999ರಲ್ಲಿ 38 ವರ್ಷ ವಯಸ್ಸಿನಲ್ಲಿ ನನಗೆ ಸತ್ಯದ ಪ್ರಾಪ್ತಿಯಾಯಿತು. ಅಂದರೆ ಅದರ ಅನುಭವ / ಸಾಕ್ಷಾತ್ಕಾರವಾಯಿತು. ತದನಂತರ ಜೈನಶಾಸ್ತ್ರಗಳನ್ನು ಪುನಃ ಪುನಃ ಸ್ವಾಧ್ಯಾಯ ಮಾಡುತ್ತ ಅನೇಕ ಸಲ ಸತ್ಯದ ಅರ್ಥಾತ್ ಶುದ್ಧಾತ್ಮನ ಅನುಭವವಾಯಿತು. ಇದರದೇ ವಿಧಿಯನ್ನು ಈ ಪುಸ್ತಕದಲ್ಲಿ ಎಲ್ಲರ ಲಾಭಾರ್ಥವಾಗಲಿ ಎಂಬ ಭಾವನೆಯಿಂದ ಪ್ರಯತ್ನ ಮಾಡಲಾಗಿದೆ.

ನಾವು ಯಾವುದೇ ಮತ-ಪಂಥದಲ್ಲಿ ಇರುವದಿಲ್ಲ. ನಾವು ಕೇವಲ ಆತ್ಮನಲ್ಲಿ ಇದ್ದೇವೆ. ಆದ್ದರಿಂದ ಇಲ್ಲಿ ನಾವು ಯಾವುದೇ ಮತ-ಪಂಥದ ಪ್ರತಿಪಾದನ ಅಥವಾ ಖಂಡಿಸುವಿಕೆ ಮಾಡದೇ ಕೇವಲ ಆತ್ಮಾರ್ಥಿಗೆ ಯಾವದು ಉಪಯೋಗಿ ಇದೆಯೋ ಅದೇ ಸಾಮಗ್ರಿಗಳನ್ನು ನೀಡುವ ಪ್ರಯತ್ನ ಮಾಡಿದ್ದೇವೆ. ಆದ್ದರಿಂದ ಬುದ್ಧಿವಂತ ಪಾಠಕರು ಇದೇ ಅಪೇಕ್ಷೆಯಿಂದ ತಿಳಿಯಿರಿ. ಹೀಗೆ ನಮ್ಮ ನಿವೇದನವಿದೆ.

ಈ ಪುಸ್ತಕದ ವಿಷಯದ ಕುರಿತು ಸಾಮಾನ್ಯ ಮತ್ತು ವಿದ್ವಜ್ಜನರ ಕಡೆಯಿಂದ ಉತ್ಕೃಷ್ಟ ಅಭಿಪ್ರಾಯ ಪ್ರಾಪ್ತವಾಗಿದೆ ಮತ್ತು ಈ ಪುಸ್ತಕದ ಹದಿನಾರನೆಯ ಆವೃತ್ತಿ ಪ್ರಕಾಶಿತಗೊಳಿಸುತ್ತಿದ್ದೇವೆ. ಆದ್ದರಿಂದ ನಾವು ಆ ಎಲ್ಲರ ಕುರಿತು ಹೃದಯಪೂರ್ವಕ ಆಭಾರ ಮನ್ನಿಸುತ್ತೇವೆ. ಪುಸ್ತಕ ತಯಾರ ಮಾಡುವಲ್ಲಿ ಪ್ರಕಾಶಿತಗೊಳಿಸುವಲ್ಲಿ ಹಾಗೂ ವಿತರಿಸುವಲ್ಲಿ ಅನೇಕ ಜನರು ಬೇರೆ ಬೇರೆ ಪ್ರಕಾರದಿಂದ ಸಹಯೋಗ ನೀಡಿದ್ದಾರೆ. ನಾವು ಆ ಎಲ್ಲರಿಗೆ ಋಣಿ ಇದ್ದೇವೆ. ಆದ್ದರಿಂದ ನಾವು ಆ ಎಲ್ಲರಿಗೆ ಆಭಾರ ಮನ್ನಿಸುತ್ತೇವೆ.

ನಮ್ಮ ಆತ್ಮನ ಅನುಭೂತಿಪೂರ್ವಕ ವಿಚಾರಗಳನ್ನು ತಾವು ಪರೀಕ್ಷೆ ಮಾಡಿ ಮತ್ತು ಇಲ್ಲಿ ಕೊಡಲ್ಪಟ್ಟ ಶಾಸ್ತ್ರಗಳ ಆಧಾರದಿಂದ ಸ್ವೀಕಾರ ಮಾಡಿ ಸಮ್ಯಗ್ದರ್ಶನ ಪ್ರಕಟ ಮಾಡಿಕೊಳ್ಳಿರಿ. ಅದರಿಂದ ತಾವೂ ಸಹ ಧರ್ಮರೂಪವಾಗಿ ಪರಿಣಮಿಸಿದರೆ ಮತ್ತು ಮೋಕ್ಷ ಮಾರ್ಗದ ಮೇಲೆ ಮುಂದುವರಿದು ಕೊನೆಯಲ್ಲಿ ಸಿದ್ಧತ್ವವನ್ನು ಪ್ರಾಪ್ತ ಮಾಡಿರಿ. ಇದೇ ಪ್ರಾರ್ಥಿಸುವಿಕೆಯೊಂದಿಗೆ......

ಪುಸ್ತಕದಲ್ಲಿ ತಿಳಿದೋ ತಿಳಿಯದೆಯೋ ನನ್ನಿಂದ ಕೆಲವಾದರೂ ಸಹ ಜಿನಾಜ್ಞೆಯ ವಿರುದ್ಧ ಬರೆದಿದ್ದರೆ ಅದಕ್ಕಾಗಿ ನಾನು ಮನ, ವಚನ, ಕಾಯದಿಂದ ಮಿಚ್ಛಾಮಿ ದುಕ್ಕಡಂ ಹೇಳುತ್ತೇವೆ.

ದಿನಾಂಕ 11–5–2022 **ಜಯೇಶ ಮೋಹನಲಾಲ ಸೇಠ**
ಮುಂಬೈ

# ಅನುವಾದಕರ ಅನಿಸಿಕೆ

ಈ ಜೀವನು ಬಹಳ ಕಾಲದಿಂದಲೂ ದೇವ, ಗುರು, ಶಾಸ್ತ್ರ ಹಾಗೂ ಧರ್ಮದ ಆರಾಧನೆ ಮಾಡುತ್ತಲೇ ಬಂದಿದ್ದಾನೆ. ಇಷ್ಟೇ ಏಕೆ ಅನೇಕ ಸಲ ದೀಕ್ಷೆಯನ್ನು ಕೂಡಾ ಸ್ವೀಕರಿಸಿದ್ದಾನೆ. ಆದರೆ ಇವತ್ತಿಗೂ ಮೋಕ್ಷಮಾರ್ಗದ ಮೇಲೆ ಆರೂಢನಾಗೇ ಇಲ್ಲ. ಕಾರಣ ಒಂದೇ ಇದೆ. ಸಮ್ಯಗ್ದರ್ಶನದ ಅಭಾವದಿಂದ.

'ಸುಖದ ಕೀಲಿಕೈ' ಎಂಬ ಈ ಚಿಕ್ಕ ಕೃತಿಯಲ್ಲಿ ಲೇಖಕರಾದ ಶ್ರೀ ಸಿ.ಎ. ಜಯೇಶ ಮೋಹನಲಾಲ ಸೇಠ ಮುಂಬಯಿ ಇವರು ಅನೇಕ ಗ್ರಂಥಗಳ ಅಧ್ಯಯನ ಮಾಡಿ ಸಮ್ಯಗ್ದರ್ಶನದ ಪ್ರಾಪ್ತಿಯ ಉಪಾಯವನ್ನು ಸಂಕ್ಷಿಪ್ತ ಹಾಗೂ ಸುಲಭವಾಗಿ ತಿಳಿಸಿದ್ದಾರೆ. ಇದನ್ನು ಕನ್ನಡೀಕರಿಸಿ ಕನ್ನಡನಾಡಿನ ಜನತೆಗೆ ತಿಳಿಸಲು ಅವರು ಕೇಳಿಕೊಂಡ ಕಾರಣ ನಾವು ಅದಕ್ಕೆ ಒಪ್ಪಿ ಈ ಕೆಲಸ ಮಾಡಿದ್ದೇನೆ.

ಇನ್ನು ಈ ಕೃತಿಯನ್ನು ವಿಜಯಪುರದ ಖ್ಯಾತ ವಕೀಲರಾದ ಶ್ರೀ ಶಾಂತಿನಾಥ ಗುಣಧರ ಮುತ್ತಿನ ಇವರು ಪ್ರಕಾಶಪಡಿಸುತ್ತಿದ್ದಾರೆ. ಲೇಖಕರಿಗೂ ಪ್ರಕಾಶಕರಿಗೂ ಓದುಗರಿಗೂ, ಎಲ್ಲರಿಗೂ ಮತ್ತು ಸ್ವಲ್ಪ ಸಮಯದಲ್ಲಿ ಸುಂದರವಾಗಿ ಮುದ್ರಿಸಿಕೊಟ್ಟ ಶ್ರೀ ರವೀಂದ್ರ ಆಕಳವಾಡಿ ಮನೋಹರ ಮುದ್ರಣಾಲಯ, ಧಾರವಾಡ ಇವರಿಗೂ ಇವರ ಸಿಬ್ಬಂದಿಯವರಿಗೂ ಹಾರ್ದಿಕ ಅಭಿನಂದನೆಗಳು.

**ಬ್ರ. ಶ್ರೀ ರತನಚಂದ ನೇಮಿನಾಥ ಕೋಟಿ** ಎಂ.ಎ.
ಇಂಡಿ, ಜಿ. ವಿಜಯಪುರ

# ಪ್ರಕಾಶಕರ ಪರಿಚಯ

ವಿಜಯಪುರ ಜಿಲ್ಲೆ ಚಡಚಣದಲ್ಲಿ ಹಿಂದೆ ಶ್ರೀ ತವನಪ್ಪ ಲೋಕಪ್ಪ ಮುತ್ತೀನ ಹಾಗೂ ಶ್ರೀಮತಿ ಹೀರಾಬಾಯಿ ತವನಪ್ಪ ಮುತ್ತೀನ ದಂಪತಿಗಳಿದ್ದರು. ಇವರಿಗೆ ಗುಣಧರ ಉರ್ಫ ಅಪ್ಪಾಸಾಹೇಬ ತವನಪ್ಪ ಮುತ್ತೀನ ಎಂಬ ಮಗ ಜನಿಸಿದನು. ದೊಡ್ಡವರಾದ ಬಳಿಕ ಇವರ ಜೀವನದಲ್ಲಿ ಕುಸುಮಾವತಿಯವರು ಧರ್ಮಪತ್ನಿಯಾಗಿ ಬಂದರು. ಈ ದಂಪತಿಗಳಿಗೆ ಜೈನಧರ್ಮದ ಕುರಿತು ಅಪಾರ ಶ್ರದ್ಧೆ, ಭಕ್ತಿ ಇತ್ತು. ಗುಣಧರರು ಜಮೀನುದಾರರಾಗಿದ್ದರು. ಹೀಗಾಗಿ ಒಕ್ಕಲುತನ ಹಾಗೂ ಭಾಂಡಿಯ ವ್ಯಾಪಾರದಲ್ಲಿ ತೊಡಗಿದರು. ದೀನದಲಿತರ ಬಗ್ಗೆ ಕನಿಕರ ಉಳ್ಳವರಾಗಿದ್ದರು. 1970 ರಲ್ಲಿ ಬರಗಾಲ ಬಿದ್ದಾಗ ಬಡವರಿಗಾಗಿ ಎರಡು ಕಡೆ ಗಂಜೀಕೇಂದ್ರಗಳನ್ನು ಪ್ರಾರಂಭಿಸಿದ್ದರು. ದನಕರುಗಳಿಗಾಗಿ ಆಗ 50 ಸಾವಿರ ರೂ. ಬೆಲೆಯುಳ್ಳ ಮೇವನ್ನು ತರಿಸಿ ಬಡವರಿಗಾಗಿ ಪುಕ್ಕಟೆಯಾಗಿ ಹಂಚಿ ಮೂಕ ಪ್ರಾಣಿಗಳ ಮೇಲೆ ದಯೆ ತೋರಿದರು. ಇವರಿಗೆ ಶ್ರೀಮತಿ ಪದ್ಮಾವತಿ ನಂದಕುಮಾರ ಲೇಂಗಡೆ, ಬೆಳಗಾಂವ; ವಿಜಯಮಾಲಾ ಎಫ್., ಇಂಗ್ಲಂಡ; ವರ್ಧಮಾನ ಗುಣಧರ ಮುತ್ತೀನ ಚಡಚಣ; ಶಾಂತಿನಾಥ ಗುಣಧರ ಮುತ್ತೀನ ವಕೀಲರು, ವಿಜಯಪುರ; ಸೌ. ಮಾಧುರಿ ಶೀತಲ ಕಬ್ಬಿನ ಗೋಕಾಕ ಹೀಗೆ ಐವರು ಮಕ್ಕಳಾದರು. ಸೌ. ಕುಸುಮಾವತಿಯವರು ಣಮೋಕಾರ ಮಂತ್ರದ ಒಂದು ಲಕ್ಷ ಜಪ ಮಾಡಿದ್ದಾರಲ್ಲದೆ ಕುಂಕುಮ ನೋಂಪಿ, ಹುಣ್ಣಿಮೆ ನೋಂಪಿ, ಫಲ ಮಂಗಳವಾರ ನೋಂಪಿ, ಗುಳ್ಳವ್ವನ ನೋಂಪಿ, ನಾಗಪಂಚಮಿ ನೋಂಪಿ, ಸಂಪತ್ತು ಶುಕ್ರವಾರ ನೋಂಪಿ, ರವಿವಾರ ನೋಂಪಿ, ಜಿನರಾತ್ರಿ ನೋಂಪಿ, ನಿರ್ದೋಷ ಸಪ್ತಮಿ ನೋಂಪಿ, ಸುಗಂಧ ದಶಮಿ ನೋಂಪಿ, ಸೂತಕ ಪರಿಹಾರ ನೋಂಪಿ, ಅನಂತ ವ್ರತ ನೋಂಪಿ, ಷೋಡಶ ಭಾವನೆ ನೋಂಪಿ, ದಶಲಕ್ಷಣ ನೋಂಪಿ, ಪಂಚಮೇರು ನೋಂಪಿ, ಆಕಾಶ ಪಂಚಮಿ ನೋಂಪಿ, ಭಕ್ತಾಮರ,

ಉಪವಾಸ ಮಾಡಿದ್ದಾರೆ. ಸಿದ್ಧಕ್ಷೇತ್ರ ಸಮ್ಮೇದ ಶಿಖರಜಿ ಹಾಗೂ ಅನೇಕ ಕ್ಷೇತ್ರಗಳ ದರ್ಶನ ಮಾಡಿದ್ದಾರೆ.

ಇವರಿಂದ ಸುಸಂಸ್ಕಾರ ಪಡೆದ ಎಲ್ಲ ಮಕ್ಕಳೂ ಧಾರ್ಮಿಕ ಭಾವನೆಯಿಂದ ಜೀವನ ಸಾಗಿಸಿದ್ದಾರೆ. ವಿಶೇಷವಾಗಿ ಶ್ರೀ ಶಾಂತಿನಾಥರು ಖ್ಯಾತ ವಕೀಲರಾಗಿದ್ದು ವಿಜಯಪುರದಲ್ಲಿ ವಾಸವಾಗಿದ್ದಾರೆ. ಯಾವಾಗಲೂ ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸುತ್ತಾರೆ. ಆದಿನಾಥ ಮಂದಿರ ಮುಳ್ಳಗಸಿ, ವಿಜಯಪುರದ ಟ್ರಸ್ಟಿಯಾಗಿದ್ದಾರೆ. ಜೈನಮಿಲನ ವಿಜಯಪುರ ಶಾಖೆಯ ಅಧ್ಯಕ್ಷರಾಗಿ ಮೂರು ಬಾರಿ ಸೇವೆ ಸಲ್ಲಿಸಿದ್ದಾರೆ. ಆ ಸಂದರ್ಭದಲ್ಲಿ ಡಾ. ಕೆಂಭಾವಿ ನೇತ್ರ ತಜ್ಞರ ನೇತೃತ್ವದಲ್ಲಿ ಉಚಿತವಾಗಿ ಕಣ್ಣಿನ ಶಿಬಿರ ನಡೆಸಿದ್ದಾರೆ. ಇನ್ನಿತರ ಸಾಮಾಜಿಕ ಕಾರ್ಯಗಳನ್ನು ಜೈನಮಿಲನ ಶಾಖೆಯ ವತಿಯಿಂದ ಮಾಡಿದ್ದಾರೆ. ಚಡಚಣದಲ್ಲಿ ಎಲ್‌ಕೆಜಿ, ಯುಕೆಜಿ ಶಾಲೆಯನ್ನು 2016ನೇ ಸಾಲಿನಿಂದ ನಡೆಸಿಕೊಂಡು ಬಂದಿದ್ದಾರೆ. ಮಹಾವೀರ ಜಯಂತಿಯಂದು ಆಸ್ಪತ್ರೆಯಲ್ಲಿಯ ರೋಗಿಗಳಿಗೆ ಹಣ್ಣುಗಳನ್ನು ಹಂಚಿದ್ದಾರೆ. 2008 ಫೆಬ್ರುವರಿಯಲ್ಲಿ ಜರುಗಿದ ಸಹಸ್ರಫಣಿ ಪಾರ್ಶ್ವನಾಥ ಜಿನಮಂದಿರ ವಿಜಯಪುರ ಇದರ ಪಂಚಕಲ್ಯಾಣ ಪ್ರತಿಷ್ಠಾ ಮಹೋತ್ಸವದಲ್ಲಿ ಕೃತಕ ಕಾಲು ಜೋಡಣಾ ಶಿಬಿರದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಿದ್ದಾರೆ. ಇವರ ಧರ್ಮಪತ್ನಿಯವರ ಹೆಸರು ಸುನಿತಾ ಇದ್ದು 8 ವರ್ಷದ ಮಗಳು ಪಾರ್ಥವಿ ಕಲಿಯುತ್ತಿದ್ದಾಳೆ.

ಇವರ ಹಿರಿಯ ಅಕ್ಕ ಶ್ರೀಮತಿ ಪದ್ಮಾವತಿಯವರು ಸಹ ತಾಯಿಯವರಂತೆ ಹದಿನಾಲ್ಕು ನೋಂಪಿಗಳನ್ನು ಬೆಳಗಿದ್ದಾರೆ. ಧಾರ್ಮಿಕ ಮನೋಭಾವ ಹೊಂದಿದ್ದು ಎಲ್ಲರಿಗೂ ತ್ಯಾಗಿಗಳೆಂದರೆ ಪಂಚಪ್ರಾಣ. ದೇವ–ಗುರು–ಶಾಸ್ತ್ರಗಳಲ್ಲಿ ಅಪಾರ ಶ್ರದ್ಧಾಭಕ್ತಿಯುಳ್ಳವರು.

1955ನೇ ಸಾಲಿನಲ್ಲಿ ವ್ಯಾಖ್ಯಾನ ಕೇಸರಿ ಆಚಾರ್ಯ ಶ್ರೀ 108 ಪಾಯಸಾಗರ ಮಹಾರಾಜರು ಚಡಚಣಕ್ಕೆ ಆಗಮಿಸಿದಾಗ ಎರಡು ತಿಂಗಳುಗಳ ಕಾಲ ಇವರ ಮನೆಯಲ್ಲಿಯೇ ವಿರಾಜಮಾನರಾಗಿದ್ದರು. ಆಗ ಅವರ ಸೇವೆ, ಭಕ್ತಿ, ಅಪಾರವಾಗಿ ಮಾಡಿದ್ದಾರೆ. ಊರ ಹೊರಗೆ

ಭವ್ಯ ಪೆಂಡಾಲ ಹಾಕಿತ್ತು. ಅಲ್ಲಿ ಉಪದೇಶ ನೀಡುತ್ತಿದ್ದರು. ಜೈನ ಜೈನೇತರರು ಆಗಮಿಸಿ ಮುನಿಗಳ ಉಪದೇಶ ಕೇಳಿ ಪುನೀತರಾಗುತ್ತಿದ್ದರು.

ಶ್ರೀ ಶಾಂತಿನಾಥ ಮುತ್ತೀನ ವಕೀಲರು ಸಿವಿಲ್ ಮತ್ತು ಕ್ರಿಮಿನಲ್ ವಕಾಲತ್ತು ಮಾಡುತ್ತಿದ್ದು ಆರು ವರ್ಷಗಳ ಕಾಲ ಸ್ಟ್ಯಾಂಡಿಂಗ ಕೌನ್ಸಿಲ್ ಎಂದು ಕೋರ್ಟಿನವರು ಇವರನ್ನು ನೇಮಕ ಮಾಡಿದಾಗ ಉತ್ತಮ ರೀತಿಯಿಂದ ಆ ಸೇವೆ ಸಲ್ಲಿಸಿ ಹೆಸರು ಪಡೆದಿದ್ದಾರೆ. ಇದಲ್ಲದೆ ಇವರು ಕರ್ನಾಟಕ ಬ್ಯಾಂಕ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕೆನರಾ ಬ್ಯಾಂಕ ವಿಜಯಪುರ, ಗ್ರಾಮೀಣ ಬ್ಯಾಂಕ್ ಹಾಗೂ ಕಲ್ಯಾಣ ಕರ್ನಾಟಕ ಸಾರಿಗೆ ಇಲಾಖೆ, ಹೆಸ್ಕಾಂ ಹಾಗೂ ವಿಜಯಪುರ ಇವುಗಳ ಲೀಗಲ್ ಅಡ್ವೈಜರ್ (ಕಾನೂನು ಸಲಹೆಗಾರರು) ಅಂತಾ ಸೇವೆ ಸಲ್ಲಿಸುತ್ತಿದ್ದಾರೆ. ಸಿವಿಲ್ ಹಾಗೂ ಕ್ರಿಮಿನಲ್ ಕೇಸುಗಳಲ್ಲಿ ಜನರಿಗೆ ಸರಿಯಾಗಿ ನ್ಯಾಯ ಒದಗಿಸಿಕೊಟ್ಟು ಜನಪ್ರಿಯರಾಗಿದ್ದಾರೆ. ಮೂವತ್ತು ವರ್ಷಗಳಿಂದ ಸಹಕಾರಿ ಸಂಘಗಳ ಆರ್ಬಿಟ್ರೇಟರ್ ಎಂದು ಕೆಲಸ ಮಾಡುತ್ತಿದ್ದಾರೆ.

ಶ್ರೀ ಶಾಂತಿನಾಥ ಮುತ್ತೀನ ವಕೀಲರಿಂದ ಇನ್ನೂ ಹೆಚ್ಚಿನ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಸೇವೆಗಳು ಸಮಾಜಕ್ಕೆ ಲಭ್ಯವಾಗಲಿ ಎಂದು ಹಾರೈಸುತ್ತೇವೆ.

**ಬ್ರ. ಶ್ರೀ ರತನಚಂದ ನೇಮಿನಾಥ ಕೋಟಿ** ಎಂ.ಎ.

ವಿಜಯಪುರ

ಶ್ರೀ ಅಷ್ಟಮ ನಂದೀಶ್ವರ ಅತಿಶಯ ಕ್ಷೇತ್ರ
ದೇವಲಾಪುರ, ತಾ. ಬೈಲಹೊಂಗಲ ಜಿ. ಬೆಳಗಾವಿ

# ಪರಿವಿಡಿ

| | | |
|---|---|---|
| ೧. | ಸುಖಿಯಾಗುವ ಕೀಲಿಕೈ | ೧೭ |
| ೨. | ಪ್ರಾತಃಕಾಲ ಎದ್ದು..... | ೩೩ |
| ೩. | ಭಾವ ಪ್ರತಿಕ್ರಮಣ | ೪೪ |
| ೪. | ಸಮಾಧಿ ಮರಣದ ಚಿಂತನೆ | ೪೫ |
| ೫. | ಕಂದಮೂಲದ ಕುರಿತು | ೪೮ |
| ೬. | ರಾತ್ರಿಭೋಜನದ ಕುರಿತು | ೫೦ |
| ೭. | ಹನ್ನೆರಡು ಭಾವನೆಗಳು (ಅನುಪ್ರೇಕ್ಷೆಗಳು) | ೫೩ |
| ೮. | ನಿಸರ್ಗದ ನಿಯಮ - ಯುನಿವರ್ಸಲ್ ಲಾ... | ೭೦ |
| ೯. | ಜೈನ ನಿತ್ಯ ಜಪ ಸಂಗ್ರಹ | ೭೫ |







ಸೌ. ಮಾಧುರಿ ಶೀತಲ ಕಬ್ಬೀನ, ಗೋಕಾಕ, ಶ್ರೀಮತಿ ಪದ್ಮಾವತಿ ನಂದಕುಮಾರ ಲೇಂಗಡೆ, ಬೆಳಗಾವಿ, ಶ್ರೀಮತಿ ಕುಸುಮಾವತಿ ಗುಣಧರ ಮುತ್ತೀನ, ವಿಜಯಪುರ, ಸೌ. ವಿಜಯಾ ಎಫ್. ಹೋವೆ, ಇಂಗ್ಲಂಡ



ಶ್ರೀ ಶಾಂತಿನಾಥ ಗು. ಮುತ್ತೀನ, ವಕೀಲರು, ಸೌ. ಸುನೀತಾ ಶಾಂತಿನಾಥ ಮುತ್ತೀನ, ಮಗಳು - ಪಾರ್ಥವಿ ಶಾಂ. ಮುತ್ತೀನ, ವಿಜಯಪುರ




ಶ್ರೀ ಶಾಂತಿನಾಥ ಗು. ಮುತ್ತೀನ ವಕೀಲರು - ತಮ್ಮ ಆಫೀಸಿನಲ್ಲಿ



ಶ್ರೀ ಬ್ರಹ್ಮದೇವರು, ಸ್ಥವನಿಧಿ ಕ್ಷೇತ್ರ



ಮಾತೆ ಪದ್ಮಾವತಿದೇವಿ, ಹೊಂಬುಜ ಕ್ಷೇತ್ರ



ಆರ್ಯಿಕಾ ಸುನೀತಿಮತಿ



ಜೈನ ಮಿಲನ, ವಿಜಯಪುರ ಅಧ್ಯಕ್ಷರಾದಾಗ ಶ್ರೀ ಸುರೇಂದ್ರಕುಮಾರ ಹೆಗ್ಗಡೆ, ಧರ್ಮಸ್ಥಳ ಇವರಿಗೆ ಶ್ರೀ ಶಾಂತಿನಾಥ ಮುತ್ತಿನ ಇವರಿಂದ ಸನ್ಮಾನ



ಕೃತಕ ಕಾಲು ಜೋಡನಾ ಶಿಬಿರ, ವಿಜಯಪುರ (೨೦೦೨)



ಸರಕಾರೀ ಆಸ್ಪತ್ರೆಯಲ್ಲಿ ರೋಗಿಗಳಿಗೆ ಹಣ್ಣುಗಳನ್ನು ವಿತರಿಸಿದ್ದು



ಉಚಿತ ನೇತ್ರ ತಪಾಸಣೆ ಶಿಬಿರ, ವಿಜಯಪುರ

# ಸುಖಿಯಾಗುವ ಕೀಲಿಕೈ

ಮೊಟ್ಟಮೊದಲು ಪಂಚಪರಮೇಷ್ಠಿಗಳಿಗೆ ನಮಸ್ಕಾರ ಮಾಡಿ ನಾವು 'ಸುಖಿಯಾಗುವ ಕೀಲಿಕೈ'ಯ ವಿಷಯದಲ್ಲಿ ಬರೆಯುವ ಪ್ರಯತ್ನ ಮಾಡುತ್ತೇವೆ. ಏಕೆಂದರೆ ಎಲ್ಲ ಜೀವಗಳು ಸುಖವನ್ನೇ ಬಯಸುತ್ತವೆ. ದುಃಖದಿಂದಂತೂ ಎಲ್ಲರೂ ದೂರ ಇರಲು ಪ್ರಯತ್ನ ಮಾಡುತ್ತಾರೆ. ಸುಖವು ಎರಡು ಪ್ರಕಾರವಾಗಿರುತ್ತದೆ. ಒಂದು ಶಾರೀರಿಕ ಇಂದ್ರಿಯ ಜನಿತ ಸುಖ. ಇದು ಕ್ಷಣಿಕ ಇರುತ್ತದೆ ಮತ್ತು ಎರಡನೆಯದು ಆತ್ಮೀಕ ಸುಖ. ಇದು ಶಾಶ್ವತ ಸುಖವಿದೆ.

ಮೊದಲು ನಾವು ಶಾರೀರಿಕ, ಇಂದ್ರಿಯ ಜನಿತ ಸುಖದ ವಿಷಯದಲ್ಲಿ ಹೇಳುತ್ತೇವೆ. ಏಕೆಂದರೆ ಅದರಿಂದ ಎಲ್ಲ ಜೀವಗಳು ಚಿರಪರಿಚಿತ ಇವೆ. ಸಂಸಾರಿ ಜೀವಗ್ಳ ಸಲುವಾಗಿ ಸುಖದ ವ್ಯಾಖ್ಯೆ ಹೀಗಿದೆ – ಉತ್ತಮ ಆರೋಗ್ಯ, ಸಾಕಷ್ಟು ಸಂಪತ್ತು ಹಾಗೂ ಅನುಕೂಲ ಪತ್ನಿ, ಪುತ್ರ, ಪರಿವಾರ ಮುಂತಾದವು. ಈ ಎಲ್ಲರೂ ಸುಖಗಳ ಝರಿ ಇರುವರು. ಅದು ಸೌಭಾಗ್ಯ ಎಂದು ತಾವು ಹೇಳಬಹುದು. ಸೌಭಾಗ್ಯ ಹೇಗೆ ದೊರೆಯುತ್ತದೆ ? ಹೇಗೆ ಉಂಟಾಗುತ್ತದೆ ? ಅದರ ಉತ್ತರ – ಯಾವುದು ನಮ್ಮ ಪೂರ್ವಕೃತ ಪುಣ್ಯ ಇದೆಯೋ ಅದುವೇ ಸೌಭಾಗ್ಯ ಎನ್ನುತ್ತಾರೆ. ಯಾವಾಗ ಪೂರ್ವಕೃತ ಪಾಪಗಳಿಗೆ ದುರ್ಭಾಗ್ಯ ಎನ್ನುತ್ತಾರೆ. ಈ ಕಾರಣ ಯಾರಿಗೆ ತಮ್ಮ ಭಾಗ್ಯವನ್ನು ಒಳ್ಳೆಯದನ್ನಾಗಿ ಮಾಡುವದಿದೆಯೋ ಅವರು ಪುಣ್ಯ ಮಾಡುವದು ತೀವ್ರ ಆವಶ್ಯಕತೆ ಇದೆ ಮತ್ತು ಜೊತೆಯಲ್ಲಿ ಪಾಪದಿಂದ ಉಳಿದುಕೊಳ್ಳುವದು ಸಹ ಬಹಳ ಅವಶ್ಯಕತೆ ಇದೆ. ಏಕೆಂದರೆ ಪಾಪ ಹಾಗೂ ಪುಣ್ಯಗಳು ಎದುರು-ಬದುರು ಸರಿ ಆಗುವದಿಲ್ಲ. ಎರಡೂ ಬೇರೆ ಬೇರೆ ಅನುಭವಿಸಬೇಕಾಗುತ್ತದೆ. ಪಾಪದ ಫಲ ದುಃಖರೂಪಿ ಆಗುತ್ತದೆ. ಇದನ್ನು ಯಾವುದೇ ಜೀವ ಬಯಸುವುದಿಲ್ಲ. ಒಂದು ವೇಳೆ ದುಃಖರೂಪಿ ಫಲ ಜೀವ ಬಯಸುವುದಿಲ್ಲವಾದರೆ ಅದರ ತಂದೆ ಪಾಪವನ್ನು ಹೇಗೆ

ಮಾಡಬಹುದಾಗಿದೆ ? ಪಾಪಾಚರಣದಿಂದ ಆಗುವದು. ಆದ್ದರಿಂದ ಪಾಪದ ಆಚರಣೆ ಮಾಡಬಾರದು, ಎಂದೂ ಮಾಡಲೇಬಾರದು.

ಆದ್ದರಿಂದ ಸೌಭಾಗ್ಯ ಪಡೆಯಲು ದುರ್ಭಾಗ್ಯದಿಂದ ಪಾರಾಗಲು ಅಥವಾ ಕಡಿಮೆ ಮಾಡಲು ದೈನಿಕ ಜೀವನದಲ್ಲಿ ಯಾವ ಯಾವ ದೊಡ್ಡ ಪಾಪಗಳು ಆಗುತ್ತವೆ. ಅವನ್ನು ಮಾಡದಿರುವುದು ಅವಶ್ಯಕವಿದೆ. ಅವು ಯಾವವೆಂದರೆ, ಕಂದಮೂಲ ತಿನ್ನುವುದು, ರಾತ್ರಿ ಭೋಜನ ಮಾಡುವದು, ಸಪ್ತ ವ್ಯಸನಗಳ ತ್ಯಾಗ (ಜೂಜು, ಸೆರೆ, ಮಾಂಸ ವೇಶ್ಯಾಗಮನ, ಕಳ್ಳತನ, ಬೇಟೆಯಾಡುವದು ಮತ್ತು ಪರಸ್ತ್ರೀಗಮನ ಅಥವಾ ಪರಪುರುಷ ಗಮನ) ಹಾಗೂ ಅಭಕ್ಷ್ಯ ಭಕ್ಷಣ ಹೇಗೆಂದರೆ ಉಪ್ಪಿನಕಾಯಿ, ಸೆರೆ, ಬೆಣ್ಣೆ ಮುಂತಾದವು ಹಾಗೂ ಅನ್ಯಾಯ ಅನೀತಿಯಿಂದ ಸಂಪಾದನೆ ಮಾಡುವದು – ಇಂಥ ದೊಡ್ಡ ದೊಡ್ಡ ಪಾಪಗಳನ್ನು ಮಾಡದಿದ್ದರೆ ಹೊಸ ದುಃಖಗಳನ್ನು ರಕ್ಷಿಸುವದೂ ಕೂಡ ಕೊನೆಯಾಗುತ್ತದೆ. ಹಳೆಯ ಪಾಪಗಳ ಪಶ್ಚಾತ್ತಾಪ ಮಾಡುವದರಿಂದ ಮತ್ತು ಕ್ರೋಧ, ಮಾನ, ಮಾಯಾ, ಲೋಭಗಳನ್ನು ಕಡಿಮೆ ಮಾಡುವದರಿಂದ (ಆದರೆ ಭಾವನೆಯನ್ನು ಪೂರ್ಣ ರೂಪದಿಂದ ಬಿಡುವ ಮನಸ್ಸಿರಬೇಕು. ಅಂದರೆ ಭಾವನೆಯನ್ನು ವೀತರಾಗಿಯಾಗಿ ಮಾಡುವಂತಿರಬೇಕು.) ಹಾಗೂ ಹನ್ನೆರಡು / ಹದಿನಾರು ಭಾವನೆಗಳ ಚಿಂತನ ಮಾಡುವದರಿಂದ ಹೊಸ ಪುಣ್ಯಗಳ ಬಂಧ ಆಗುತ್ತದೆ. ಹಾಗೂ ಹಳೆಯ ಪಾಪಗಳ ಬಂಧವೂ ಸಡಿಲಗೊಳ್ಳುತ್ತದೆ. ಹಳೆಯ ಪಾಪವು ಅಶಕ್ತಗೊಳ್ಳುತ್ತದೆ. ಇದುವೇ ಸೌಭಾಗ್ಯ ಮಾಡುವ ಹಾಗೂ ದುರ್ಭಾಗ್ಯದಿಂದ ಉಳಿದುಕೊಳ್ಳುವ ಮಾರ್ಗವಾಗಿದೆ.

ಇಲ್ಲಿ ಯಾರಿಗಾದರೂ ಪ್ರಶ್ನೆ ಆಗಬಹುದು. ಏನೆಂದರೆ ನಾವಂತೂ ಇಂಥಿಂಥ ದೇವ–ದೇವಿಯರ ಕೃಪೆ ಹಾಗೂ ಅವರ ದರ್ಶನ–ಭಕ್ತಿ ಮಾಡುವದರಿಂದಲೇ ಸುಖಪ್ರಾಪ್ತವಾಗುತ್ತದೆ ಎಂದುಕೊಳ್ಳುತ್ತೇವೆ. ಆದರೆ ಅವರಿಗೆ ನಮ್ಮ ಉತ್ತರವಿದೆ. ಏನೆಂದರೆ ಆ ಸುಖವು ತಮ್ಮ ಪೂರ್ವಕೃತ ಪುಣ್ಯದ್ದೇ ಫಲವಿದೆ. ಒಂದು ವೇಳೆ ತಮಗೆ ಪಾಪದ ಉದಯವಾದರೆ ಯಾರೂ ಸಹ ದೇವ–ದೇವಿಯರು ಅವನನ್ನು ಪುಣ್ಯದಲ್ಲಿ ಬದಲಿಸುವಲ್ಲಿ ಸಮರ್ಥ ಇರುವದಿಲ್ಲ. ಪುಣ್ಯದ ಫಲ ಬೇಡುವದು ನಿಧಾನರೂಪಿ ಶಲ್ಯ

ಇದೆ. ನಿದಾನ ಮಾಡುವದರಿಂದಲೇ ಬಹಳ ಹೆಚ್ಚು ಪುಣ್ಯ, ಅಲ್ಪ ಫಲ ದೊರೆಯುತ್ತದೆ ಮತ್ತು ಆ ಸುಖವನ್ನು ಅನುಭವಿಸುವ ಸಮಯ ನಿಯಮದಿಂದ ಬಹಳ ಪಾಪ ಬಂಧಿಸುತ್ತದೆ. ಅದೇನೆಂದರೆ ಭವಿಷ್ಯದ ದುಃಖಗಳ ಜನಕ (ಕಾರಣ) ಆಗುತ್ತದೆ. ಆದ್ದರಿಂದ ಬೇಡು ಇಲ್ಲವೇ ಬೇಡದೇ ಇರು. ನಿಮ್ಮ ಪೂರ್ವಕೃತ ಪುಣ್ಯಪಾಪದ ಫಲವು ಅವಶ್ಯವಾಗಿಯೇ ದೊರೆಯುತ್ತದೆ. ಇದುವೇ ಶಾಶ್ವತ ನಿಯಮವಾಗಿದ್ದರೂ ಸಹ ಬೇಡಿಕೊಂಡು ಪಾಪವನ್ನು ಆಮಂತ್ರಣ ಮತ್ತು ರಕ್ಷಣೆ ಯಾವುದರ ಸಲುವಾಗಿ ಕೊಡುವವು ? ಅರ್ಥಾತ್ ಬೇಡಲೇಬಾರದು, ಎಂದೂ ಬೇಡಬಾರದು.

ಇದರಿಂದ ಒಂದು ಮಾತಂತೂ ನಿಶ್ಚಿತವೇ ಇರುತ್ತದೆ. ಏನೆಂದರೆ ನಮಗೆ ಯಾವುದೇ ದುಃಖ ಬರುತ್ತದೆ. ಅದರಲ್ಲಿ ದೋಷವು ನಮ್ಮ ಪೂರ್ವಕೃತ ಪಾಪಗಳೇ ಆಗಿರುತ್ತವೆ. ಬೇರೆ ಯಾರದೂ ಇಲ್ಲ. ಯಾರು ಬೇರೆ ಯಾರಾದರೂ ದುಃಖ ಕೊಡುತ್ತಾರೆಂದು ಕಂಡುಬರುತ್ತದೆ. ಅವರು ಮಾತ್ರ ನಿಮಿತ್ತವೇ ಇದ್ದಾರೆ. ಅವರದೇನೂ ದೋಷ ಇರುವದಿಲ್ಲ. ಅವರಂತೂ ತಮಗೆ ತಮ್ಮ ಪಾಪದಿಂದ ಬಿಡಿಸುವವರೇ ಇದ್ದಾರೆ. ಆದಾಗ್ಯೂ ಹೀಗೆ ತಿಳಿಯದಿದ್ದರೆ ತಮಗೆ ನಿಮಿತ್ತದ ಕುರಿತು ಸ್ವಲ್ಪವೂ ಸಿಟ್ಟು ಬಂದರೆ ತಮಗೆ ಮತ್ತೆ ಪಾಪದ ಬಂಧವಾಗುತ್ತದೆ. ಅದೇನೆಂದರೆ ಭವಿಷ್ಯದ ದುಃಖಗಳ ಜನಕ ಅನುಭವಿಸುತ್ತ ಹೊಸ ದುಃಖಗಳನ್ನು ಸಂಗ್ರಹ ಮಾಡುತ್ತಿದ್ದೇವೆ ಮತ್ತು ಈಗಲೂ ಸಹ ಮಾಡುತ್ತಿದ್ದೇವೆ. ಆದ್ದರಿಂದ ಇಂತಹ ಅನಂತ ದುಃಖಗಳಿಂದ ಬಿಡುಗಡೆಯು ಮಾತ್ರ ಒಂದೇ ಮಾರ್ಗವಿದೆ. ಏನೆಂದರೆ ದುಃಖದ ನಿಮಿತ್ತಗಳನ್ನು ನೀನು ಉಪಕಾರಿ ಎಂದು ಮನ್ನಿಸು. ಏಕೆಂದರೆ ಅವು ನನ್ನನ್ನು ಪಾಪದಿಂದ ಬಿಡಿಸುವಲ್ಲಿ ನಿಮಿತ್ತಗಳಾಗಿವೆ. ಆ ನಿಮಿತ್ತದ ಕುರಿತು ಕಿಂಚಿತ್ ಸಹ ದೋಷ ಅಪರಾಧದ ಚಿಂತನ ಮಾಡಬಾರದು. ಆದರೆ ತಮ್ಮ ಪೂರ್ವ ಪಾಪಗಳದೇ ಚಿಂತನ ಮಾಡು. ಏಕೆಂದರೆ ತಮ್ಮದೇ ಪೂರ್ವದ ದುಷ್ಕೃತ್ಯವು ವರ್ತಮಾನದ ದುಃಖದ ಕಾರಣ ಇದೆ. ಆದ್ದರಿಂದ ದುಃಖದ ಸಮಯ ಹೀಗೆ ಚಿಂತನ ಮಾಡುವದು. ಏನೆಂದರೆ –

1. ಓಹೋ! ನಾನು ಇಂತಹ ದುಷ್ಟ ಕಾರ್ಯವನ್ನು ಮಾಡಿದ್ದೆನು. ಧಿಕ್ಕಾರವಿದೆ ನನಗೆ! ಧಿಕ್ಕಾರವಿದೆ! ನಾನು ಕ್ಷಮೆಯನ್ನು ಬೇಡುತ್ತೇನೆ. ನಾನು. ಕ್ಷಮೆಯನ್ನು ಬೇಡುತ್ತೇನೆ. (ಇದುವೇ ಪ್ರತಿಕ್ರಮಣ ಇದೆ.)

2. ನಾನು ಈಗ ನಿರ್ಣಯ ಮಾಡುತ್ತೇನೆ. ಏನೆಂದರೆ ಇಂತಹ ದುಷ್ಕೃತ್ಯದ ಆಚರಣೆ ಮತ್ತೆ ಎಂದೂ ಮಾಡುವದೇ ಇಲ್ಲ, ಎಂದು ಮಾಡುವದೇ ಇಲ್ಲ. (ಇದುವೇ ಪ್ರತ್ಯಾಖ್ಯಾನ)

3. ಬೇರೆಯವರು ನಮ್ಮ ದುಃಖದ ಕಾರಣವೆಂದು ಮನ್ನಿಸುವದನ್ನು ಬಿಟ್ಟು ನಮ್ಮದೇ ಪೂರ್ವಕೃತ ಭಾವನೆಗಳು ಅರ್ಥಾತ್ ಪೂರ್ವದ ನಮ್ಮದೇ ಪಾಪಕರ್ಮಗಳ ದೋಷ ನೋಡಿ, ಬೇರೆಯವರಿಗೆ ಆ ಪಾಪಗಳಿಂದ ಬಿಡಿಸುವಂಥವರೆಂದು ತಿಳಿದುಕೊಂಡು ಧನ್ಯವಾದ ಹೇಳಬೇಕು ಮತ್ತು ಹೊಸ ಪಾಪಗಳಿಂದ ಉಳಿದುಕೊಳ್ಳಬೇಕು. (ಇದುವೇ ಸಮಭಾವ–ಸಾಮಾಯಿಕ)

ಒಂದು ವೇಳೆ ಸುಖ ಬಯಸುತ್ತಿದ್ದರೆ, ತಾವು ಪ್ರತಿಯೊಂದು ಜೀವಕ್ಕೆ ಸುಖ ಕೊಡಿರಿ. ತಾವು ಏನು ಕೊಡುವಿರೋ ಅದುವೇ ತಮಗೆ ದೊರೆಯುವದು. ಇದೇ ಕರ್ಮದ ಸಿದ್ಧಾಂತ. ತಮ್ಮ ವರ್ತಮಾನ ದುಃಖದ ಕಾರಣ ತಮ್ಮ ಪೂರ್ವದಲ್ಲಿ ಮಾಡಿದಂಥ ಪಾಪಕರ್ಮವೇ ಇರುತ್ತದೆ. ಆದ್ದರಿಂದ ಒಂದು ವೇಳೆ ತಾವು ದುಃಖ ಬಯಸುವದಿಲ್ಲವಾದರೆ ವರ್ತಮಾನದಲ್ಲಿ ತಾವು ಬೇರೆಯವರಿಗೆ ದುಃಖ ಕೊಡುವದನ್ನು ನಿಲ್ಲಿಸಿರಿ ಮತ್ತು ಭೂತಕಾಲದಲ್ಲಿ ತಾವು ಬೇರೆಯವರಿಗೆ ದುಃಖ ಕೊಟ್ಟಿರಬಹುದು. ಅದರ ಚಿಂತನ ಮಾಡಿ ಮನಸ್ಸಿನಲ್ಲಿ ಪಶ್ಚಾತ್ತಾಪ ಮಾಡಿಕೊಳ್ಳಿರಿ. ಕ್ಷಮೆ ಬೇಡಿರಿ.

ಇಲ್ಲಿ ಯಾರಿಗೋ ಪ್ರಶ್ನೆ ಏಳುತ್ತದೆ. ಏನೆಂದರೆ ಜಗತ್ತಿನಲ್ಲಿ ಪಾಪಿಗಳಿಗೂ ಸಹ ಪೂಜಿಸುವದು ಕಾಣುತ್ತೇವೆ. ಅವರು ಅತ್ಯಂತ ಸುಖಿ ಕಾಣುತ್ತಾರೆ. ಅದರ ಉತ್ತರ ಹೀಗೆ ಇದೆ. ಹೇಗೆಂದರೆ ಇದು ಅವನ ಪೂರ್ವಕೃತ ಪುಣ್ಯದ್ದೇ ಪ್ರಭಾವ ಇದೆ. ಯಾವಾಗ ಪಾಪಿಗೆ ವರ್ತಮಾನದಲ್ಲಿ ಬಹಳ ಚೆನ್ನಾಗಿ ಪಾಪಗಳ ಬಂಧ ಆಗೇ ತೀರುತ್ತದೆ. ಯಾವುದೆಂದರೆ ಅವನ ಅನಂತ ಭವಿಷ್ಯದಲ್ಲಿ ಅನಂತ ದುಃಖಗಳ

ಕಾರಣನಾಗುವಲ್ಲಿ ಸಮರ್ಥ ಇದ್ದಾನೆ. ಆದ್ದರಿಂದ ಯಾವುದರದೂ ಸಹ ವರ್ತಮಾನ ಉದಯದ ಮೇಲೆ ದೃಷ್ಟಿ ಹಾಕಬೇಡಿ. ಏಕೆಂದರೆ ಅದಂತೂ ಅವನ ಭೂತಕಾಲದ ಕರ್ಮದ ಮೇಲೆಯೇ ಆಧಾರಿತ ಇದೆ. ಕೇವಲ ವರ್ತಮಾನದ ಪುರುಷಾರ್ಥದ ಮೇಲೆ ದೃಷ್ಟಿ ಮಾಡುವದು ಯೋಗ್ಯವಿದೆ. ಏಕೆಂದರೆ ಅದುವೇ ಅವನ ಭವಿಷ್ಯವಿದೆ. ನಾವು ನಮ್ಮ ವರ್ತಮಾನ ಉದಯವನ್ನು ಬದಲಿಸುವಲ್ಲಿ ಬಹುಶಃ ಸಮರ್ಥರಿರುವದಿಲ್ಲ. ಆದರೆ ನಮ್ಮ ಭವಿಷ್ಯವನ್ನು ರೂಪಿಸುವಲ್ಲಿ ಸಮರ್ಥರಿದ್ದೇವೆ. ಆದ್ದರಿಂದ ಜೀವವು ಪುರುಷಾರ್ಥ ಮಾಡಿ ಸಿದ್ಧತ್ವವನ್ನೂ ಸಹ ಪಡೆಯಬಹುದಾಗಿದೆ. ಆದ್ದರಿಂದಲೇ ನಮ್ಮ ಉದಯದ ಮೇಲೆ ದೃಷ್ಟಿ ಹಾಕದೇ ಅಂದರೆ ಅದರಲ್ಲಿ ಇಷ್ಟ ಅನಿಷ್ಟ ಬುದ್ಧಿ ಮಾಡದೇ ಕೇವಲ ಮತ್ತು ಆತ್ಮಹಿತದ ಸಲುವಾಗಿಯೇ ಪುರುಷಾರ್ಥ ಮಾಡುವದು ಯೋಗ್ಯವಿದೆ.

ಇಲ್ಲಿಯ ತನಕ ಶಾರೀರಿಕ ಸುಖದ ಬಗ್ಗೆ ಹೇಳಲಾಯಿತು. ಇಂದ್ರಿಯ ಜನಿತ ಸುಖವು ನಿಜವಾದ ಸುಖವಲ್ಲ. ಕೇವಲ ಸುಖಾಭಾಸವೇ ಇದೆ. ಈ ಸುಖವು ದುಃಖಪೂರ್ವಕವೇ ಆಗುತ್ತದೆ. ಈ ಸುಖವು ಇಂದ್ರಿಯಗಳ ಆಕುಲತಾ ರೂಪ ದುಃಖವನ್ನು / ವೇಗವನ್ನು ಶಾಂತಗೊಳಿಸುವ ಸಲುವಾಗಿಯೇ ಸೇವನೆ ಮಾಡಲಾಗುತ್ತದೆ. ಆದಾಗ್ಯೂ ಅದು ಬೆಂಕಿಯಲ್ಲಿ ಇಂಧನ ರೂಪವಾಗುತ್ತದೆ. ಅದು ಮೇಲಿಂದ ಮೇಲೆ ಸುಖದ ಇಚ್ಛಾರೂಪ ದುಃಖವನ್ನು ಎಬ್ಬಿಸುವ ಕಾರ್ಯವನ್ನೇ ಮಾಡುತ್ತದೆ ಮತ್ತು ಅದನ್ನು ಭೋಗಿಸುತ್ತ ಯಾವ ಹೊಸ ಪಾಪಗಳನ್ನು ಬಂಧಿಸಿಕೊಳ್ಳುತ್ತೇವೆ. ಅವು ಹೊಸ ದುಃಖಗಳ ಕಾರಣವಾಗುತ್ತವೆ. ಅಂದರೆ ಅಂಥ ಸುಖ ದುಃಖಪೂರ್ವಕ ಮತ್ತು ದುಃಖರೂಪಿ ಫಲ ಸಹಿತವೇ ಆಗುತ್ತವೆ. ಎರಡನೆಯದಾಗಿ ಅದು ಕ್ಷಣಿಕವಿದೆ. ಏಕೆಂದರೆ ಅದು ಸುಖವು ಅಂಥಿಂಥ ಕಾಲದ ನಂತರ ನಿಯಮದಿಂದ ತಿಳಿಯುವಂಥದ್ದಾಗಿದೆ. ಅಂದರೆ ಜೀವನಿಗೆ ಇಂಥ ಸುಖವು ಕೇವಲ ತ್ರಸ ಪರ್ಯಾಯದಲ್ಲಿಯೇ ಸಿಗುತ್ತದೆ. ತ್ರಸ ಪರ್ಯಾಯ ಬಹಳ ಅಲ್ಪ ಕಾಲದ ಸಲುವಾಗಿ ಆಗಿರುತ್ತದೆ. ನಂತರದಲ್ಲಿ ಆ ಜೀವವು ನಿಯಮದಿಂದ ಏಕೇಂದ್ರಿಯ ಜೀವರಾಶಿಯಲ್ಲಿ ಜನ್ಮ ಪಡೆಯುತ್ತದೆ. ಅಲ್ಲಿ ಅನಂತಕಾಲದ ತನಕ ಅನಂತ ದುಃಖ ಭೋಗಿಸಬೇಕಾಗುತ್ತದೆ. ಏಕೇಂದ್ರಿಯದಲ್ಲಿಂದ ಹೊರಗೆ ಹೊರಡುವದು

ಸಹ ಭಗವಾನರು ಚಿಂತಾಮಣಿ ರತ್ನದ ಪ್ರಾಪ್ತಿಗಿಂತಲೂ ಹೆಚ್ಚು ದುರ್ಲಭ ಎಂದು ಹೇಳಿದ್ದಾರೆ. ಆದ್ದರಿಂದ ಭಗವಾನರು ಈ ಮನುಷ್ಯ ಜನ್ಮವನ್ನು ಪೂರ್ಣ ಇಂದ್ರಿಯಗಳ ಪ್ರಾಪ್ತಿ, ಆರ್ಯದೇಶ, ಉಚ್ಚಕುಲ, ಧರ್ಮದ ಅನುರೂಪ ಪರಿಣಮನ ಮುಂತಾದವುಗಳ ಪ್ರಾಪ್ತಿಯು ಒಂದೊಂದಕ್ಕಿಂತ ಒಂದು ಹೆಚ್ಚು ಹೆಚ್ಚು ದುರ್ಲಭವೆಂದು ಹೇಳಲಾಗಿದೆ. ಆದ್ದರಿಂದ ಇದು ಅಮೂಲ್ಯ ದುರ್ಲಭ ಮನುಷ್ಯ ಜನ್ಮ ಕೇವಲ ಶಾರೀರಿಕ ಇಂದ್ರಿಯ ಜನಿತ ಸುಖ ಮತ್ತು ಅದರ ಪ್ರಾಪ್ತಿಯ ಸಲುವಾಗಿ ಖರ್ಚು ಮಾಡುವದು ಯೋಗ್ಯವಲ್ಲ. ಆದರೆ ಇದರ ಒಂದು ಕ್ಷಣವನ್ನು ಸಹ ವ್ಯರ್ಥ ಕಳೆಯದೇ ಒಂದು ಮಾತ್ರ ಬೇಗನೇ ಶಾಶ್ವತ ಸುಖ ಅಂದರೆ ಆತ್ಮೀಕ ಸುಖದ ಪ್ರಾಪ್ತಿಯ ಸಲುವಾಗಿಯೇ ತೊಡಗಿಕೊಳ್ಳಿರಿ.

ಈಗ ನಾವು ಶಾಶ್ವತ ಸುಖ ಅಂದರೆ ಆತ್ಮೀಕ ಸುಖದ ಪ್ರಾಪ್ತಿಯ ಮಾರ್ಗ ಹೇಳುತ್ತೇವೆ. ಮೊದಲು ಕೇವಲ ಆತ್ಮಲಕ್ಷ್ಯದಿಂದ ಮೇಲೆ ಹೇಳಿದ ಅನುಸಾರ ಸುಖದ ಕೀಲಿಕೈ ರೂಪಿ ಶುಭಭಾವನೆಗಳನ್ನು ಸಮ್ಯಗ್ದರ್ಶನದ ಸಲುವಾಗಿ ಆತ್ಮನ ಯೋಗ್ಯತೆಯನ್ನು ಉಂಟುಮಾಡುವ ಸಲುವಾಗಿ ಸೇವನ ಮಾಡುವದು ಅವಶ್ಯಕವಿದೆ. ಸಮ್ಯಗ್ದರ್ಶನವೇ ಮೋಕ್ಷಮಾರ್ಗದ ಬಾಗಿಲು ಇದೆ. ನಿಶ್ಚಯ ಸಮ್ಯಗ್ದರ್ಶನದ ಹೊರತು ಮೋಕ್ಷಮಾರ್ಗದಲ್ಲಿ ಪ್ರವೇಶವೇ ಆಗುವದಿಲ್ಲ ಮತ್ತು ಮೋಕ್ಷ ಮಾರ್ಗದಲ್ಲಿ ಪ್ರವೇಶವಾಗದ ಹೊರತು ಅವ್ಯಾಬಾಧ ಸುಖದ ಮಾರ್ಗ ಸಾಧ್ಯ ಆಗುವದೇ ಇಲ್ಲ. ಮೋಕ್ಷ ಮಾರ್ಗದಲ್ಲಿ ಪ್ರವೇಶ ಮತ್ತು ನಂತರದ ಪುರುಷಾರ್ಥದಿಂದಲೇ ಸಿದ್ಧತ್ವರೂಪಿ ಫಲವು ದೊರೆಯುತ್ತದೆ. ಇಲ್ಲವಾದರೆ ಇಲ್ಲ. ಸಮ್ಯಗ್ದರ್ಶನದ ಹೊರತು ಭವದ ಕೊನೆ ಆಗುವದೇ ಇಲ್ಲ. ಸಮ್ಯಗ್ದರ್ಶನದ ಪ್ರಾಪ್ತಿಯ ನಂತರ ಜೀವವು ಅರ್ಧ ಪುದ್ಗಲ ಪರಾವರ್ತನ ಕಾಲದಿಂದ ಹೆಚ್ಚು ಕಾಲ ಸಂಸಾರದಲ್ಲಿ ಇರುವದಿಲ್ಲ. ಅವನು ಅರ್ಧ ಪುದ್ಗಲ ಪರಾವರ್ತನ ಕಾಲದಲ್ಲಿ ಅವಶ್ಯವಾಗಿ ಸಿದ್ಧತ್ವವನ್ನು ಪಡೆಯುತ್ತಾನೆ. ಹೇಗೆಂದರೆ ಸತ್-ಚಿತ್-ಆನಂದ ಸ್ವರೂಪ ಶಾಶ್ವತ ಇರುತ್ತದೆ. ಇದರಿಂದ ತಿಳಿವಳಿಕೆಯಲ್ಲಿ ಬರುತ್ತದೆ. ಏನೆಂದರೆ ಈ ಮನುಷ್ಯಭವದಲ್ಲಿ ಒಂದು ವೇಳೆ ಸ್ವಲ್ಪ ಪ್ರಾಪ್ತಿ ಮಾಡುವ ಯೋಗ್ಯವಾದದ್ದು ಏನಾದರೂ ಇದ್ದರೆ ಅದು ಒಂದು ಮಾತ್ರ ನಿಶ್ಚಯ ಸಮ್ಯಗ್ದರ್ಶನವೇ ಇದೆ. ಅದನ್ನೇ ಮೊಟ್ಟಮೊದಲು ಪ್ರಾಪ್ತ ಮಾಡಲು

ಯೋಗ್ಯವಿದೆ. ಅದರಿಂದ ನಮಗೆ ಮೋಕ್ಷ ಮಾರ್ಗದಲ್ಲಿ ಪ್ರವೇಶ ದೊರಕುವದು ಮತ್ತು ಪುರುಷಾರ್ಥವು ಸ್ಫುರಾಯಮಾನವಾಗಿ ಮುಂದೆ ಸಿದ್ಧಪದದ ಪ್ರಾಪ್ತಿ ಆಗುವದು. ಇಲ್ಲಿ ಇದನ್ನು ತಿಳಿಯುವದು ಆವಶ್ಯಕವಿದೆ. ಏನೆಂದರೆ ಯಾರು ನಿಜವಾದ ದೇವರು, ಗುರು, ಧರ್ಮದ ಕುರಿತು ಹೇಳಿರುವಂತಹ ಶ್ರದ್ಧಾರೂಪ ಅಥವಾ ಒಂಬತ್ತು ತತ್ವಗಳನ್ನು ಹೇಳಲಾದ ಶ್ರದ್ಧಾರೂಪವೇ ಸಮ್ಯಗ್ದರ್ಶನವಿದೆ. ಅದಂತೂ ಕೇವಲ ವ್ಯವಹಾರಿಕ (ಉಪಚಾರ ರೂಪಿ) ಸಮ್ಯಗ್ದರ್ಶನವೂ ಸಹ ಆಗಬಹುದಾಗಿದೆ. ಆದರೆ ಮೋಕ್ಷ ಮಾರ್ಗದ ಸಲುವಾಗಿ ಕಾರ್ಯಕಾರಿ ಇಲ್ಲವೆಂದು ಮನ್ನಿಸಲಾಗಿದೆ. ಆದರೆ ಸ್ವಾನುಭೂತಿ (ಸ್ವಾತ್ಮಾನುಭೂತಿ) ಸಹಿತ ಸಮ್ಯಗ್ದರ್ಶನವೇ ನಿಶ್ಚಯ ಸಮ್ಯಗ್ದರ್ಶನ ಎಂದು ಹೇಳುತ್ತಾರೆ ಮತ್ತು ಅದರ ಹೊರತು ಮೋಕ್ಷ ಮಾರ್ಗದಲ್ಲಿ ಪ್ರವೇಶವು ಸಹ ಸಾಧ್ಯವಿಲ್ಲ. ಆದ್ದರಿಂದ ಇಲ್ಲಿ ಹೇಳಲಾದ ಸಮ್ಯಗ್ದರ್ಶನವೇ ನಿಶ್ಚಯ ಸಮ್ಯಗ್ದರ್ಶನ ಎಂದು ತಿಳಿಯಬೇಕು.

ಮೊಟ್ಟಮೊದಲು ನಾವು ಸಮ್ಯಗ್ದರ್ಶನದ ಸ್ವರೂಪ ತಿಳಿಯೋಣ. ಸಮ್ಯಗ್ದರ್ಶನ ಅಂದರೆ ದೇವ, ಶಾಸ್ತ್ರ, ಗುರುಗಳ ಸ್ವರೂಪವು ಹೇಗಿದೆಯೋ ಅದೇ ರೀತಿಯಾಗಿ ಸರಿಯಾಗಿ ತಿಳಿಯುವದು, ಬೇರೆ ಅಲ್ಲ. ಎಲ್ಲಿಯ ತನಕ ಯಾವುದೇ ಆತ್ಮ ತನ್ನ ಯಥಾರ್ಥ ಸ್ವರೂಪ ತಿಳಿಯುವದಿಲ್ಲ ಅಂದರೆ ಸ್ವದ ಅನುಭೂತಿ ಮಾಡುವದಿಲ್ಲ. ಅಲ್ಲಿಯವರೆಗೆ ದೇವ, ಶಾಸ್ತ್ರ, ಗುರುಗಳ ಯಥಾರ್ಥ ಸ್ವರೂಪವೂ ಸಹ ತಿಳಿಯುವುದಿಲ್ಲ. ಅದು ಕೇವಲ ದೇವ, ಶಾಸ್ತ್ರ, ಗುರುಗಳ ಬಾಹ್ಯ ಸ್ವರೂಪ / ವೇಷದ ಮೇಲೆಯೇ ಶ್ರದ್ಧೆ ಮಾಡುತ್ತಾನೆ ಮತ್ತು ಅವನು ಅದನ್ನೇ ಸಮ್ಯಗ್ದರ್ಶನವೆಂದು ತಿಳಿಯುತ್ತಾನೆ. ದೇವ, ಶಾಸ್ತ್ರ, ಗುರುಗಳ ಬಾಹ್ಯ ಸ್ವರೂಪ / ವೇಷದ ಕುರಿತು ಶ್ರದ್ಧೆ ಯಥಾರ್ಥ ಶ್ರದ್ಧೆ ಅಲ್ಲ ಮತ್ತು ಆದ್ದರಿಂದ ಅದು ನಿಶ್ಚಯ ಸಮ್ಯಗ್ದರ್ಶನದ ಲಕ್ಷಣ ಇರುವದಿಲ್ಲ. ಏಕೆಂದರೆ ಯಾರು ಒಬ್ಬ ಆತ್ಮನನ್ನು ತಿಳಿಯುತ್ತಲೇ ಆ ಜೀವವು ನಿಜವಾದ ದೇವತತ್ವದ ಆಂಶಿಕ ಅನುಭಾವ ಮಾಡುತ್ತಾನೆ ಮತ್ತು ಆದ್ದರಿಂದ ಅವನು ನಿಜವಾದ ದೇವನನ್ನು ಮನಸ್ಸಿನಿಂದ ಗುರುತಿಸುತ್ತಾನೆ ಮತ್ತು ಹಾಗೆಯೇ ನಿಜವಾದ ದೇವನನ್ನು ತಿಳಿಯುತ್ತಲೇ ಅರ್ಥಾತ್ (ಸ್ವಾನುಭೂತಿ ಸಹಿತ) ಶ್ರದ್ಧಾ ಆಗುತ್ತಲೇ ಆ ಜೀವವು ಹಾಗೆಯೇ

ದೇವನಾಗುವ ಮಾರ್ಗದಲ್ಲಿ ಸಾಗುವಂಥ ನಿಜವಾದ ಗುರುವನ್ನು ಸಹ ಮನಸ್ಸಿನಿಂದ ಗುರುತಿಸುತ್ತಾನೆ ಮತ್ತು ಜೊತೆ ಜೊತೆಗೆನೇ ಆ ಜೀವವು ಹಾಗೆಯೇ ದೇವನಾಗುವ ಮಾರ್ಗ ಹೇಳುವಂತಹ ನಿಜವಾದ ಶಾಸ್ತ್ರವನ್ನು ಸಹ ಗುರುತಿಸುತ್ತಾನೆ.

ಆದ್ದರಿಂದ ಮೊದಲಂತೂ ಶರೀರಕ್ಕೆ ಆತ್ಮನೆಂದು ತಿಳಿಯಬಾರದು ಮತ್ತು ಆತ್ಮನನ್ನು ಶರೀರವೆಂದು ತಿಳಿಯಬಾರದು. ಶರೀರದಲ್ಲಿ ಆತ್ಮಬುದ್ಧಿಯಾಗುವದು ಮಿಥ್ಯಾತ್ವವಿದೆ. ಶರೀರವು ಪುದ್ಗಲ ದ್ರವ್ಯಗಳಿಂದ ತಯಾರಾಗಿದೆ ಮತ್ತು ಆತ್ಮನು ಬೇರೆಯೇ ಅರೂಪಿ ದ್ರವ್ಯವಿದ್ದಾನೆ. ಆದ್ದರಿಂದ ಪುದ್ಗಲನನ್ನು ಆತ್ಮನೆಂದು ತಿಳಿಯುವದು ಅಥವಾ ಆತ್ಮನನ್ನು ಪುದ್ಗಲವೆಂದು ತಿಳಿಯುವದು ವಿಪರೀತ ತಿಳಿವಳಿಕೆಯಿದೆ. ಭೇದಜ್ಞಾನ ಮತ್ತು ಸ್ವದ ಅನುಭವದಿಂದಲೇ ನಿಜವಾದ ಸಮ್ಯಗ್ದರ್ಶನ ಆಗುತ್ತದೆ. ಇದನ್ನು ಕರ್ಮದ ದೃಷ್ಟಿಯಿಂದ ನೋಡಿದರೆ ಕರ್ಮದ ಏಳು ಪ್ರಕೃತಿಗಳ ಉಪಶಮನ, ಕ್ಷಯೋಪಶಮ ಅಥವಾ ಕ್ಷಯ ಇದಕ್ಕೆ ಸಮ್ಯಗ್ದರ್ಶನ ಎಂದು ಹೇಳಲಾಗುತ್ತದೆ. ಏಕೆಂದರೆ ಛದ್ಮಸ್ಥನಿಗೆ ಕರ್ಮದ ಜ್ಞಾನ ಆಗುವದಿಲ್ಲ. ಆದ್ದರಿಂದ ನಮಗಂತೂ ಮೊದಲ ಒರೆಗಲ್ಲಿನಿಂದ ಅಂದರೆ ಭೇದಜ್ಞಾನ ಮತ್ತು ಸ್ವಾನುಭವ (ಆತ್ಮಾನುಭೂತಿ)ವನ್ನೇ ಸಮ್ಯಗ್ದರ್ಶನ ಎಂದು ತಿಳಿಯಬಹುದು.

**ಪ್ರಶ್ನೆ : ಸಮ್ಯಗ್ದರ್ಶನ ಪ್ರಾಪ್ತ ಮಾಡಿಕೊಳ್ಳುವ ಸಲುವಾಗಿ ಏನು ಮಾಡುವದು ಅವಶ್ಯಕವಿದೆ ?**

ಉತ್ತರ : ಭಗವಾನರು ಹೇಳಿರುವದೇನೆಂದರೆ ಎಲ್ಲ ಜೀವರುಗಳು ಸ್ವಭಾವದಿಂದ ಸಿದ್ಧಸಮಾನವೇ ಇದ್ದಾರೆ. ಈ ಮಾತನ್ನು ತಿಳಿಯುವದು ಅವಶ್ಯಕ.

**ಪ್ರಶ್ನೆ : ಸಂಸಾರಿ ಜೀವವು ಶರೀರ ಸಹಿತ ಇರುತ್ತದೆ ಮತ್ತು ಸಿದ್ಧ ಜೀವವು ಮುಕ್ತ ಇರುತ್ತದೆ. ಆದರೆ ಸಂಸಾರಿ ಜೀವನಿಗೆ ಸಿದ್ಧನಂತೆ ಎಂದು ಯಾವ ಅಪೇಕ್ಷೆಯಿಂದ ಕರೆಯಲಾಗಿದೆ ?**

ಉತ್ತರ : ಶುದ್ಧ ದ್ರವ್ಯಾರ್ಥಿಕ ನಯದ ಅಪೇಕ್ಷೆಯಿಂದ ಸಂಸಾರಿಗೆ ಸಿದ್ಧನಂತೆ ಎಂದು ಕರೆದಿದ್ದಾರೆ. ಹೇಗೆಂದರೆ ಸಂಸಾರಿ ಜೀವವು,

ಶರೀರ ಸಹಿತವಾಗಿದ್ದರೂ ಸಹ ಅದರ ಆತ್ಮವು ಒಂದು ಜೀವತ್ವರೂಪಿ ಪಾರಿಣಾಮಿಕ ಭಾವರೂಪಿ ಆಗುತ್ತದೆ. ಆ ಜೀವತ್ವದ ಭಾವವು ಛದ್ಮಸ್ಥನಲ್ಲಿ (ಅಶುದ್ಧ ದ್ರವ್ಯಾರ್ಥಿಕ ನಯದಿಂದ) ಅಶುದ್ಧವಾಗಿರುತ್ತದೆ ಮತ್ತು ಅದನ್ನು ಕಷಾಯಾತ್ಮ ಮುಂತಾಗಿ ಎಂಟು ಪ್ರಕಾರವಾಗಿಯೂ ಸಹ ಹೇಳಿದ್ದಾರೆ. ಅದು ಅಶುದ್ಧ ಜೀವತ್ವಭಾವ ಅಂದರೆ ಅಶುದ್ಧ ರೂಪದಿಂದ ಪರಿಣಮಿತ ಆತ್ಮನಲ್ಲಿಂದ ಅಶುದ್ಧಿಯನ್ನು (ವಿಭಾವ ಭಾವವನ್ನು) ಗೌಣ ಮಾಡುತ್ತಲೇ, ಯಾವ ಜೀವತ್ವದ ಶುದ್ಧ ಭಾವ, ಶುದ್ಧಾತ್ಮ, ಕಾರಣ ಪರಮಾತ್ಮ, ಸಿದ್ಧಸದೃಶ್ಯಭಾವ, ಸ್ವಭಾವ ಭಾವ ಮುಂತಾದ ಅನೇಕ ಹೆಸರುಗಳಿಂದ ಗುರುತಿಸಲಾಗುತ್ತದೆ ಮತ್ತು ಅದೇ ಭಾವದ ಅಪೇಕ್ಷೆಯಿಂದ 'ಎಲ್ಲ ಜೀವಗಳು ಸ್ವಭಾವದಿಂದ ಸಿದ್ಧಸಮಾನವೇ ಇವೆ.' ಹೀಗೆ ಹೇಳಲಾಗುತ್ತದೆ.

ಇದೇ ಮಾತನ್ನು ಭಗವತೀ ಸೂತ್ರದಲ್ಲಿ 12ನೇ ಶತಕದ 10ನೇ ಉದ್ದೇಶದಲ್ಲಿಯೂ ಸಹ ಹೇಳಲಾಗಿದೆ.

ಪ್ರಶ್ನೆ : **ಹೇ ಭಗವಾನ್ ! ಆತ್ಮನು ಎಷ್ಟು ಪ್ರಕಾರ ಎಂದು ಹೇಳಲಾಗಿದೆ ?**

ಉತ್ತರ : ಹೇ ಗೌತಮ ! ಆತ್ಮನು ಎಂಟು ಪ್ರಕಾರ ಎಂದು ಹೇಳಿದ್ದಾರೆ. ದ್ರವ್ಯಾತ್ಮ, ಕಷಾಯಾತ್ಮ, ಯೋಗಾತ್ಮ, ಜಪಯೋಗಾತ್ಮ, ಜ್ಞಾನಾತ್ಮ, ದರ್ಶನಾತ್ಮ, ಚರಿತ್ರಾತ್ಮ ಮತ್ತು ವೀರ್ಯಾತ್ಮ.

ಪ್ರಶ್ನೆ : **ಹೇ ಭಗವಾನ್ ! ಯಾರಿಗೆ ದ್ರವ್ಯಾತ್ಮ ಆಗುತ್ತದೆ, ಅವನಿಗೆ ಕಷಾಯಾತ್ಮ ಆಗುತ್ತದೆ ಏನು ? ಮತ್ತು ಯಾರಿಗೆ ಕಷಾಯಾತ್ಮ ಆಗುತ್ತದೆ ಅವನಿಗೆ ದ್ರವ್ಯಾತ್ಮ ಆಗುತ್ತದೆ ಏನು ?**

ಉತ್ತರ : ಹೇ ಗೌತಮ ! ಯಾರಿಗೆ ದ್ರವ್ಯಾತ್ಮ ಆಗುತ್ತದೆ. ಅವನಿಗೆ ಕಷಾಯಾತ್ಮ ಸಂಭವತಃ ಆಗುತ್ತದೆ. ಸಂಭವತಃ ಆಗುವದೂ ಇಲ್ಲ. ಆದರೆ ಯಾರಿಗೆ ಕಷಾಯಾತ್ಮ ಆಗುತ್ತದೆ. ಅವನಿಗಂತೂ ದ್ರವ್ಯಾತ್ಮ ಅವಶ್ಯವಾಗಿ ಆಗುತ್ತದೆ.

ಪ್ರಶ್ನೆ : ಹೇ ಭಗವಾನ್ ! ಯಾರಿಗೆ ದ್ರವ್ಯಾತ್ಮ ಆಗುತ್ತದೆ. ಅವನಿಗೆ ಯೋಗಾತ್ಮಾ ಆಗುತ್ತದೆಯೇ ? ಈ ಪ್ರಕಾರ ಹೇಗೆ ದ್ರವ್ಯಾತ್ಮ ಮತ್ತು ಕಷಾಯಾತ್ಮಾಗಳ ಸಂಬಂಧ ಹೇಳಿದ್ದಾರೆ. ಹಾಗೆಯೇ ದ್ರವ್ಯಾತ್ಮ ಮತ್ತು ಯೋಗಾತ್ಮಗಳ ಸಂಬಂಧ ಹೇಳಬೇಕು.

ಉತ್ತರ : ಅರ್ಥಾತ್ ಯಾರಿಗೆ ದ್ರವ್ಯಾತ್ಮ ಆಗುತ್ತದೆ, ಅವನಿಗೆ ಯೋಗಾತ್ಮ ಒಮ್ಮೊಮ್ಮೆ ಆಗುತ್ತದೆ. ಒಮ್ಮೊಮ್ಮೆ ಆಗಲಿಕ್ಕಿಲ್ಲ. ಆದರೆ ಯಾರಿಗೆ ಯೋಗಾತ್ಮ ಆಗುತ್ತದೆ, ಅವನಿಗಂತೂ ದ್ರವ್ಯಾತ್ಮ ಅವಶ್ಯವಾಗಿ ಆಗುತ್ತದೆ. ದ್ರವ್ಯಾತ್ಮ ಪ್ರತಿಯೊಂದು ಜೀವನದಲ್ಲಿ ಆಗುತ್ತದೆ. ಬೇಕಾದರೆ ಅವನು ಮಿಥ್ಯಾತ್ವ ಇರಬಹುದು ಅಥವಾ ಸಮ್ಯಗ್ದೃಷ್ಟಿ, ಛದ್ಮಸ್ಥವಾಗಿರಬಹುದು ಅಥವಾ ಕೇವಲಿ, ಸಂಸಾರಿ (ಸಶರೀರ) ಇರಬಹುದು. ಅಥವಾ ಸಿದ್ಧ (ಅಶರೀರಿ) ಇರಬಹುದು. ಪ್ರತಿಯೊಂದು ಜೀವದಲ್ಲಿ ದ್ರವ್ಯಾತ್ಮ ಆಗುತ್ತದೆ. ಇದರಿಂದ ತಿಳಿವಳಿಕೆಯಲ್ಲಿ ಬರುತ್ತದೆ. ಏನೆಂದರೆ ದ್ರವ್ಯಾತ್ಮನೇ ಶುದ್ಧಾತ್ಮ (ಅಶುದ್ಧ ಜೀವತ್ವಭಾವ ಅಂದರೆ ಅಶುದ್ಧರೂಪ ಪರಿಣಮಿತ ಆತ್ಮನಲ್ಲಿಂದ ಅಶುದ್ಧಿಯನ್ನು ಗೌಣ ಮಾಡುತ್ತಲೇ, ಯಾವ ಜೀವತ್ವರೂಪ ಭಾವವು ಉಳಿದಿರುತ್ತದೆ. ಅದು) ಇದೆ. ನಾವು ಈ ಪುಸ್ತಕದಲ್ಲಿ ಇದೇ ಶುದ್ಧಾತ್ಮನ ಮಾತನ್ನು ತಿಳಿಸಿದ್ದೇವೆ.

ಈಗ ನಾವು ಇದೇ ಮಾತನ್ನು ದೃಷ್ಟಾಂತದಿಂದ ನೋಡುತ್ತೇವೆ. ಹೇಗೆ ಹೊಲಸು ನೀರಲ್ಲಿ ಶುದ್ಧ ನೀರು ಅಡಗಿರುತ್ತದೆ. ಹೀಗೆಯೇ ನಿಶ್ಚಯದಿಂದ ಯಾರೋ ಅದರಲ್ಲಿ ಪಟಕವನ್ನು ಅಲುಗಾಡಿಸಿದರೆ ಕೆಲವು ಸಮಯದ ನಂತರ ಆ ನೀರಲ್ಲಿ ಇರುವಂಥ ಹೊಲಸೆಲ್ಲ ತಳದಲ್ಲಿ ಕುಳಿತುಕೊಳ್ಳುವದರಿಂದ ಮೊದಲಿದ್ದ ಹೊಲಸು ನೀರು ಸ್ವಚ್ಛವಾಗಿ ಕಾಣುತ್ತದೆ. ಇದೇ ಪ್ರಕಾರ ಯಾವುದು ಅಶುದ್ಧರೂಪ (ರಾಗ-ದ್ವೇಷರೂಪ) ಪರಿಣಮಿತ ಆತ್ಮ ಇದೆಯೋ ಅದರಲ್ಲಿ ವಿಭಾವರೂಪಿ ಅಶುದ್ಧ ಭಾವವನ್ನು ಬುದ್ಧಿಪೂರ್ವಕ ಗೌಣ ಮಾಡುತ್ತಲೇ ಯಾವ ಶುದ್ಧಾತ್ಮ (ದ್ರವ್ಯಾತ್ಮ) ಪ್ರಕಟವಾಗುತ್ತದೆ. ಅಂದರೆ ಜ್ಞಾನದಲ್ಲಿ ವಿಕಲ್ಪ ರೂಪದಿಂದ ಬರುತ್ತದೆ. ಅದನ್ನು ಭಾವಭಾಸನವೆಂದು ಹೇಳುತ್ತಾರೆ ಮತ್ತು ಶುದ್ಧಾತ್ಮನ ಅನುಭೂತಿ

ಆಗುತ್ತಲೇ ಜೀವನಿಗೆ ಸಮ್ಯಗ್ದರ್ಶನ ಪ್ರಾಪ್ತವಾಗುತ್ತದೆ. ಅಂದರೆ ಆಜೀವವು ಶುದ್ಧ ಆತ್ಮರೂಪ (ಸ್ವರೂಪ ಮತ್ತು ಸ್ವಭಾವ)ದಲ್ಲಿ 'ನನ್ನತನ' (ಏಕತ್ವ) ಮಾಡುತ್ತಲೇ ಹೇಗೆಂದರೆ ಮೊದಲು ಶರೀರದಲ್ಲಿ 'ನನ್ನತನ' ಮಾಡುತ್ತಿದ್ದನು. ಆ ಜೀವನಿಗೆ ಸಮ್ಯಗ್ದರ್ಶನ ಆಗುತ್ತದೆ. ಇದು ವಿಧಿ ಇರುತ್ತದೆ. ಸಮ್ಯಗ್ದರ್ಶನದ ಅರ್ಥಾತ್, ಯಾವ ಜೀವವು ರಾಗ-ದ್ವೇಷ ರೂಪ ಪರಿಣಮಿತವಾದ ಮೇಲೂ ಸಹ ಕೇವಲ ಶುದ್ಧಾತ್ಮ (ದ್ರವ್ಯಾತ್ಮ-ಸ್ವಭಾವ)ದಲ್ಲಿಯೇ 'ನನ್ನತನ' (ಏಕತ್ವ) ಮಾಡುತ್ತಾನೆ ಮತ್ತು ಅದರದೇ ಅನುಭವ ಮಾಡುತ್ತಾನೆ. ಅದೇ ಜೀವವು ಸಮ್ಯಗ್ದೃಷ್ಟಿ ಇದೆ. ಇದುವೇ ಸಮ್ಯಗ್ದರ್ಶನದ ವಿಧಿ ಇರುತ್ತದೆ.

**ಎರಡನೇ ದೃಷ್ಟಾಂತ** – ಹೇಗೆ ಕನ್ನಡಿಯಲ್ಲಿ ಬೇರೆ ಬೇರೆ ಪ್ರಕಾರದ ಪ್ರತಿಬಿಂಬಗಳು ಆಗುತ್ತವೆ, ಆದರೆ ಆ ಪ್ರತಿಬಿಂಬಗಳನ್ನು ಗೌಣ ಮಾಡುತ್ತಲೇ ಸ್ವಚ್ಛ ಕನ್ನಡಿಯು ದೃಷ್ಟಿಯಲ್ಲಿ ಬರುತ್ತದೆ. ಇದೇ ಪ್ರಕಾರ ಆತ್ಮನ ಜ್ಞಾನದಲ್ಲಿ ಯಾವ ಜ್ಞೇಯಗಳು ಬರುತ್ತವೆ. ಆ ಜ್ಞೇಯಗಳನ್ನು ಗೌಣ ಮಾಡುತ್ತಲೇ ನಿರ್ವಿಕಲ್ಪ ಜ್ಞಾನದ ಅರ್ಥಾತ್ ಶುದ್ಧಾತ್ಮನ ಅನುಭವ ಆಗುತ್ತದೆ. ಇದುವೇ ಸಮ್ಯಗ್ದರ್ಶನದ ವಿಧಿ ಇರುತ್ತದೆ. ಇದೇ ವಿಧಿಯಿಂದ ಅಶುದ್ಧ ಆತ್ಮನಲ್ಲಿಯೂ ಸಹ, ಸಿದ್ಧಸಮಾನ ಶುದ್ಧಾತ್ಮನ ಅನುಭವ ಆಗುತ್ತದೆ. ಇದುವೇ ಸಮ್ಯಗ್ದರ್ಶನದ ವಿಧಿ ಇರುತ್ತದೆ. ಇದೇ ವಿಧಿಯಿಂದ ಅಶುದ್ಧ ಆತ್ಮನಲ್ಲಿಯೂ ಸಹ, ಸಿದ್ಧಸಮಾನ ಶುದ್ಧಾತ್ಮನ ನಿರ್ಣಯ ಮಾಡುವದು ಮತ್ತು ಅದರಲ್ಲಿಯೇ 'ನನ್ನತನ' ಮಾಡುವದರಿಂದ ಸಮ್ಯಗ್ದರ್ಶನವು ಪ್ರಕಟವಾಗುತ್ತದೆ.

**ಪ್ರಶ್ನೆ : ಆತ್ಮನಲ್ಲಿ ಭೇದಜ್ಞಾನ ಹೇಗೆ ಮಾಡಬೇಕು ?**

ಉತ್ತರ : ಮೊದಲಂತೂ ಪ್ರಕಟತೆಯಲ್ಲಿ ಆತ್ಮನ ಲಕ್ಷಣದಿಂದ ಅಂದರೆ ಜ್ಞಾನರೂಪ ನೋಡುವ ತಿಳಿಯುವ ಲಕ್ಷಣದಿಂದ ಆತ್ಮನನ್ನು ಗ್ರಹಣ ಮಾಡುತ್ತಲೇ ಕೇವಲ ಪುದ್ಗಲದ ಜೊತೆ ಭೇದಜ್ಞಾನ ಆಗುತ್ತದೆ ಮತ್ತು ನಂತರದಲ್ಲಿ ಅದರಿಂದ ಮುಂದುವರಿದ ಮೇಲೆ ಜೀವದ ಯಾವ ಉದಯಾದಿ ಭಾವಗಳಿವೆ. ಅವು ಕರ್ಮದ ಅಪೇಕ್ಷೆಯಿಂದ ಹೇಳಲಾಗಿದೆ ಮತ್ತು ಕರ್ಮಪುದ್ಗಲವಾಗಿರುವದರಿಂದ ಆ ಉದಯಾದಿಕ ಭಾವಗಳನ್ನು

ಸಹ ಪುದ್ಗಲದ ಖಾತೆಯಲ್ಲಿ ಹಾಕಿ, ಪ್ರಜ್ಞಾರೂಪಿ ಬುದ್ಧಿಯಿಂದ ಶುದ್ಧಾತ್ಮನನ್ನು ಸ್ವೀಕರಿಸಬೇಕು. ಅಂದರೆ ಆ ಉದಯಾದಿ ಭಾವಗಳನ್ನು ಜೀವದಿಂದ ಗೌಣ ಮಾಡುತ್ತಲೇ ಯಾವ ಉಳಿದ ಜೀವಭಾವಗಳು ಇರುತ್ತವೆ. ಅವನ್ನೇ ಪರಮಪಾರಿಣಾಮಿಕ ಭಾವ, ಶುದ್ಧಾತ್ಮ ಸ್ವಭಾವ ಭಾವ, ಶುದ್ಧ ಚೈತನ್ಯಭಾವ, ಕಾರಣ ಪರಮಾತ್ಮ, ದ್ರವ್ಯಾತ್ಮ, ಸಮ್ಯಗ್ದರ್ಶನದವಿಷಯ (ದೃಷ್ಟಿಯ ವಿಷಯ) ಮುಂತಾದವು ಅನೇಕ ಹೆಸರುಗಳಿಂದ ಗುರುತಿಸಲಾಗುತ್ತದೆ. ಅದರ ಅನುಭವಕ್ಕೇನೇ ನಿಶ್ಚಯ ಸಮ್ಯಗ್ದರ್ಶನ ಹೇಳುತ್ತಾರೆ. ಈ ಭಾವದ ಅಪೇಕ್ಷೆಯಿಂದ ಎಲ್ಲ ಜೀವಗಳು ಸ್ವಭಾವದಿಂದ ಸಿದ್ಧ ಸಮಾನವೇ ಇರುತ್ತವೆ. ಹೀಗೆ ಹೇಳಲಾಗುತ್ತದೆ. ಇದರ ಅನುಭವಕ್ಕೇನೇ ನಿರ್ವಿಕಲ್ಪ ಅನುಭೂತಿ ಎಂದು ಹೇಳಲಾಗುತ್ತದೆ. ಏಕೆಂದರೆ ಅದು ಸಾಮಾನ್ಯ ಭಾವಸ್ವರೂಪ ಆಗಿರುವದರಿಂದ ಅದರಲ್ಲಿ ಯಾವುದೇ ವಿಕಲ್ಪದ ಸ್ಥಾನವೇ ಇರುವದಿಲ್ಲ. ಭೇದಜ್ಞಾನದ ವಿಧಿ ಹೀಗೆಯೇ ಇದೆ.

ನಾವಂತೂ ಇದೇ ಶುದ್ಧಾತ್ಮನ ಅನುಭವ ಮಾಡುತ್ತೇವೆ ಮತ್ತು ಪರಮ ಸುಖದ ಅನುಭವ ಮಾಡುತ್ತೇವೆ. ಆದ್ದರಿಂದ ತಾವೂ ಸಹ ದೃಷ್ಟಿ ಬದಲಿಸಿ ಶುದ್ಧರಾಗಿ ನೋಡಿರಿ ಮತ್ತು ತಾವೂ ಸಹ ಸತ್-ಚಿತ್-ಆನಂದ ಸ್ವರೂಪದ ಆನಂದವನ್ನು ತೆಗೆದುಕೊಳ್ಳಿರಿ. ಹೀಗೆ ನಮ್ಮ ಆಗ್ರಹವಿದೆ. ಇದುವೇ ಸಮ್ಯಗ್ದರ್ಶನದ ಸ್ವರೂಪವಿದೆ ಮತ್ತು ಇದುವೇ ಸಮ್ಯಗ್ದರ್ಶನದ ವಿಧಿ ಇದೆ.

ಯಾರು ಇಲ್ಲಿ ಹೇಳಲಾದ ಯುಕ್ತಿಯ ಅನುಸಾರ ಸಮ್ಯಗ್ದರ್ಶನದ ವಿಷಯವನ್ನು ಮನ್ನಿಸದೇ ಬೇರೆ ಗ್ರಹಣ ಮಾಡುತ್ತಾರೆ ಅವರು ಶುದ್ಧ ನಯಾಭಾಸ ರೂಪ ಏಕಾಂತ ಶುದ್ಧಾತ್ಮನನ್ನು ಶೋಧಿಸುತ್ತಾರೆ ಮತ್ತು ಮನ್ನಿಸುತ್ತಾರೆ. ಅವರು ಭ್ರಮಿತರಿದ್ದಾರೆ. ಅಂಥ ಏಕಾಂತ ಶುದ್ಧಾತ್ಮನು ಕಾರ್ಯಕಾರಿ ಇರುವದಿಲ್ಲ. ಏಕೆಂದರೆ ಅಂತಹ ಏಕಾಂತ ಶುದ್ಧಾತ್ಮನು ಪ್ರಾಪ್ತವೇ ಆಗುವದಿಲ್ಲ. ಆದ್ದರಿಂದ ಜೀವರುಗಳು ಭ್ರಮೆಯಲ್ಲಿಯೇ ಇದ್ದುಕೊಂಡು ಅನಂತ ಸಂಸಾರ ವೃದ್ಧಿಸಿಕೊಂಡು ಅನಂತ ದುಃಖಗಳನ್ನು ಪ್ರಾಪ್ತ ಮಾಡಿಕೊಳ್ಳುತ್ತಾರೆ.

ಸಮ್ಯಗ್ದರ್ಶನದ ಸಲುವಾಗಿ ಬೇರೆ ಪ್ರಕಾರದಿಂದ ಹೇಳಬಹುದಾಗಿದೆ. ಏನಂದರೆ ಯಾವುದೋ ಮಹಲದ ಕಿಡಕಿಯಿಂದ ನೋಡುವ ಪುರುಷನು ಸ್ವತಃ ಜ್ಞೇಯಗಳನ್ನು ನೋಡುತ್ತಾನೆ. ಕಿಡಕಿಯನ್ನಲ್ಲ. ಅದೇ ಪ್ರಕಾರ ಆತ್ಮನು ಕಿಡಕಿಯ ರೂಪಿ ಕಣ್ಣುಗಳಿಂದ ಜ್ಞೇಯಗಳನ್ನು ನೋಡುತ್ತಾನೆ. ಆ ಜ್ಞಾಯಕನು ತಿಳಿಯುವಂಥವನು ಸ್ವತಃ ಇದ್ದಾನೆ. ಕಣ್ಣುಗಳಲ್ಲಿ ಮತ್ತು ಅವನೇ ನಾನು ಇದ್ದೇನೆ. ಸೋऽಹಂ, ಆ ಜ್ಞಾನ ಮಾತ್ರ ಸ್ವರೂಪವೇ ನಾನು ಇದ್ದೇನೆ. ಅಂದರೆ ನಾನು ಕೇವಲ ನೋಡುವ, ತಿಳಿಯುವವನಿದ್ದೇನೆ. ಜ್ಞಾಯಕ ಜ್ಞಾನ ಮಾತ್ರ ಶುದ್ಧಾತ್ಮನಿದ್ದೇನೆ. ಹೀಗೆ ಭಾವನೆ ಮಾಡುವದು ಮತ್ತು ಹೀಗೆಯೇ ಅನುಭವ ಮಾಡಬೇಕು.

ಯಾವ ಸಮಯ ಮತಿ ಮತ್ತು ಶ್ರುತಜ್ಞಾನ, ಈ ಎರಡರಲ್ಲಿಂದ ಯಾವುದೇ ಒಂದು ಜ್ಞಾನದ ಮೂಲಕ ಸ್ವಾತ್ಮಾನುಭೂತಿ ಆಗುತ್ತದೆ. ಆ ಸಮಯ ಈ ಎರಡೂ ಜ್ಞಾನಗಳು ಸಹ ಅತೀಂದ್ರಿಯ ಸ್ವಆತ್ಮನಿಗೆ ಪ್ರತ್ಯಕ್ಷ ಮಾಡುತ್ತವೆ. ಆದ್ದರಿಂದ ಈ ಎರಡೂ ಜ್ಞಾನಗಳು ಸಹ ಸ್ವಾತ್ಮಾನುಭೂತಿಯ ಸಮಯದಲ್ಲಿ ಪ್ರತ್ಯಕ್ಷ ಇವೆ, ಪರೋಕ್ಷ ಇಲ್ಲ. ಸಮ್ಯಗ್ದರ್ಶನವು ಅನಂತಾನುಬಂಧಿ ಕಷಾಯ ಚೌಕಡಿ ಮತ್ತು ದರ್ಶನಮೋಹದ ಉಪಶಮ, ಕಷಯೋಪಶಮ ಅಥವಾ ಕ್ಷಯದಿಂದ ಆಗುತ್ತದೆ. ಆದರೆ ಅದರ ಜೊತೆಗೇನೇ ನಿಯಮದಿಂದ ಸಮ್ಯಕ್‌ಜ್ಞಾನರೂಪಿ ಶುದ್ಧೋಪಯೋಗ ಉತ್ಪನ್ನ ಆಗುತ್ತದೆ. ಆ ಶುದ್ಧೋಪಯೋಗವನ್ನೇ ಸ್ವಾತ್ಮಾನುಭೂತಿ ಎಂದು ಹೇಳಲಾಗುತ್ತದೆ. ಸ್ವಾತ್ಮಾನುಭೂತಿಯು ಜ್ಞಾನಾವರಣೀಯದ ಕ್ಷಯೋಪಶಮದ ರೂಪದಲ್ಲಿ ಆಗುತ್ತದೆ. ಅದು ಶುದ್ಧೋಪಯೋಗ ವಿಭಾವರಹಿತ ಆತ್ಮನ ಅರ್ಥಾತ್ ಶುದ್ಧಾತ್ಮನಾಗುವದರಿಂದ ಅದನ್ನು ನಿರ್ವಿಕಲ್ಪ ಸ್ವಾತ್ಮಾನುಭೂತಿ ಎಂದು ಹೇಳಲಾಗುತ್ತದೆ. ಸ್ವಾತ್ಮಾನುಭೂತಿಯ ಕಾಲದಲ್ಲಿ ಮನೋಯೋಗವೂ ಸಹ ಅತೀಂದ್ರಿಯ ರೂಪದಿಂದ ಪರಿಣಮಿತ ಆಗುವದರಿಂದ ಅದನ್ನು ನಿರ್ವಿಕಲ್ಪ ಸ್ವಾತ್ಮಾನುಭೂತಿ ಎಂದು ಹೇಳಲಾಗುತ್ತದೆ.

ಈಗ ನಾವು ಧ್ಯಾನದ ವಿಷಯದಲ್ಲಿ ಸ್ವಲ್ಪ ಹೇಳುತ್ತೇವೆ. ಯಾವುದೇ ವಸ್ತು-ವ್ಯಕ್ತಿ-ಪರಿಸ್ಥಿತಿ ಮುಂತಾದವುಗಳ ಮೇಲೆ ಮನಸ್ಸಿನ ಏಕಾಗ್ರತಾಪೂರ್ವಕ ಚಿಂತನವನ್ನು ಧ್ಯಾನ ಎಂದು ಕರೆಯುತ್ತಾರೆ. ಮನಸ್ಸಿಗೆ

ಸಮ್ಯಗ್ದರ್ಶನದ ಸಲುವಾಗಿ ಬಹಳೇ ಮಹತ್ವವಿದೆ. ಅಂದರೆ ಸಮ್ಯಗ್ದರ್ಶನದ ವಿಷಯವೂ ಸಹ ಮನಸ್ಸಿನಿಂದಲೇ ಚಿಂತಿಸಲಾಗುತ್ತದೆ ಮತ್ತು ಅತೀಂದ್ರಿಯ ಸ್ವಾತ್ಮಾನುಭೂತಿಯ ಕಾಲದಲ್ಲಿಯೂ ಸಹ ಆ ಭಾವ ಮನವೇ ಅತೀಂದ್ರಿಯ ಜ್ಞಾನದ ರೂಪದಲ್ಲಿ ಪರಿಣಮತ ಇದೆ. ಇದರಿಂದ ಮನಸ್ಸು ಯಾವ ವಿಷಯದ ಮೇಲೆ ಚಿಂತನೆ ಮಾಡುತ್ತದೆ, ಅಥವಾ ಮನಸ್ಸು ಯಾವ ವಿಷಯಗಳಲ್ಲಿ ಏಕಾಗ್ರ ಆಗುತ್ತದೆ. ಇದರ ಮೇಲೆಯೇ ಬಂಧ ಮತ್ತು ಮೋಕ್ಷದ ಆಧಾರ ಇದೆ. ಅಂದರೆ ಮನಸ್ಸೇ ಬಂಧ ಮತ್ತು ಮೋಕ್ಷದ ಕಾರಣ ಇದೆ.

ಕರ್ಮವು ಮನ-ವಚನ-ಕಾಯದಿಂದಲೇ ಬಂಧಿಸುತ್ತದೆ. ಅವುಗಳಲ್ಲಿ ಎಲ್ಲಕ್ಕಿಂತ ಕಡಿಮೆ ಕರ್ಮವು ಕಾಯದಿಂದ ಬಂಧಿಸುತ್ತದೆ. ಏಕೆಂದರೆ ಕಾಯಶಕ್ತಿಯದು ಒಂದು ಸೀಮೆ ಇದೆ. ಯಾವಾಗ ವಚನದಿಂದ ಕಾಯದ ಅಪೇಕ್ಷೆ ಹೆಚ್ಚು ಕರ್ಮಗಳ ಬಂಧವಾಗುತ್ತದೆ. ಎಲ್ಲಕ್ಕಿಂತ ಹೆಚ್ಚು ಕರ್ಮಗಳ ಬಂಧವು ಮನಸ್ಸಿನಿಂದಲೇ ಆಗುತ್ತದೆ. ಏಕೆಂದರೆ ಮನಸ್ಸನ್ನು ಯಾವುದೇ ಸೀಮೆಯು ತಡೆಯುವದಿಲ್ಲ. ಆದ್ದರಿಂದ ಮನಸ್ಸಿನ ಬಂಧವು ಮತ್ತು ಮೋಕ್ಷದಲ್ಲಿ ವಿಶಿಷ್ಟ ಮಹತ್ವವಿದೆ. ಆದ್ದರಿಂದ ಎಲ್ಲ ಪ್ರಕಾರದ ಸಾಧನೆಯ ಆಧಾರವು ಮನಸ್ಸಿನ ಮೇಲೆಯೇ ಇರುತ್ತದೆ. ಮತ್ತು ಮನಸ್ಸು ಯಾವ ವಿಷಯದ ಮೇಲೆ ಚಿಂತನ ಮಾಡುತ್ತದೆ. ಇದನ್ನು ತಿಳಿಯುವದು ಅತ್ಯಂತ ಆವಶ್ಯಕವಾಗುತ್ತದೆ. ಏಕೆಂದರೆ ಅದರಿಂದಲೇ ಆತ್ಮನ ಯೋಗ್ಯತೆಯು ತಿಳಿದುಬರುತ್ತದೆ ಮತ್ತು ಹೊಸ ಕರ್ಮಗಳ ಬಂಧದಿಂದಲೂ ಸಹ ಉಳಿದುಕೊಳ್ಳಬಹುದು.

ಈ ಮನಸ್ಸಿನ ಏಕಾಗ್ರತಾರೂಪಿ ಧ್ಯಾನವು ಶುಭ, ಅಶುಭ ಮತ್ತು ಶುದ್ಧ ಹೀಗೆ ಮೂರು ಪ್ರಕಾರ ಆಗಿರುತ್ತದೆ. ಈ ಧ್ಯಾನದಲ್ಲಿ ನಾಲ್ಕು ಪ್ರಕಾರಗಳು ಇರುತ್ತವೆ. ಆರ್ತಧ್ಯಾನ, ರೌದ್ರಧ್ಯಾನ, ಧರ್ಮಧ್ಯಾನ ಮತ್ತು ಶುಕ್ಲಧ್ಯಾನವಾಗಿದೆ. ಅವುಗಳಲ್ಲಿಯೂ ಸಹ ಬಹಳಷ್ಟು ಅಂತರ್ಭೇದಗಳಿವೆ. ಮಿಥ್ಯಾತ್ವ ಜೀವಗಳಿಗೆ ಆರ್ತಧ್ಯಾನ ಮತ್ತು ರೌದ್ರಧ್ಯಾನ ಹೆಸರಿನ ಎರಡು ಅಶುಭ ಧ್ಯಾನಗಳು ಸಹಜವಾಗಿಯೇ ಆಗುತ್ತವೆ. ಏಕೆಂದರೆ ಆತ್ಮನಿಗೆ ಅನಾದಿಕಾಲದಿಂದಲೂ ಸಂಸ್ಕಾರ ಇದೆ. ಅದರಂತೆಯೇ ಧ್ಯಾನದ್ದು ಇದೆ. ಆದಾಗ್ಯೂ ಪ್ರಯತ್ನಪೂರ್ವಕವಾಗಿ ಮನಸ್ಸನ್ನು ಅಶುಭದಲ್ಲಿ ಹೋಗುವದನ್ನು

ತಡೆಯಬಹುದಾಗಿದೆ. ಅಶುಭದಲ್ಲಿ ಹೋಗುವದರಿಂದ ತಡೆಯಲು ಬಹಳ ವಿಧಿಗಳಿರುತ್ತವೆ. ಹೇಗೆಂದರೆ ಆತ್ಮಲಕ್ಷ್ಯದಿಂದ, ಶಾಸ್ತ್ರಗಳ ಅಭ್ಯಾಸ, ಆತ್ಮಸ್ವರೂಪ ಚಿಂತನ, ಕರ್ಮದ ವಿಚಿತ್ರತೆಯ ಚಿಂತನ, ಲೋಕದ ಸ್ವರೂಪದ ಚಿಂತನ ಮುಂತಾದವು. ಹೀಗೆ ಮಿಥ್ಯಾತ್ವ ಜೀವಗಳ ಧ್ಯಾನವೂ ಸಹ ಶುಭ ಧರ್ಮಧ್ಯಾನ ಎಂದು ಕರೆಯುತ್ತಾರೆ. ಇದು ಶುದ್ಧ ಧರ್ಮಧ್ಯಾನವಲ್ಲ. ಆದ್ದರಿಂದ ಇದನ್ನು ಅಪೂರ್ವ ನಿರ್ಜರೆಯ ಕಾರಣ ಎಂದು ಮನ್ನಿಸಿಲ್ಲ. ಏಕೆಂದರೆ ಅಪೂರ್ವ ನಿರ್ಜರೆಯ ಸಲುವಾಗಿ ಧ್ಯಾನವು ಸಮ್ಯಗ್ದರ್ಶನ ಸಹಿತ ಇರುವದು ಅವಶ್ಯಕವಾಗಿದೆ. ಅಪೂರ್ವ ನಿರ್ಜರೆಯ ಸಲುವಾಗಿ ಶುದ್ಧೋಪಯೋಗ ಪೂರ್ವಕ ಧರ್ಮಧ್ಯಾನವಾಗುವದು ಆವಶ್ಯಕವಿದೆ. ಸಮ್ಯಗ್ದೃಷ್ಟಿಗೆ ಅದರ ನಂತರ ಶುದ್ಧಾತ್ಮನ ಧ್ಯಾನ ಮುಖ್ಯವಾಗಿರುತ್ತದೆ. ಅದರಿಂದ ಅದು ಗುಣಶ್ರೇಣಿ ನಿರ್ಜರೆಯ ಮೂಲಕ ಗುಣಸ್ಥಾನದ ಆರೋಹಣ ಮಾಡುತ್ತ ಮಾಡುತ್ತ ಮುಂದೆ ಶುಕ್ಲಧ್ಯಾನರೂಪಿ ಅಗ್ನಿಯಿಂದ ಎಲ್ಲ ಘಾತಿ ಕರ್ಮಗಳನ್ನು ನಾಶ ಮಾಡಿ ಕೇವಲಜ್ಞಾನ, ಕೇವಲದರ್ಶನ ಪ್ರಾಪ್ತ ಮಾಡುತ್ತಾನೆ ಮತ್ತು ಅನುಕ್ರಮದಿಂದ ಸಿದ್ಧತ್ವವನ್ನು ಪಡೆಯುತ್ತಾನೆ.

ಬೇರೆ ಮತೀಯರ ಧ್ಯಾನವು ಹೇಗೆಂದರೆ ಯಾವುದೋ ಒಂದು ಬಿಂದುವಿನ ಮೇಲೆ ಏಕಾಗ್ರತೆಯನ್ನು ಮಾಡಿಸುತ್ತಾರೆ. ಕೆಲವರು ಶ್ವಾಸೋಚ್ಛ್ವಾಸದ ಮೇಲೆ ಏಕಾಗ್ರತೆ ಮಾಡಿಸುತ್ತಾರೆ ಅಥವಾ ಬೇರೆ ಯಾವುದೇ ಪ್ರಕಾರದಿಂದ ಮಾಡಿಸುತ್ತಾರೆ. ಆದರೆ ಇದರಿಂದ ದೇಹಾಧ್ಯಾಸವೇ ದೃಢವಾಗುತ್ತದೆ. ಇಂಥ ಯಾವುದೇ ಧ್ಯಾನವು ವಾಸ್ತವದಲ್ಲಿ ಆರ್ತಧ್ಯಾನವೇ ಇದೆ. ಇಂಥ ಧ್ಯಾನ ಮಾಡುವದರಿಂದ ಮನಸ್ಸಿಗೆ ಸ್ವಲ್ಪ ಶಾಂತಿ ಸಿಗುವ ಕಾರಣ ಜನರು ಮೋಸ ಹೋಗುತ್ತಾರೆ ಮತ್ತು ಅದನ್ನೇ ನಿಜವಾದ ಧ್ಯಾನವೆಂದು ಮನ್ನಿಸುತ್ತಾರೆ. ಶ್ವಾಸೋಚ್ಛ್ವಾಸ ನೋಡುವದರಿಂದ ಮತ್ತು ಅದರ ಸರಿಯಾಗಿ ಅಭ್ಯಾಸ ಆಗುವದರಿಂದ ಆಗ ಕಷಾಯದ ಉದ್ಭವವಾಗುವದು. ಅದರ ಪರಿಚಯವಾದ ಬಳಿಕವೂ ಸಹ ಸ್ವತಃ ಯಾರು ಇದ್ದಾರೆ, ಅದರ ಸ್ವಾತ್ಮಾನುಭೂತಿ ಪೂರ್ವಕ ಜ್ಞಾನ ಇಲ್ಲದಿರುವದರಿಂದ ಈ ಎಲ್ಲ ಧ್ಯಾನಗಳ ಆರ್ತಧ್ಯಾನದ ರೂಪದಲ್ಲಿಯೇ ಪರಿಣಮಿಸುತ್ತವೆ. ಇಂಥ ಆರ್ತಧ್ಯಾನದ ಫಲ ತಿರ್ಯಂಚಗತಿ ಇದೆ. ಕ್ರೋಧ, ಮಾನ, ಮಾಯಾ, ಕಪಟರೂಪ ಧ್ಯಾನ ರೌದ್ರ ಧ್ಯಾನವಿದೆ ಮತ್ತು ಅದರ ಫಲ

ನರಕಗತಿ ಇದೆ. ಧರ್ಮಧ್ಯಾನದ ಅಂತರ್ಭೇದಗಳಲ್ಲಿಯೂ ಸಹ ಆತ್ಮನೇ ಕೇಂದ್ರದಲ್ಲಿ ಇದ್ದಾನೆ. ಆದ್ದರಿಂದಲೇ ಅದನ್ನು ಸಮ್ಯಕ್‌ಧ್ಯಾನ ಎಂದು ಹೇಳಲಾಗುತ್ತದೆ.

ಯಾರೋ ಹೀಗೆ ಮನ್ನಿಸುತ್ತಾರೆ. ಹೇಗೆಂದರೆ ಸಮ್ಯಗ್ದರ್ಶನವು ಧ್ಯಾನದ ಹೊರತು ಆಗುವದಿಲ್ಲ. ಆದರೆ ಅವರಿಗೆ ಇದನ್ನು ತಿಳಿಸುವದು ಅವಶ್ಯಕವಿದೆ. ಏನೆಂದರೆ ಸಮ್ಯಗ್ದರ್ಶನ ಭೇದಜ್ಞಾನದ ಹೊರತು ಆಗುವದಿಲ್ಲ. ಧ್ಯಾನದ ಹೊರತಂತೂ ಆಗುತ್ತದೆ. ಆದ್ದರಿಂದ ಸಮ್ಯಗ್ದರ್ಶನದ ಸಲುವಾಗಿ ಧ್ಯಾನದ ಅವಶ್ಯಕತೆಯಿಲ್ಲ. ಆದರೆ ಶಾಸ್ತ್ರಗಳ ಆಧಾರದ ಮೇಲೆ ಉತ್ತಮ ಪ್ರಕಾರದ ನಿರ್ಣಯ ಮಾಡಿದ ತತ್ವಜ್ಞಾನ ಮತ್ತು ಸಮ್ಯಗ್ದರ್ಶನದ ವಿಷಯರೂಪಿ ಶುದ್ಧಾತ್ಮನ ಜ್ಞಾನ. ಆ ಶುದ್ಧಾತ್ಮನಿಂದ 'ಸನ್ನತನ' ಮಾಡುತ್ತಲೇ ಸ್ವಾತ್ಮಾನುಭೂತಿ ರೂಪಿ ಸಮ್ಯಗ್ದರ್ಶನ ಪ್ರಕಟವಾಗುತ್ತದೆ. ಆದ್ದರಿಂದ ಈ ಮಾನವ ಭವದಲ್ಲಿ ಒಂದು ವೇಳೆ ಸ್ವಲ್ಪವೇ ಸಹ ಏನಾದರೂ ಪ್ರಾಪ್ತ ಮಾಡಲು ಯೋಗ್ಯ ಇದ್ದರೆ ಅದು ಒಂದೇ ಮಾತ್ರ ನಿಶ್ಚಯ ಸಮ್ಯಗ್ದರ್ಶನವೇ ಇದೆ. ನಿಶ್ಚಯ ಸಮ್ಯಗ್ದರ್ಶನವು ಮೊಟ್ಟ ಮೊದಲು ಪ್ರಾಪ್ತ ಮಾಡಲು ಯೋಗ್ಯವಿದೆ. ನಿಶ್ಚಯ ಸಮ್ಯಗ್ದರ್ಶನದಿಂದ ಸ್ವಂತಕ್ಕೆ ಮೋಕ್ಷಮಾರ್ಗದಲ್ಲಿ ಪ್ರವೇಶ ದೊರೆಯುತ್ತದೆ ಮತ್ತು ಪುರುಷಾರ್ಥವು ಸ್ಫುರಾಯಮಾನವಾದ ಬಳಿಕ ಮುಂದೆ ಸಿದ್ಧಪದವಿಯೇ ಪ್ರಾಪ್ತವಾಗುತ್ತದೆ. ಯಾವುದೆಂದರೆ ಅವ್ಯಾಬಾಧ ಸುಖಸ್ವರೂಪವಿದೆ. ಅದರಿಂದ ಶಾಶ್ವತ ಸುಖ ಪ್ರಾಪ್ತಿಯಾಗುತ್ತದೆ. ಎಲ್ಲರಿಗೂ ಇಂಥ ಶಾಶ್ವತ ಸುಖದ ಪ್ರಾಪ್ತಿಯಾಗಲಿ. ಇದೇ ಭಾವನೆಯೊಂದಿಗೆ.....

ಜಿನಾಜ್ಞೆಯಿಂದ ವಿರುದ್ಧ ನಮ್ಮಿಂದ ಸ್ವಲ್ಪ ಏನಾದರೂ ಸಹ ಬರೆಯಲ್ಪಟ್ಟಿದ್ದರೆ ನಮ್ಮ ತ್ರಿವಿಧ-ತ್ರಿವಿಧ ಪೂರ್ವಕವಾಗಿ ಕ್ಷಮಿಸಿರಿ.

ಓಂ ಶಾಂತಿ ಶಾಂತಿ ಶಾಂತಿಃ

## ಪ್ರಾತಃಕಾಲ ಎದ್ದು.....

ದಿನಾಲು ಮುಂಜಾನೆ ಸೂರ್ಯೋದಯಕ್ಕಿಂತ ಮೊದಲು ಎದ್ದು ಅರ್ಥಸಹಿತ ನಮಸ್ಕಾರ ಮಂತ್ರದ ಜಪ ಮಾಡುವದು ಮತ್ತು ಸಾಧ್ಯವಾದರೆ ಪ್ರತಿಯೊಂದು ಪದದ ಮೂರು, ಒಟ್ಟು ಹದಿನೈದು ವಂದನೆ ಮಾಡಿ ಮತ್ತೆ ಪ್ರತಿಕ್ರಮಣ ಮಾಡುವದು. ಒಂದು ವೇಳೆ ಸಂಪೂರ್ಣ ಪ್ರತಿಕ್ರಮಣ ಮಾಡಲು ಸಮಯವಿಲ್ಲದಿದ್ದರೆ ಇಲ್ಲಿ ಕೊಟ್ಟಂತಹ ಭಾವ ಪ್ರತಿಕ್ರಮಣ ಅವಶ್ಯವಾಗಿ ಮಾಡಬೇಕು. ಮೊದಲು ಸೀಮಂಧರ ಪ್ರಭುವಿನ ಆಜ್ಞೆಯನ್ನು ತೆಗೆದುಕೊಂಡು ಸಾಮಾಯಿಕ ಸ್ವೀಕರಿಸಬೇಕು. ಅಥವಾ ಮೂರು ನಮಸ್ಕಾರ ಮಂತ್ರ ಓದಬೇಕು. ಅಲ್ಲಿಯ ವರೆಗೆ ಸಂವರ ಧರಿಸಬೇಕು.

ಪ್ರತಿಕ್ರಮಣ :

**ಓಂ ಣಮೋ ಅರಿಹಂತಾಣಂ ।**
**ಓಂ ಣಮೋ ಸಿದ್ಧಾಣಂ ।**
**ಓಂ ಣಮೋ ಆಯಿರಿಯಾಣಂ ।**
**ಓಂ ಣಮೋ ಉವಜ್ಝಾಯಾಣಂ ।**
**ಓಂ ಣಮೋ ಲೋಏ ಸವ್ವಸಾಹೂಣಂ ।**

ಹೇ ಜಿನೇಂದ್ರ ದೇವ ! ಹೇ ದೇವಾಧಿದೇವ ! ಹೇ ವೀತರಾಗೀ ! ಸರ್ವಹಿತೋಪದೇಶಿ । ಅರಹಂತ ಪ್ರಭು ।

1. ನಾನು ಪಾಪನಾಶಗೊಳಿಸುವ ಸಲುವಾಗಿ, ಪಾಪದಿಂದ ಮುಕ್ತನಾಗುವ ಸಲುವಾಗಿ, ಆತ್ಮನ ಏಳಿಗೆಯ ಸಲುವಾಗಿ, ಆತ್ಮನನ್ನು ಜಾಗೃತಗೊಳಿಸುವ ಸಲುವಾಗಿ ಪ್ರತಿಕ್ರಮಣವನ್ನು ಮಾಡುತ್ತೇವೆ.

(ಈ ರೀತಿ ಪ್ರತಿಜ್ಞೆ ಮಾಡಿ ಒಂದು ಆಸನದಲ್ಲಿ ಕುಳಿತು ಪ್ರತಿಕ್ರಮಣ ಮಾಡಬೇಕು.

2. ಸಮತಾ ಸರ್ವಭೂತೇಷು ಸಂಯಮಃ ಶುಭ ಭಾವನಾ ।
ಆರ್ತ್ರರೌದ್ರ ಪರಿತ್ಯಾಗಃ ತದ್ಧಿ ಪ್ರತಿಕ್ರಮಣಂ ಮತಮ್ ॥

ಎಲ್ಲ ಜೀವಿಗಳ ಮೇಲೆ ಸಮತಾಭಾವವನ್ನು ಧರಿಸಿಕೊಂಡು ಶುಭಭಾವನೆಯನ್ನು ಭಾವಿಸುತ್ತ, ಆರ್ತ್ರ ರೌದ್ರ ಭಾವನೆಗಳನ್ನು ತ್ಯಾಗ ಮಾಡುವದೇ ಪ್ರತಿಕ್ರಮಣವಾಗಿದೆ.

3. ನಾನು ಪಾಪಿ ಇದ್ದೇನೆ. ದುರಾತ್ಮನಿದ್ದೇನೆ. ಜಡಬುದ್ಧಿಯುಳ್ಳವ ಇದ್ದೇನೆ, ಮಾಯಾಚಾರಿ ಇದ್ದೇನೆ. ಲೋಭ ಮತ್ತು ರಾಗದ್ವೇಷಗಳಿಂದ ಮಲಿನ ಮನಸ್ಸುಳ್ಳವನಿದ್ದೇನೆ ಮತ್ತು ಅನೇಕ ದುಷ್ಟ ಕಾರ್ಯಗಳನ್ನು ಮಾಡಿದ್ದೇನೆ.

4. ಹೇ ಮೂರು ಲೋಕಗಳ ಅಧಿಪತಿಯೇ! ಹೇ ಜಿನೇಂದ್ರ ದೇವ! ನಿರಂತರವಾಗಿ ಯಥಾರ್ಥ ಮಾರ್ಗದಲ್ಲಿಯೇ ನಡೆಯಬೇಕೆಂಬ ಹಂಬಲ ಉಳ್ಳವನಾಗಿದ್ದೇನೆ. ಇಂದು ನಾನು ತಮ್ಮ ಪಾದ ಮೂಲದಲ್ಲಿಯೇ ನಿಂದಾಪೂರ್ವಕವಾಗಿ ಆ ಎಲ್ಲ ದೋಷಗಳ ತ್ಯಾಗ ಮಾಡುತ್ತೇನೆ.

5. ಅಯ್ಯೋ! ನಾನು ಶರೀರದಿಂದ ದುಷ್ಟ ಕಾರ್ಯ ಮಾಡಿದ್ದೇನೆ. ಮನಸ್ಸಿನಿಂದ ದುಷ್ಟ ವಿಚಾರ ಮಾಡಿದ್ದೇನೆ. ಮುಖದಿಂದ ದುಷ್ಟ ವಚನಗಳನ್ನು ಆಡಿದ್ದೇನೆ. ಅದರ ಸಲುವಾಗಿ ನಾನು ಪಶ್ಚಾತ್ತಾಪ ಮಾಡಿಕೊಂಡು ಒಳಗೊಳಗೇ ನೋವು ಅನುಭವಿಸುತ್ತಿದ್ದೇನೆ.

6. ನಿಂದೆ ಮತ್ತು ಗರ್ಹಾಗಳಿಂದ ಕೂಡಿದವನಾಗಿ ದ್ರವ್ಯ, ಕ್ಷೇತ್ರ, ಕಾಲ ಮತ್ತು ಭಾವಪೂರ್ವಕವಾಗಿ ಮಾಡಿದ ಅಪರಾಧಗಳ ಶುದ್ಧಿಯ ಸಲುವಾಗಿ ನಾನು ಮನ, ವಚನ, ಕಾಯಗಳಿಂದ ಪ್ರತಿಕ್ರಮಣ ಮಾಡುತ್ತೇನೆ.

7. ಸಮಸ್ತ ಸಂಸಾರಿ ಜೀವಗಳ ಉತ್ಪತ್ತಿ ಸ್ಥಾನಗಳು 84 ಲಕ್ಷ ಇರುತ್ತವೆ. ಇದೇ ಜೀವಗಳ ಒಟ್ಟು ಕುಲಗಳು 199 $^1/_2$ ಲಕ್ಷ ಕೋಟಿ ಇವೆ. ಈ ಜೀವಗಳನ್ನು ಅಗಲಿಸಿದ್ದರೆ ಆ ಸಮುಂಯುದಲ್ಲಾದ ರಾಗದ್ವೇಷಗಳಿಂದ ತಗುಲಿದ ಪಾಪವು ನನ್ನಿಂದ ಮಿಥ್ಯೆಯಾಗಲಿ, ನಾಶವಾಗಲಿ.

8. ಹೇ ಪರಮಾತ್ಮ! ಏಕೇಂದ್ರಿಯ, ದ್ವೀಂದ್ರಿಯ, ತ್ರೀಂದ್ರಿಯ, ಚತುರಿಂದ್ರಿಯ ಮತ್ತು ಪಂಚೇಂದ್ರಿಯ ಹಾಗೂ ಪೃಥ್ವಿಕಾಯಿಕ, ಜಲಕಾಯಿಕ, ಅಗ್ನಿಕಾಯಿಕ, ವಾಯುಕಾಯಿಕ, ವನಸ್ಪತಿಕಾಯಿಕ ಮತ್ತು ತ್ರಸಕಾಯಕ ಎಂಬ ಜೀವಗಳಿರುತ್ತವೆ. ಇವುಗಳ ವಧೆ ಮಾಡಿದ್ದರೆ, ಸಂತಾಪವನ್ನು ಉಂಟುಮಾಡಿದ್ದರೆ, ಅಗಲಿಸಿದ್ದರೆ ಮತ್ತು ಅಂಗಭೇದ ಮಾಡಿದ್ದರೆ, ಇನ್ನೊಬ್ಬರಿಂದ ಮಾಡಿಸಿದ್ದರೆ, ಮಾಡುವವರಿಗೆ ಅನುಮೋದನೆ ನೀಡಿದ್ದರೆ ಅದರಿಂದ ಉಂಟಾಗುವ ನನ್ನ ಎಲ್ಲ ಪಾಪಕರ್ಮಗಳು ಮಿಥ್ಯೆಯಾಗಲಿ, ನಾಶವಾಗಲಿ.

9. ಸೂಕ್ಷ್ಮ, ಬಾದರ, ಪರ್ಯಾಪ್ತ, ನಿವೃತ್ತ ಪರ್ಯಾಪ್ತಕ ಮತ್ತು ಲಬ್ಧಪರ್ಯಾಪ್ತಕ ಜೀವಗಳಲ್ಲಿಂದ ಯಾವುದೇ ಜೀವಕ್ಕೆ ಅಗಲಿಸಿದ್ದರೆ ಅದರಿಂದ ಉಂಟಾಗುವ ಪಾಪಕರ್ಮವು ನಾಶವಾಗಲಿ, ಮಿಥ್ಯೆಯಾಗಲಿ.

10. ಏಕಾಂತ, ವಿನಯ, ವಿಪರೀತ, ಸಂಶಯ ಮತ್ತು ಅಜ್ಞಾನ ಈ ಐದು ಪ್ರಕಾರದ ಮಿಥ್ಯಾಮಾರ್ಗಗಳು ಮತ್ತು ಇವುಗಳನ್ನು ಅನುಸರಿಸುವವರನ್ನು ಮನ, ವಚನಗಳಿಂದ ಪ್ರಶಂಸೆ ಮಾಡಿದ್ದರೆ ಅದರಿಂದ ಉಂಟಾಗುವ ನನ್ನ ಎಲ್ಲ ಪಾಪವು ಕ್ಷಯವಾಗಲಿ.

11. ಹೇ ಜಿನೇಶ್ವರಾ! ಜಿನದರ್ಶನ, ಜಲಗಾಲನ, ಜೀವದಯೆ, ರಾತ್ರಿಭೋಜನ ತ್ಯಾಗ, ಪಂಚ ಔದುಂಬರ ಫಲತ್ಯಾಗ, ಮಧುತ್ಯಾಗ, ಮಾಂಸತ್ಯಾಗ ಈ ಎಂಟು ಶ್ರಾವಕರ ಮೂಲ ಗುಣಗಳನ್ನು ಪಾಲಿಸುವಲ್ಲಿ ಅತಿಚಾರದಿಂದ ತಗುಲಿದ ನನ್ನ ಎಲ್ಲ ಪಾಪಗಳು ನಾಶವಾಗಲಿ.

12. ಹೇ ಭಗವನ್! ಈ ಮೂಲ ಗುಣಗಳ ಅಂತರ್ಗತವಾಗಿ ಜಿನದರ್ಶನ ವ್ರತ ಪಾಲನೆಯಲ್ಲಿ ಪ್ರಮಾದಗಳಾಗಿದ್ದರೆ ಅವಿನಯದಿಂದ ದರ್ಶನ ಮಾಡಿದ್ದರೆ ಹಾಗೂ ದರ್ಶನ ಮತ್ತು ಪೂಜೆ ಮಾಡುವಾಗ ಮನ, ವಚನ, ಕಾಯದ ಶುದ್ಧಿ ಇಟ್ಟಿರದಿದ್ದರೆ, ಜಿನದರ್ಶನ ವ್ರತ ಪಾಲಿಸುತ್ತ ಜಿನಮಾರ್ಗದಲ್ಲಿ ಸಂಶಯ ವ್ಯಕ್ತಪಡಿಸಿದ್ದರೆ, ಶುಭ ಆಚರಣೆ ಮಾಡಿ ಸಂಸಾರ ಸುಖದ ಇಚ್ಛೆ ಮಾಡಿದ್ದರೆ, ಧರ್ಮಾತ್ಮರ ಮಲಿನ

ಶರೀರವನ್ನು ನೋಡಿ ಗ್ಲಾನಿ ಮಾಡಿಕೊಂಡಿದ್ದರೆ, ಮಿಥ್ಯಾಮಾರ್ಗ ಮತ್ತು ಅದನ್ನು ಅನುಸರಿಸುವಂತಹ ವ್ಯಕ್ತಿಗಳನ್ನು ಮನಸ್ಸಿನಿಂದ ಪ್ರಶಂಸೆ ಮಾಡಿದ್ದರೆ ಹಾಗೂ ಮಿಥ್ಯಾಮಾರ್ಗದ ಸ್ತುತಿ ಮಾಡಿದ್ದರೆ ಇದರಿಂದ ಅತಿಚಾರ ದೋಷಗಳು ತಗುಲಿದ್ದರೆ ಅದರಿಂದ ಉಂಟಾದ ಎಲ್ಲ ಪಾಪಗಳು ಕ್ಷಯವಾಗಲಿ.

13. ಹೇ ನಾಥ! ಮೂಲಗುಣಗಳ ಅಂತರ್ಗತವಾಗಿರುವ ನೀರನ್ನು ಸೋಸಿ ಉಪಯೋಗಿಸುವ ವ್ರತದಲ್ಲಿ ಪ್ರಮಾದ ಮಾಡಿದ್ದರೆ, ನೀರು ಸೋಸಿದ 48 ಮಿನಿಟುಗಳ ನಂತರ ಆ ನೀರನ್ನು ಮತ್ತು ಸೋಸದೆ ಹಾಗೆಯೇ ಉಪಯೋಗ ಮಾಡಿದ್ದರೆ, ಪ್ರಮಾಣಕ್ಕಿಂತ ಸಣ್ಣದು, ಒಂದು ಪದರಿನ ಮಲಿನವಾದ, ಹಳೆಯದಾದ, ತೂತುಬಿದ್ದ ಬಟ್ಟೆಯಿಂದ ಸೋಸಿ ಉಪಯೋಗಿಸಿದ್ದರೆ, ಬಿಸಿನೀರಿನ ಮರ್ಯಾದೆಯು ಮುಗಿದ ಬಳಿಕವೂ ಉಪಯೋಗಿಸಿದ್ದರೆ, ಸೋಸಿದ ಬಳಿಕ ಉಳಿದ ನೀರನ್ನು ಮತ್ತು ಜೀವಾಳವನ್ನು ಯಥಾಸ್ಥಾನದಲ್ಲಿ ಮುಟ್ಟಿಸದೇ ಹೋಗಿದ್ದರೆ, ಅದನ್ನು ಎಲ್ಲಿಯಾದರೂ ಬಿಟ್ಟಿದ್ದರೆ, ಈ ಕಾರ್ಯದಲ್ಲಿ ಪ್ರಮಾದ ಉಂಟಾಗಿದ್ದರೆ ಇದರಿಂದ ತಗುಲಿದ ಎಲ್ಲ ದೋಷಗಳು ನನ್ನಿಂದ ಸುಳ್ಳಾಗಲಿ, ನಾಶವಾಗಲಿ.

14. ಹೇ ದೇವಾಧಿದೇವ! ಮೂಲಗುಣಗಳ ಅನುಸಾರವಾಗಿ ರಾತ್ರಿಭೋಜನ ತ್ಯಾಗ ವ್ರತದಲ್ಲಿ ರಾತ್ರಿಭೋಜನ ಮಾಡಿದ್ದರೆ ಸೂರ್ಯೋದಯದಿಂದ 48 ನಿಮಿಷಗಳ ಒಳಗೆ ಅಥವಾ ಸೂರ್ಯಾಸ್ತದ ಒಂದು ಮುಹೂರ್ತ ಮೊದಲು ಹಾಗೂ ಔಷಧದ ನಿಮಿತ್ತ ರಾತ್ರಿಯಲ್ಲಿ ರಸ, ಫಲ ಮುಂತಾದವುಗಳನ್ನು ಸೇವನೆ ಮಾಡಿದ್ದರೆ, ಮಾಡಿಸಿದ್ದರೆ, ಮಾಡುವವರಿಗೆ ಅನುಮೋದನೆ ನೀಡಿದ್ದರೆ, ಇದಕ್ಕೆ ಸಂಬಂಧಿಸಿದ ಬೇರೆ ಅತಿಚಾರ, ಅನಾಚಾರ ದೋಷಗಳು ತಗುಲಿದ್ದರೆ ಆ ಎಲ್ಲ ಪಾಪಗಳು ನನ್ನಿಂದ ಮಿಥ್ಯೆಯಾಗಲಿ, ಸುಳ್ಳಾಗಲಿ.

15. ಹೇ ಕರುಣಾಸಾಗರ! ಮೂಲಗುಣಗಳ ಅನುಸಾರ 5 ಔದುಂಬರ ಫಲತ್ಯಾಗ ವ್ರತದಲ್ಲಿ ಒಣಗಿದ ಅಥವಾ ಔಷಧದ ನಿಮಿತ್ತವಾಗಿ

ಉದುಂಬರ ಫಲಗಳು, ಸರ್ವಸಾಧಾರಣ, ವನಸ್ಪತಿಗಳು, ಹಸಿಶುಂಠಿ, ಅರಿಷಿಣ, ಗಜ್ಜರಿ, ಮೂಲಂಗಿ, ಗೆಣಸು ಮುಂತಾದ ಅನಂತ ಕಾಯಿಕ ವನಸ್ಪತಿಗಳು, ತ್ರಸಜೀವಗಳ ಆಶ್ರಯಭೂತವಾದ ವನಸ್ಪತಿಗಳು, ಹರಿಯಲಾರದ ಸೇಮಫಲಿ ಹಾಗೂ ಹೆಸರು ಗೊತ್ತಿರದ ಫಲಗಳನ್ನು ಸೇವಿಸಿದ್ದರೆ ಸೇವಿಸುವಂತೆ ಮಾಡಿದ್ದರೆ, ಸೇವಿಸುವವರಿಗೆ ಅನುಮೋದನೆ ನೀಡಿದ್ದರೆ ಮುಂತಾದ ಅತಿಚಾರ, ಅನಾಚಾರ ದೋಷಗಳು ನನ್ನಿಂದಾಗಿದ್ದರೆ ಅವೆಲ್ಲವೂ ಮಿಥ್ಯೆಯಾಗಲಿ.

16. ಹೇ ದಯಾಸಾಗರ ! ಮೂಲಗುಣಗಳ ಅನುಸಾರ ಮದ್ಯತ್ಯಾಗ ವ್ರತದಲ್ಲಿ ಮರ್ಯಾದೆ ಹೊರಗಿನ ಉಪ್ಪಿನಕಾಯಿ, ಗುಳಂಬ ಮುಂತಾದ ಎಲ್ಲ ಪ್ರಕಾರದ ವಸ್ತುಗಳನ್ನು ಮತ್ತು ಮೊಸರು, ಮಜ್ಜಿಗೆ, ಕಾಂಜಿ ಮುಂತಾದವುಗಳನ್ನು ಅಲ್ಲ, ಭಂಗ, ನಾಗಫೇನ, ಧತೂರಾ, ಖಸಖಿಸಿಯ ಸೊಪ್ಪಿ, ಚರಸ ಮತ್ತು ಗಾಂಜಾ ಮುಂತಾದ ನಶೆ ತರಿಸುವ ಪದಾರ್ಥಗಳನ್ನು ಸ್ವತಃ ಸೇವಿಸಿದ್ದರೆ ಇನ್ನೊಬ್ಬರಿಗೆ ಸೇವಿಸುವಂತೆ ಮಾಡಿದ್ದರೆ, ಅನುಮೋದನೆ ನೀಡಿದ್ದರೆ ಅಥವಾ ಇದಕ್ಕೆ ಸಂಬಂಧಿಸಿದಂತೆ ಅತಿಚಾರ, ಅನಾಚಾರ ದೋಷಗಳು ತಗುಲಿದ್ದರೆ ಅವೆಲ್ಲವುಗಳು ನನ್ನಿಂದ ಮಿಥ್ಯೆಯಾಗಲಿ.

17. ಹೇ ಕರುಣಾಸಾಗರ ! ಮೂಲಗುಣಗಳ ಅಂತರ್ಗತ ಮಾಂಸತ್ಯಾಗ ವ್ರತದಲ್ಲಿ ಚರ್ಮದಿಂದ ಮುಚ್ಚಲ್ಪಟ್ಟ ಅಥವಾ ಸ್ಪರ್ಶಿಸಲ್ಪಟ್ಟ ಹಿಂಗು, ತುಪ್ಪ, ಎಣ್ಣೆ, ನೀರು ಮುಂತಾದವುಗಳನ್ನು ಉಪಯೋಗಿಸಿದ್ದರೆ ತ್ರಸಜೀವಗಳ ಘಾತವಾಗಿದ್ದ ಆಹಾರ ಸೇವನೆ ಮಾಡಿದ್ದರೆ ವಿಧಿಪೂರ್ವಕವಾಗಿ ಸೋಸದೇ ಇರುವ ನೀರು, ತುಪ್ಪ, ಹಾಲು, ಎಣ್ಣೆ ಮುಂತಾದವುಗಳನ್ನು ಹಳಸಿದ, ಹುಳುಹತ್ತಿದ ಧಾನ್ಯಗಳು, ಶೋಧನ ವಿಧಿಯಿಂದ ಅಪರಿಚಿತ ಅಥವಾ ಶೋಧನ ವಿಧಿಯ ತಿಳಿವಳಿಕೆ ಇಲ್ಲದವರ ಕೈಯಿಂದ ತಯಾರಾದ ಆಹಾರ ಸೇವನೆ ಆಮಂತ್ರಣದ ಊಟ, ರಾತ್ರಿಭೋಜನ, ಗರಿಷ್ಠ ರಸ ಪದಾರ್ಥಗಳು, ಒಡೆದು ನೋಡದ ಕಾಜೂಫಲಗಳು ಹಳೆಯ ಶೇಂಗಾ ಮತ್ತು ಸೋಮಫಲ, ಭೇಂಡಿ ಮುಂತಾದವುಗಳು, ಅಮರ್ಯಾದಿತ ಹಾಲು,

ಮೊಸರು, ಮಜ್ಜಿಗೆ ಮುಂತಾದ ಪದಾರ್ಥಗಳ ಸೇವನೆ ಮಾಡಿದ್ದರೆ ಮಾಡಿಸಿದ್ದರೆ ಅನುಮೋದನೆ ಮಾಡಿದ್ದರೆ ಅದರಿಂದ ಉಂಟಾದ ಅತಿಚಾರ, ಅನಾಚಾರ ದೋಷಗಳು ಮಿಥ್ಯೆಯಾಗಲಿ.

18. ಹೇ ಪರಮಾತ್ಮ! ಮೂಲಗುಣಗಳ ಅಂತರ್ಗತ ಜೇನುತುಪ್ಪದ ತ್ಯಾಗ ವ್ರತದಲ್ಲಿ ಔಷಧೀಯ ನಿಮಿತ್ತವಾಗಿ ಜೇನುತುಪ್ಪ, ಹೂವಿನ ರಸ, ಮತ್ತು ಗುಲಕಂದ ಮುಂತಾದವುಗಳನ್ನು ಸ್ವತಃ ಸೇವಿಸಿದ್ದರೆ ಇನ್ನೊಬ್ಬರಿಗೆ ಸೇವನೆ ಮಾಡಿಸಿದ್ದರೆ, ಅನುಮೋದನೆ ನೀಡಿದ್ದರೆ, ಅದರಿಂದ ಉಂಟಾಗುವ ಅತಿಚಾರ, ಅನಾಚಾರ ದೋಷಗಳು ಮಿಥ್ಯೆಯಾಗಲಿ, ಸುಳ್ಳಾಗಲಿ.

19. ಹೇ ! ನಿತ್ಯ ನಿರಂಜನದೇವಾ ! ಮೂಲಗುಣಗಳ ಅಂತರ್ಗತವಾದ ವ್ರತಪಾಲನೆಯಲ್ಲಿ ಪ್ರಮಾದ ಏನಾದರೂ ಮಾಡಿದ್ದರೆ ಅಜ್ಞಾನವಾಗಿದ್ದರೆ ಅಪೇಕ್ಷೆ ಮಾಡಿದ್ದರೆ ಪ್ರಯೋಜನ ರಹಿತವಾಗಿ ಜೀವಿಗಳಿಗೆ ತೊಂದರೆ ನೀಡಿದ್ದರೆ ಹಾಗೂ ಅಂಗೋಪಾಂಗಗಳನ್ನು ಕತ್ತರಿಸಿದ್ದರೆ ಇನ್ನೊಬ್ಬರಿಂದ ಮಾಡಿಸಿದ್ದರೆ ಅಥವಾ ಅನುಮತಿ ನೀಡಿದ್ದರೆ ಅದರಿಂದ ಯಾವುದೇ ದೋಷವಾಗಿದ್ದರೂ ಅದು ನನ್ನಿಂದ ನಾಶವಾಗಲಿ, ಮಿಥ್ಯೆಯಾಗಲಿ (9 ಸಲ ಣಮೋಕಾರ ಮಂತ್ರ ಪಠಿಸಿರಿ).

20. ಜೂಜು ಆಡುವದು, ಮಾಂಸ, ಸೆರೆ, ಬೇಟೆ, ವೇಶ್ಯಾಗಮನ, ಕಳ್ಳತನ, ಪರಸ್ತ್ರೀ ಸೇವನ ಎಂಬ ಸಪ್ತವ್ಯಸನಗಳ ಸೇವನೆ ಮಾಡಿದ್ದರೆ ಅದರಿಂದ ತಗುಲಿದ ಎಲ್ಲ ದೋಷಗಳು ನನ್ನಿಂದ ದೂರವಾಗಲಿ, ಮಿಥ್ಯೆಯಾಗಲಿ.

21. ದೇವದರ್ಶನ, ಪೂಜನ, ಸಾಧು ಉಪಾಸನೆ, ವೈಯಾವೃತ್ತಿ, ಸ್ವಾಧ್ಯಾಯ, ಸಂಯಮ, ಪಾಲನೆಯಲ್ಲಿ ಇಚ್ಛೆಗಳನ್ನು ಸೀಮಿತ ಮಾಡಿಕೊಂಡು ಗಳಿಸಿದ ಸಂಪತ್ತಿನ ಸದುಪಯೋಗ ಮಾಡಿಕೊಳ್ಳುವದು. (ದಾನ ಮಾಡುವದು) ಈ ಆರು ಅವಶ್ಯಕ ನಿಯಮಗಳಲ್ಲಿ ಅತಿಚಾರ ಪೂರ್ವಕವಾಗಿ ಯಾವುದೇ ದೋಷಗಳು ಆಗಿದ್ದರೆ ಅವು ನಾಶವಾಗಲಿ, ಸುಳ್ಳಾಗಲಿ.

22. ಇಷ್ಟವಿಯೋಗ, ಅನಿಷ್ಟಸಂಯೋಗ, ಪೀಡಾಚಿಂತನ ಮತ್ತು ನಿಧಾನಬಂಧ ಈ ನಾಲ್ಕು ಆರ್ತಧ್ಯಾನದ ಭೇದಗಳು. ಹಿಂಸಾನಂದ, ಮೃಷಾನಂದ, ಚೌರ್ಯಾನಂದ ಮತ್ತು ಪರಿಗ್ರಹಾನಂದ ಈ ನಾಲ್ಕು ರೌದ್ರಧ್ಯಾನದ ಭೇದಗಳು. ಇವೆಲ್ಲವುಗಳ ಮೂಲಕ ಯಾವ ಪಾಪ ತಗುಲಿದೆಯೋ ಅವೆಲ್ಲವೂ ನನ್ನಿಂದ ಮಿಥ್ಯೆಯಾಗಲಿ, ಸುಳ್ಳಾಗಲಿ.

23. ರಾಜಕಥಾ, ಚೋರಕಥಾ, ಸ್ತ್ರೀಕಥಾ ಮತ್ತು ಭೋಜನ ಕಥಾ ಕೇಳುವದರಿಂದ ಯಾವ ಪಾಪ ತಗುಲಿದೆಯೋ ಅದೆಲ್ಲವೂ ನನ್ನಿಂದ ಮಿಥ್ಯೆಯಾಗಲಿ.

24. ಜೀವಿಗಳನ್ನು ಪೀಡಿಸುವ ಯಾವ ದುಷ್ಟ ಮನಸ್ಸು, ದುಷ್ಟವಚನ ಮತ್ತು ದುಷ್ಟ ಶರೀರ ಇವು ಮೂರೂ ಮಾಯಾ, ಮಿಥ್ಯಾ, ನಿಧಾನ ಈ ಮೂರು ಶಲ್ಯಗಳು ಮತ್ತು ಶಬ್ದಗಾರವ, ಋದ್ಧಿಗಾರವ ಮತ್ತು 7 ಗಾರವಗಳು ಈ ಎಲ್ಲವುಗಳ ಮೂಲಕ ತಗುಲಿದ ಪಾಪವು ನನ್ನಿಂದ ಮಿಥ್ಯೆಯಾಗಲಿ.

25. ಮಿಥ್ಯಾದರ್ಶನ, ಅವಿರತಿ, ಪ್ರಮಾದ, ಕಷಾಯ ಮತ್ತು ಯೋಗ ಈ 5 ಆಸ್ರವಗಳ ಮೂಲಕ ಯಾವ ಪಾಪದ ಬಂಧವಾಗುವದೋ ಅದು ನನ್ನಿಂದ ಮಿಥ್ಯೆಯಾಗಲಿ.

26. ಆಹಾರ, ಭಯ, ಮೈಥುನ ಮತ್ತು ಪರಿಗ್ರಹ ಈ ನಾಲ್ಕು ಸಂಜ್ಞೆಗಳ ಮೂಲಕ ಯಾವ ಬಂಧವಾಗಿದೆಯೋ ಅದು ನನ್ನಿಂದ ಮಿಥ್ಯೆಯಾಗಲಿ. (9 ಸಲ ಣಮೋಕಾರ ಮಂತ್ರದ ಜಾಪ್ಯ)

27. ಸ್ಥೂಲ ಹಿಂಸೆಯ ತ್ಯಾಗ ವ್ರತ ಪಾಲಿಸುವಾಗ ಜೀವಿಗಳನ್ನು ಹೊಡೆದಿರಬಹುದು, ಕಟ್ಟಿ ಹಾಕಿರಬಹುದು, ಅಂಗ ಉಪಾಂಗಗಳನ್ನು ಕತ್ತರಿಸಿರಬಹುದು. ಹೆಚ್ಚು ಭಾರ ಹೊರಿಸಿರಬಹುದು ಮತ್ತು ನೀರು, ಆಹಾರ ಕೊಡದೇ ಇರಬಹುದು. ಇಂತಹ ಅನೇಕ ದೋಷಗಳನ್ನು ಮಾಡಿದ್ದರೆ, ಮಾಡಿಸಿದ್ದರೆ ಅನುಮೋದನೆ ನೀಡಿದ್ದರೆ ಅವುಗಳಿಂದ ಉಂಟಾದ ದೋಷಗಳು ಮಿಥ್ಯೆಯಾಗಲಿ.

28. ಸ್ಥೂಲ ಅಸತ್ಯ ತ್ಯಾಗ ವ್ರತದ ಪಾಲನೆ ಮಾಡುವಾಗ, ಮಿಥ್ಯಾ ಉಪದೇಶ ಕೊಡುವದು, ಏಕಾಂತದಲ್ಲಿ ಹೇಳಿದ ಮಾತುಗಳನ್ನು

ಪ್ರಕಟ ಮಾಡುವದು, ಸುಳ್ಳು ಕಾಗದ ಪತ್ರಗಳನ್ನು ರಚಿಸುವದು, ಗುಪ್ತವಾಗಿದ್ದ ಅಭಿಪ್ರಾಯಗಳನ್ನು ಅಂಗಚೇಷ್ಟೆಯಿಂದ ಪ್ರಕಟ ಮಾಡುವದು, ಇವುಗಳನ್ನು ಮನ, ವಚನ, ಕಾಯಗಳಿಂದ ಕೃತಕಾರಿತ, ಅನುಮೋದನೆಯಿಂದ ಮಾಡಿದ್ದರೆ ಅದರಿಂದ ಉಂಟಾದ ದೋಷವು ಕ್ಷಯವಾಗಲಿ, ನಾಶವಾಗಲಿ.

29. ಸ್ಥೂಲ ಕಳ್ಳತನ, ತ್ಯಾಗ ವ್ರತದ ಪಾಲನೆ ಮಾಡುವಲ್ಲಿ, ಕಳುವಿನ ವಸ್ತುಗಳನ್ನು ತೆಗೆದುಕೊಂಡರೆ ಸರಕಾರದ ವಿರುದ್ಧ ಕಾರ್ಯ ಮಾಡಿದ್ದರೆ ಎರಡನೆಯವರ ಸಂಪತ್ತನ್ನು ಹರಣ ಮಾಡುವ ಭಾವ ಮಾಡಿದ್ದರೆ ತೂಕ ಅಳತೆಯ ಮಾಪನದಲ್ಲಿ ಹೆಚ್ಚು ಕಡಿಮೆ ಮಾಡಿದ್ದರೆ ಮತ್ತು ಹೆಚ್ಚು ಬೆಲೆಯುಳ್ಳ ವಸ್ತುವಿನಲ್ಲಿ ಕಡಿಮೆ ಬೆಲೆಯುಳ್ಳ ವಸ್ತುಗಳ ಮಿಶ್ರಣ ಮಾಡಿ ಹೆಚ್ಚು ಬೆಲೆಗೆ ಮಾರಿದ್ದರೆ ಈ ಕಾರ್ಯಗಳನ್ನು ಇನ್ನೊಬ್ಬರಿಂದ ಮಾಡಿಸಿದ್ದರೆ, ಅನುಮೋದನೆ ನೀಡಿದ್ದರೆ ಅದರಿಂದ ಉಂಟಾದ ಎಲ್ಲ ದೋಷಗಳು ನನ್ನಿಂದ ದೂರವಾಗಲಿ.

30. ಸ್ಥೂಲ ಬ್ರಹ್ಮಚರ್ಯ ವ್ರತ ಪಾಲನೆಯಲ್ಲಿ ವ್ಯಭಿಚಾರಿಣಿ ಸ್ತ್ರೀಯ ಬಳಿ ಬರಹೋಗುವ ವ್ಯವಹಾರ ಮಾಡಿದ್ದರೆ, ಕುಮಾರಿ, ವಿಧವಾ ಅಥವಾ ಆಶ್ರಯ ರಹಿತ, ಪರಿಗ್ರಹ ರಹಿತ ಸ್ತ್ರೀಯರ ಬಳಿಗೆ ಬರಹೋಗುವ, ಕೊಡುಕೊಳ್ಳುವ ವ್ಯವಹಾರ ಮಾಡಿದ್ದರೆ ಅಥವಾ ಕಾಮಸೇವನೆಯ ಅಂಗಗಳನ್ನು ಬಿಟ್ಟು ಬೇರೆ ಅಂಗಗಳಿಂದ ಕುಚೇಷ್ಟೆ ಮಾಡಿದ್ದರೆ, ತೀವ್ರ ಕಾಮೇಚ್ಛೆ ಹೊಂದುವ ಗರಿಷ್ಠ ರಸಾಹಾರ ಸೇವಿಸಿದ್ದರೆ ತೀವ್ರ ಕಾಮಭಾವನೆ ಭಾವಿಸಿದ್ದರೆ ಈ ಎಲ್ಲವುಗಳನ್ನು ಸ್ವತಃ ಮಾಡಿದ್ದರೆ ಇನ್ನೊಬ್ಬರಿಂದ ಮಾಡಿಸಿದ್ದರೆ ಅನುಮೋದನೆ ನೀಡಿದ್ದರೆ ಅದರಿಂದ ಉಂಟಾದ ಎಲ್ಲ ದೋಷಗಳು ದೂರವಾಗಲಿ, ನಾಶವಾಗಲಿ.

31. ಸ್ಥೂಲ ಪರಿಗ್ರಹ ಪರಿಮಾಣ ವ್ರತದಲ್ಲಿ ಮನ, ವಚನ, ಕಾಯ ಮತ್ತು ಕೃತ, ಕಾರಿತ, ಅನುಮೋದನೆಯಿಂದ ಹೊಲ, ಮನೆ ಮುಂತಾದವುಗಳ ಪ್ರಮಾಣವನ್ನು ಮೀರಿ ಸಂಗ್ರಹಿಸಿದ್ದರೆ ದನಕರು ಸಂಪತ್ತನ್ನು, ಧಾನ್ಯ, ದಾಸೀ, ದಾಸ, ಕುಪ್ಯ, ಭಾಂಡಿ, ಬೆಳ್ಳಿ, ಬಂಗಾರ,

ಬಟ್ಟೆ ಮುಂತಾದವುಗಳನ್ನು ಅಳತೆ ಮೀರಿ ಸಂಗ್ರಹಿಸಿದ್ದರೆ ಅದರಿಂದ ತಗಲುವ ದೋಷದ ನಿವಾರಣೆಯಾಗಲಿ, ಮಿಥ್ಯೆಯಾಗಲಿ. (9 ಸಲ ಣಮೋಕಾರ ಮಂತ್ರದ ಜಾಪ್ಯ)

32. ದಿಗ್‌ವ್ರತ, ದೇಶವ್ರತ, ಅನರ್ಥ ದಂಡವ್ರತ ಈ ಮೂರು ಗುಣವ್ರತಗಳು ಮತ್ತು ಸಾಮಾಯಿಕ, ಪ್ರೋಷಧೋಪವಾಸ, ಭೋಗೋಪಭೋಗ ಪರಿಮಾಣ, ಅತಿಥಿ ಸಂವಿಭಾಗ ಈ ನಾಲ್ಕು ಶಿಕ್ಷಾವ್ರತಗಳು ಹೀಗೆ ಒಟ್ಟು 7 ಶೀಲವ್ರತಗಳಲ್ಲಿ ಯಾವುದೇ ದೋಷವು ತಗುಲಿದ್ದರೆ ಅದರಿಂದ ಉಂಟಾಗುವ ಪಾಪದ ನಾಶವಾಗಲಿ.

33. ಐದು ಇಂದ್ರಿಯಗಳು ಮತ್ತು ಮನಸ್ಸನ್ನು ವಶದಲ್ಲಿ ಇಟ್ಟುಕೊಳ್ಳಲಾರದ ಕಾರಣ ಯಾವ ಪಾಪವು ತಗಲುತ್ತದೆಯೋ ಅದರ ನಾಶವಾಗಲಿ.

34. ಮೋಹದ ವಶೀಭೂತನಾಗಿ ಅನೇಕ ಪ್ರಕಾರದ ಉತ್ತಮೋತ್ತಮ ಬಟ್ಟೆಗಳನ್ನು ಧರಿಸಿದ್ದರೆ ಸ್ತ್ರೀಯರನ್ನು ಆಕರ್ಷಿತಗೊಳಿಸಲು ಅನೇಕ ರೀತಿಯಾಗಿ ಶೃಂಗರಿಸಿಕೊಂಡಿದ್ದರೆ ರಾಗಯುಕ್ತವಾಗಿ ನಗುವಾಗ ಶಿಷ್ಟಾಚಾರ ಬಿಟ್ಟು ವಚನಗಳನ್ನು ಆಡಿದ್ದರೆ ಮತ್ತು ಪರಸ್ಪರ ಪ್ರೀತಿಯಿಂದ ಇರುವವರ ಮಧ್ಯದಲ್ಲಿ ದ್ವೇಷ ಹುಟ್ಟಿಸಿದ್ದರೆ ಈ ಕಾರಣಗಳಿಂದ ತಗುಲಿದ ದೋಷವು ನನ್ನಿಂದ ನಾಶವಾಗಲಿ, ನಾಶವಾಗಲಿ.

35. ತಪ ಮತ್ತು ಸ್ವಾಧ್ಯಾಯದಿಂದ ಹೀನ ಮತ್ತು ಅಸಂಬದ್ಧ ರೋದನದಿಂದ, ಬೇರೆ ಯಾವುದೇ ಓದುವದರಿಂದ, ಓದಿಸುವದರಿಂದ ಬೇರೆ ಯಾವುದೇ ಸ್ವೀಕಾರ ಮಾಡಿದ್ದರೆ ಅದರಿಂದ ಉಂಟಾದ ಎಲ್ಲ ದೋಷಗಳು ನಿವಾರಣೆಯಾಗಲಿ.

36. ಮುನಿ, ಆರ್ಯಿಕಾ, ಶ್ರಾವಕ ಮತ್ತು ಶ್ರಾವಿಕೆಯರನ್ನು ಯಾವುದೇ ರೀತಿಯ ನಿಂದೆ ಮಾಡಿದ್ದರೆ, ಮಾಡಿಸಿದ್ದರೆ, ಕೇಳಿದ್ದರೆ, ಕೇಳಿಸಿದ್ದರೆ ಇದರಿಂದ ತಗುಲಿದ ಪಾಪವು ನಾಶವಾಗಲಿ. ಸಾಧು ಮತ್ತು ಸಾಧರ್ಮಿಗಳಿಗೆ ಕಟುವಚನ ಆಡಿದ್ದರೆ ಮತ್ತು ಆಹಾರದಾನ ಮಾಡುವಾಗ ಪ್ರಮಾದ ಉಂಟಾಗಿದ್ದರೆ ಆ ಸಮಯದಲ್ಲಿ ತಗುಲಿದ ದೋಷದ ಪಾಪವು ನಾಶವಾಗಲಿ.

37. ದೇವ, ಶಾಸ್ತ್ರ, ಗುರುಗಳ ಅವಿನಯ ಮತ್ತು ಸಾವಧಾನತೆಯಿಂದ ವರ್ತಿಸಿದಾಗ ಉಂಟಾದ ಯಾವುದೇ ದೋಷವು ನನ್ನಿಂದ ದೂರವಾಗಲಿ, ನಾಶವಾಗಲಿ.

38. ಪಾಶ್ಚಾತ್ಯ ವೇಷಭೂಷಣಗಳ ಉಪಯೋಗ ಮಾಡಿದ್ದರೆ, ಟಿ.ವಿ. ಮುಂತಾದವುಗಳನ್ನು ನೋಡಿದ್ದರೆ ಬೇರೆ ಉಪನ್ಯಾಸಗಳನ್ನು ಓದಿದ್ದರೆ ಅದರಿಂದ ಉಂಟಾಗುವ ದೋಷವು ಮಿಥ್ಯೆಯಾಗಲಿ.

39. ಉಚ್ಚಕುಲದವರಿಗೆ ದೋಷ ತಗುಲಿಸಿ, ನಿಂದೆ ಮಾಡಿದ್ದರೆ ಅದರಿಂದ ತಗುಲಿದ ದೋಷವು ಮಿಥ್ಯೆಯಾಗಲಿ.

40. ನಡೆಯುವಾಗ, ತಿರುಗಾಡುವಾಗ, ಶರೀರ ಅಲುಗಾಡಿಸುವಾಗ, ಕುಳಿತುಕೊಳ್ಳುವಾಗ, ಏಳುವಾಗ, ಸೀನುವಾಗ, ಕೆಮ್ಮುವಾಗ, ಮಲಗುವಾಗ ಆಕಳಿಸುವಾಗ, ನೋಡದೇ ನಡೆಯುವಾಗ ಅನೇಕ ಕಾರ್ಯಗಳನ್ನು ತಿಳಿದಾಗಲೀ, ತಿಳಿಯದೇ ಆಗಲಿ ಮಾಡುವಾಗ ನನ್ನಿಂದಾದ ದೋಷಗಳು ಮಿಥ್ಯೆಯಾಗಲಿ.

41. ಯಾವುದೇ ಜೀವಿಗೆ ನಾನು ನಿರ್ಬಂಧಿಸಿಟ್ಟಿದ್ದರೆ, ಎತ್ತಿ ಇಕ್ಕರಿಸಿದ್ದರೆ, ತಿರುಗಿಸಿಟ್ಟಿದ್ದರೆ, ಅಂಜಿಸಿದ್ದರೆ ತೊಂದರೆ ಕೊಟ್ಟಿದ್ದರೆ, ವೇದನೆಯನ್ನು ಉಂಟುಮಾಡಿದ್ದರೆ, ಅಂಗಛೇದನೆ ಮಾಡಿದ್ದರೆ, ಮನಸ್ಸಿಗೆ ನೋವು ಉಂಟುಮಾಡಿದ್ದರೆ ಅಥವಾ ಬೇರೆ ಪ್ರಕಾರದ ಯಾವುದೇ ಕಷ್ಟ ಕೊಟ್ಟಿದ್ದರೆ ಅದರಿಂದ ಉಂಟಾದ ದೋಷಗಳು ಮಿಥ್ಯೆಯಾಗಲಿ.

42. ಅಜ್ಞಾನ ದಶೆಯಿಂದ ನನ್ನ ಅಂತರಂಗವು ಅತ್ಯಂತ ಕಲುಷಿತಗೊಂಡಿದೆ. ನನ್ನ ಅನಂತ ಅಪರಾಧ (ಪಾಪಕಾರ್ಯ)ಗಳನ್ನು ಸ್ಮರಿಸುತ್ತಾ ಹೋದಂತೆ ನನ್ನಾತ್ಮನ ಬಗ್ಗೆ ಹೇಸಿಕೆ ಉಂಟಾಗುತ್ತದೆ. ಪಶ್ಚಾತ್ತಾಪ ಆಗುತ್ತದೆ.

43. ಹೇ ಪ್ರಭು ! ಯಾರ ಬಗ್ಗೆಯೂ ನನಗೆ ರಾಗಭಾವವಿಲ್ಲ. ದ್ವೇಷಭಾವವೂ ಇಲ್ಲ. ಕ್ರೋಧ, ಮಾನ, ಮಾಯಾ, ಲೋಭ, ಅಸೂಯೆಗಳಿಲ್ಲ. ಎಲ್ಲ ಜೀವಗಳ ಬಗ್ಗೆ ನನ್ನಲ್ಲಿ ಉತ್ತಮ ಕ್ಷಮಾಭಾವವಿದೆ.

44. ಎಲ್ಲಿಯತನಕ ಮೋಕ್ಷಪದದ ಪ್ರಾಪ್ತಿಯಾಗುವದಿಲ್ಲವೋ ಅಲ್ಲಿಯ ತನಕ ಭವಭವಗಳಲ್ಲಿ ಶಾಸ್ತ್ರಗಳ ಪಠಣ-ಪಾಠಣದ ಅಭ್ಯಾಸವು, ಜಿನೇಂದ್ರರ ಪೂಜೆ, ನಿರಂತರ, ಶ್ರೇಷ್ಠ ಪುರುಷರ ಸಂಗತಿ, ಸಚ್ಚಾರಿತ್ರ ಸಂಪನ್ನ, ಪುರುಷರ ಗುಣಗಳ ಚರ್ಚೆ, ಎರಡನೆಯವರ ವಿಷಯ, ದೋಷಗಳಲ್ಲಿ ಮೌನ, ಎಲ್ಲ ಜೀವಿಗಳ ಕುರಿತು ಪ್ರಿಯ, ಹಿತಮಿತ, ವಚನ ಹಾಗೂ ಆತ್ಮಕಲ್ಯಾಣದ ಭಾವನೆ ಈ ವಿಷಯಗಳ ಪ್ರಾಪ್ತಿಯು ನನಗೆ ಸದಾ ಆಗುತ್ತಿರಲಿ.

45. ಹೇ ಜಿನೇಂದ್ರದೇವ !ನನಗೆ ಮೋಕ್ಷ ಪ್ರಾಪ್ತಿ ಆಗುವ ತನಕ ತಮ್ಮ ಚರಣ ಕಮಲಗಳು ನನ್ನ ಹೃದಯದಲ್ಲಿ ಮತ್ತು ನನ್ನ ಹೃದಯವು ತಮ್ಮ ಚರಣಕಮಲಗಳಲ್ಲಿಯೇ ಲೀನವಾಗಿರಲಿ.

46. ಹೇ ಭಗವನ್! ನನ್ನ ದುಃಖದ ನಾಶವಾಗಲಿ! ಕರ್ಮದ ನಾಶವಾಗಲಿ, ನನಗೆ ರತ್ನತ್ರಯದ ಪ್ರಾಪ್ತಿಯಾಗಲಿ, ಸುಗತಿಯ ಗಮನವಾಗಲಿ. ಸಮ್ಯಗ್ದರ್ಶನ ಪ್ರಾಪ್ತವಾಗಲಿ, ಸಮಾಧಿಮರಣವಾಗಲಿ ಮತ್ತು ಹೇ ಜಿನೇಂದ್ರದೇವ ತಮ್ಮ ಗುಣಗಳು ನನಗೂ ಪ್ರಾಪ್ತವಾಗಲಿ. ಹೀಗೆ ನನ್ನ ಭಾವನೆಯಾಗಿದೆ. ಹೀಗೆ ನನ್ನ ಭಾವನೆಯಾಗಿದೆ.

47. ಹೇ ತ್ರಿಲೋಕ ಪೂಜ್ಯ ಭಗವಾನ್! ನನ್ನ, ದುಃಖಗಳು ಕ್ಷಯವಾಗಲಿ, ನನ್ನ ಅಷ್ಟಕರ್ಮಗಳು ನಾಶವಾಗಲಿ, ನನಗೆ ರತ್ನತ್ರಯ ಧರ್ಮ ಪ್ರಾಪ್ತವಾಗಲಿ, ಸುಗತಿಯಲ್ಲಿ ಗಮನವಾಗಲಿ, ನನ್ನಲ್ಲಿಯ ಮೋಹ ಮಿಥ್ಯಾತ್ವ ನಾಶವಾಗಲಿ, ಸಮಾಧಿಪೂರ್ವಕ ಮರಣವಾಗಲಿ, ಜಿನರ ಗುಣಗಳ ಸಂಪತ್ತು ಪ್ರಾಪ್ತವಾಗಲಿ, ನನ್ನ ಪರಿಣಾಮದ ವಿಶುದ್ಧಿಯಾಗಲಿ, ನನಗೆ ಸ್ವರೂಪಾನುಭೂತಿ ಪ್ರಾಪ್ತವಾಗಲಿ, ಸ್ವಾತ್ಮೋಪಲಬ್ಧಿಯಾಗಲಿ, ಶಿವಸೌಖ್ಯ ಸಿದ್ಧಿಯಾಗಲಿ, ಎಲ್ಲ ಜೀವಿಗಳ ಕಲ್ಯಾಣವಾಗಲಿ, ಸರ್ವತ್ರ ಜಿನಶಾಸನದ ಪ್ರಸಾರವಾಗಲಿ, ಮನೆ ಮನೆಗಳಲ್ಲಿ ಧರ್ಮ ಚರ್ಚೆಯಾಗಲಿ, ಮಂದಿರಗಳಲ್ಲಿ, ಧರ್ಮಸಭೆ, ಶಾಸ್ತ್ರ ಪ್ರವಚನ ನಡೆಯಲಿ, ಭರತ ಕ್ಷೇತ್ರದಲ್ಲಿಯು, ಜಂಬೂದ್ವೀಪದಲ್ಲಿಯ 2 $^1/_2$ ದ್ವೀಪಗಳಲ್ಲಿಯ ಅಸಂಖ್ಯಾತ ದ್ವೀಪದೊಳಗಿನ, ಊರ್ಧ್ವಲೋಕ, ಮಧ್ಯಲೋಕ,

ಅಧೋಲೋಕದೊಳಗಿನ ಮನುಷ್ಯ, ನಾರಕಿ, ತಿರ್ಯಂಚ, ದೇವಗತಿಯೊಳಗಿನ ಎಲ್ಲ ಜೀವಗಳ ಕರ್ಮಕ್ಷಯವಾಗಿ ಪರಮ ಕಲ್ಯಾಣವಾಗಲಿ, ನಾನು ಪಂಚಮಹಾವ್ರತ 3 ಗುಪ್ತಿ, 5 ಸಮಿತಿ, ಸಮ್ಯಕ್ ರತ್ನತ್ರಯ, ದಶಧರ್ಮಕ್ಕೆ, ದ್ವಾದಶಾನುಪ್ರೇಕ್ಷೆಗಳಿಗೆ, ಷೋಡಶಕಾರಣ ಭಾವನೆಗಳಿಗೆ, ಸಮಯಸಾರ ಭಾವನೆಗೆ ಈ ಎಲ್ಲವುಗಳಿಗೆ ಭಕ್ತಿಪೂರ್ವಕ ವಂದನೆ ಮಾಡಿ ಜಗತ್ತಿನೊಳಗಿನ ಸರ್ವಜೀವಗಳ ಕಲ್ಯಾಣವಾಗಲಿ ಎಂದು ಪವಿತ್ರ ಭಾವನೆಯಿಂದ ಭಾವಿಸುವೆನು.

## ಭಾವ ಪ್ರತಿಕ್ರಮಣ

ಹೇ ಪ್ರಭು ! ಮನ, ವಚನ, ಕಾಯ, ಕೃತ, ಕಾರಿತ, ಅನುಮೋದನ, ಸಂರಂಭ, ಸಮಾರಂಭ, ಆರಂಭ, ಕ್ರೋಧ, ಮಾನ, ಮಾಯಾ, ಲೋಭ, ಪ್ರಮಾದ ಇತ್ಯಾದಿ ವಿಭಾವಗಳ ಮೂಲಕ ನನ್ನಿಂದ ಈ ಭವದಲ್ಲಿ ಇಲ್ಲವೇ ಪೂರ್ವಭವದಲ್ಲಿ ನಿಜ ದೇವ, ಗುರು, ಶಾಸ್ತ್ರಗಳ ಅವಿನಯವಾಗಿದ್ದರೆ ಧ್ಯಾನದಲ್ಲಿ, ವ್ರತಗಳಲ್ಲಿ ಅತಿಕ್ರಮ, ವ್ಯತಿಕ್ರಮ, ಅತಿಚಾರ, ಅನಾಚಾರ ದೋಷಗಳಾಗಿದ್ದರೆ, ಏಕೇಂದ್ರಿಯದಿಂದ ಪಂಚೇಂದ್ರಿಯಗಳ ತನಕ ಯಾವುದೇ ಜೀವಗಳ ಹಿಂಸೆ ವಿರಾಧನೆಯಿಂದ ದಿವಸ ಅಥವಾ ರಾತ್ರಿ ಸಂಭವಿಸಿದ್ದರೆ ಆ ಎಲ್ಲ ದೋಷಗಳ ಕುರಿತು ಪಶ್ಚಾತ್ತಾಪ ವ್ಯಕ್ತ ಮಾಡುತ್ತೇನೆ. ಕ್ಷಮೆ ಬೇಡುತ್ತೇನೆ. ನನ್ನ ಎಲ್ಲ ದೋಷಗಳು ಮಿಥ್ಯೆಯಾಗಲಿ, ಮಿಥ್ಯೆಯಾಗಲಿ, ಮಿಥ್ಯೆಯಾಗಲಿ.

# ಸಮಾಧಿ ಮರಣದ ಚಿಂತನೆ

ಎಲ್ಲಕ್ಕಿಂತಲೂ ಮೊದಲು ತಿಳಿಯಬೇಕಾದ ವಿಷಯ ಎಂದರೆ ಆವಶ್ಯಕವಿರುವ ಮರಣದ ಅಭಿಪ್ರಾಯ ಏನು ಇದೆ ಮತ್ತು ವಾಸ್ತವದಲ್ಲಿ ಮರಣವು ಯಾರದಾಗುತ್ತದೆ ?

ಉತ್ತರ : ಆತ್ಮನಂತೂ ಅಮರನಿದ್ದಾನೆ ಎಂದೂ ಸಾಯುವದೇ ಇಲ್ಲ. ವಾಸ್ತವದಲ್ಲಿ ಪುದ್ಗಲರೂಪಿ ಶರೀರದ ಜೊತೆ ಆತ್ಮನ ಏಕಕ್ಷೇತ್ರಾವಗಾಹಿ ಸಂಬಂಧದ ಕೊನೆಯಾಗುವದಕ್ಕೇನೇ ಮರಣ ಎಂದು ಹೇಳಲಾಗಿದೆ. ಆದ್ದರಿಂದ ಮೃತ್ಯು ಅಂದರೆ ಆತ್ಮನು ಒಂದು ಶರೀರವನ್ನು ಬಿಟ್ಟು ಬೇರೊಂದು ಶರೀರದಲ್ಲಿ ಹೋಗುವದು.

ಸಂಸಾರದಲ್ಲಿ ಯಾರೋ ಒಂದು ಮನೆ ಬಿಟ್ಟು, ಬೇರೆ ಉತ್ತಮವಾದ ಮನೆಯಲ್ಲಿ ಇರಲು ಹೋಗುತ್ತಾರೆ. ಅಥವಾ ಯಾರೋ ಹಳೆಯ ಬಟ್ಟೆಯನ್ನು ಬಿಟ್ಟು ಹೊಸ ಬಟ್ಟೆಯನ್ನು ಧರಿಸುತ್ತಾರೆ. ಆಗ ಶೋಕ ಮಾಡುವದಿಲ್ಲ. ರೈಲಿನಲ್ಲಿ ಎಲ್ಲರೂ ತಮ್ಮ ತಮ್ಮ ಸ್ಟೇಶನ್ ಬಂದೊಡನೆ ಇಳಿದು ಹೋಗುತ್ತಾರೆ. ಆದರೆ ಯಾರೂ ಅದರ ಬಗ್ಗೆ ದುಃಖ ಮಾಡುವದಿಲ್ಲ. ಅಂದರೆ ಮರಣದ ಪ್ರಸಂಗದಲ್ಲಿ ಏಕೆ ಶೋಕ ಮಾಡುತ್ತಾರೆ ? ಇದಕ್ಕೆ ಎಲ್ಲಕ್ಕಿಂತ ದೊಡ್ಡ ಕಾರಣ ಮೋಹವಿದೆ. ಸತ್ತವನನ್ನು ತಮ್ಮವನೆಂದು ತಿಳಿದಿದ್ದರು. ಆದ್ದರಿಂದ ದುಃಖವಾಗುತ್ತದೆ. ಎಲ್ಲರೂ ತಿಳಿದಿರುತ್ತಾರೆ. ಏನೆಂದರೆ ಒಂದು ದಿವಸ ಎಲ್ಲರಿಗೂ ಈ ಜಗತ್ತಿನಿಂದ ಹೋಗುವದಿದೆ. ಆದಾಗ್ಯೂ ತಮ್ಮ ವಿಷಯದಲ್ಲಿ ಎಂದೂ ಯಾವುದೇ ವಿಚಾರ ಮಾಡುವದಿಲ್ಲ ಮತ್ತು ಅದರ ಸಲುವಾಗಿ ಸಮಾಧಿ ಮರಣದ ತಯಾರಿಯನ್ನು ಸಹ ಮಾಡುವದಿಲ್ಲ. ಆದ್ದರಿಂದ ಎಲ್ಲರಿಗೂ ತಮ್ಮ ಸಮಾಧಿಮರಣದ ವಿಷಯದಲ್ಲಿ ವಿಚಾರ ಮಾಡಬೇಕು. ಅದರ ಸಲುವಾಗಿ ತಯಾರಿ ಮಾಡಿಕೊಳ್ಳಬೇಕು.

ಆದ್ದರಿಂದ ಪ್ರಶ್ನೆ ಆಗುತ್ತದೆ ಏನೆಂದರೆ ಸಮಾಧಿ ಮರಣದ ಉದ್ದೇಶ ಏನಿದೆ ? ಮತ್ತು ಅದರ ತಯಾರಿ ಹೇಗೆ ಆಗುತ್ತದೆ ? ಸಮಾಧಿಮರಣ

ಅಂದರೆ ಕೇವಲ ಆತ್ಮಭಾವನೆಯಿಂದ (ಆತ್ಮನಲ್ಲಿ ಸಮಾಧಿಭಾವದಿಂದ) ವರ್ತಮಾನ ದೇಹವನ್ನು ಬಿಡುವದು. ಅಂದರೆ ನಾನು ಆತ್ಮನಿದ್ದೇನೆ. ಈ ಅನುಭವ ಸಹಿತ ಮರಣ ಅಂದರೆ ಸಮ್ಯಗ್ದರ್ಶನ ಸಹಿತ ಮರಣವನ್ನು ಹೊಂದುವದಕ್ಕೆ ಸಮಾಧಿಮರಣವೆಂದು ಹೇಳಲಾಗುತ್ತದೆ. ಸಮಾಧಿಮರಣದ ಮಹತ್ವ ಇದರಿಂದ ಏನಿದೆ ಎಂದರೆ ಆ ಜೀವವು ಸಮ್ಯಗ್ದರ್ಶನವನ್ನು ಜೊತೆಗೆ ತೆಗೆದುಕೊಂಡು ಹೋಗುತ್ತಾನೆ. ಬೇರೆ ಅಂದರೆ ಸಮಾಧಿಮರಣ ಆಗದಿದ್ದರೆ ಆ ಜೀವವು ಸಮ್ಯಗ್ದರ್ಶನವನ್ನು ವಮನ ಮಾಡಿದಂತಾಗುತ್ತದೆ. ಜನರು ಸಮಾಧಿಮರಣದ ತಯಾರಿಯ ಸಲುವಾಗಿ ಸಲ್ಲೇಖನದ ಭಾವನೆಯನ್ನು ಭಾವಿಸುತ್ತಾರೆ. ಕೊನೆಯ ಸಮಯದ ಆಲೋಚನೆ ಮಾಡುತ್ತಾ / ಮಾಡಿಸುತ್ತ ಕಾಣುತ್ತಾರೆ. ನಿರ್ಯಾಪಕಾಚಾರ್ಯ (ಕ್ಷಪಕನಿಗೆ ಸಮಾಧಿಮರಣ ಮಾಡಿಸುವಂತಹ ಆಚಾರ್ಯ)ರ ಶೋಧ ಮಾಡುವದು ಕಂಡುಬರುತ್ತದೆ. ಆದರೆ ಸಮ್ಯಗ್ದರ್ಶನವು ಸಮಾಧಿಮರಣದ ಪ್ರಾಣವಿದೆ. ಅದರ ವಿಷಯದಲ್ಲಿ ಜನರು ಅಪರಿಚಿತರೆಂದು ಕಂಡುಬರುತ್ತಾರೆ. ಆದ್ದರಿಂದ ಸಮಾಧಿ ಮರಣದ ತಯಾರಿಯ ಸಲುವಾಗಿ ಈ ಪೂರ್ಣ ಜೀವನವೇ ಕೇವಲ ಒಂದು ಸಮ್ಯಗ್ದರ್ಶನದ ಪ್ರಾಪ್ತಿಯ ಉಪಾಯದಲ್ಲಿಯೇ ತೊಡಗಬೇಕು. ಏಕೆಂದರೆ ಸಮ್ಯಗ್ದರ್ಶನದ ಹೊರತು ಅನಂತ ಸಲ ಬೇರೆ ಎಲ್ಲವನ್ನು ಮಾಡಿದರೂ ಸಹ ಆತ್ಮನ ಉದ್ಧಾರ ಸಾಧ್ಯವಾಗಿಲ್ಲ. ಭವಭ್ರಮಣದ ಕೊನೆ ಆಗಿಲ್ಲ. ಅಂದರೆ ಸಮ್ಯಗ್ದರ್ಶನದ ಹೊರತು ಯಾವುದೇ ಉಪಾಯ ಮಾಡಿದರೂ ಅಕಸ್ಮಾತ್ ಒಂದೆರಡು ಭವಗಳು ಉತ್ತಮ ದೊರೆತರೂ ಸಹ ಭವಭ್ರಮಣದ ಅಂತ ಆಗುವದಿಲ್ಲ. ಆದರೆ ಅನಂತ ದುಃಖಗಳ ಕೊನೆಯೂ ಆಗುವುದಿಲ್ಲ. ನರಕ ನಿರೋದದಿಂದ ಮುಕ್ತಿ (ಅರ್ಥಾತ್ ಇದರ ನಂತರ ಆ ಜೀವವು ಎಂದೂ ನರಕ/ ನಿಗೋದದಲ್ಲಿ ಹೋಗುವದಿಲ್ಲ.) ದೊರೆಯುವದಿಲ್ಲ. ಆದ್ದರಿಂದ ಇಂಥ ದುರ್ಲಭ ಸಮ್ಯಗ್ದರ್ಶನದ ಪ್ರಾಪ್ತಿಯ ಸಲುವಾಗಿ ಮತ್ತು ಸಮಾಧಿಮರಣದ ತಯಾರಿಯ ರೂಪದಲ್ಲಿ ಈ ಸಂಸಾರದ ಕುರಿತು ವೈರಾಗ್ಯ, ಸಂಸಾರ ಸುಖದ ಕುರಿತು ಉದಾಸೀನತೆಯು ಮತ್ತು ಶಾಸ್ತ್ರ ಸ್ವಾಧ್ಯಾಯದಿಂದ ಯಥಾರ್ಥ ತತ್ವದ ನಿರ್ಣಯವು ಅವಶ್ಯಕವಿದೆ.

ಈ ಮನುಷ್ಯಭವವು ಅತ್ಯಂತ ದುರ್ಲಭವಿದೆ.ಆದ್ದರಿಂದ ಇದರ ಉಪಯೋಗ ಯಾವುದರಲ್ಲಿ ಮಾಡಬೇಕು. ಈ ವಿಚಾರ ಮಾಡುವದು ಅತ್ಯಂತ ಅವಶ್ಯಕವಿದೆ. ಏಕೆಂದರೆ ಹೇಗೆ ಜೀವನ ಬದುಕಿದೆಯೋ, ಬಹುಶಃ ಹಾಗೆಯೇ ಮರಣ ಆಗುತ್ತದೆ. ಆದ್ದರಿಂದ ನಿತ್ಯ ಜಾಗೃತಿ ಇರುವದು ಜರೂರ ಇದೆ. ಜೀವನದಲ್ಲಿ ನೀತಿ-ನ್ಯಾಯ ಆವಶ್ಯಕ ಇವೆ. ನಿತ್ಯ ಸ್ವಾಧ್ಯಾಯ, ಮನನ, ಚಿಂತನ ಆವಶ್ಯಕವಿದೆ. ಏಕೆಂದರೆ ಆಯುಷ್ಯದ ಬಂಧವು ಯಾವಾಗಲಾದರೂ ಬೀಳಬಹುದಾಗಿದೆ ಮತ್ತು ಗತಿಯ ಅನುಸಾರವೇ ಮರಣದ ಸಮಯ ಲೇಶ್ಯಾ ಆಗುತ್ತದೆ. ಆದ್ದರಿಂದ ಯಾರು ಸಮಾಧಿಮರಣ ಬಯಸುತ್ತೀರೋ ಅವರು ಪೂರ್ಣಜೀವನ ಸಮ್ಯಗ್ದರ್ಶನ ಸಹಿತ ಧರ್ಮಮಯ ಬದುಕುವದು ಆವಶ್ಯಕವಿದೆ. ಆದ್ದರಿಂದ ಜೀವನದ ತುಂಬ ಎಲ್ಲ ಪ್ರಯತ್ನ ಮಾಡಿ ಸಮ್ಯಗ್ದರ್ಶನದ ಪ್ರಾಪ್ತಿಯ ಸಲುವಾಗಿಯೇ ಮಾಡಲು ಯೋಗ್ಯವಿದೆ. ಏಕೆಂದರೆ ಸಮ್ಯಗ್ದರ್ಶನದ ಸಲುವಾಗಿ ಮಾಡಲಾದ ಎಲ್ಲ ಶುಭಭಾವಗಳು ಯಥಾರ್ಥ ಇವೆ. ಸಮ್ಯಗ್ದರ್ಶನದ ಹೊರತು ಅವರು ಭವಮುಕ್ತಿಯ ಸಲುವಾಗಿ ಅಯತಾರ್ಥರೆಂದು ಸಿದ್ಧವಾಗುತ್ತದೆ. ಸಮ್ಯಗ್ದರ್ಶನದ ಪ್ರಾಪ್ತಿಯ ನಂತರವೂ ಸಹ ಪ್ರಮಾದ ಮಾಡುವದು ಯೋಗ್ಯವಲ್ಲ. ಏಕೆಂದರೆ ಭಗವಾನರ ಆಜ್ಞೆ ಇರುತ್ತದೆ. ಏನೆಂದರೆ ಒಂದು ಸಮಯವೂ ಸಹ ಪ್ರಮಾದ ಮಾಡಬಾರದು.

ಎಲ್ಲರೂ ಕೇವಲ ತಮ್ಮ ಪರಿಣಾಮಗಳ ಮೇಲೆ ದೃಷ್ಟಿ ಇಡಬೇಕು ಮತ್ತು ಅವುಗಳಲ್ಲಿಯೇ ಸುಧಾರಣೆ ಮಾಡಬೇಕು. ಬೇರೆ ಏನು ಮಾಡುತ್ತೀರಿ ? ಅಥವಾ ಬೇರೆ ಏನು ಹೇಳುವಿರಿ ? ಮುಂತಾದವನ್ನು ವಿಚಾರಿಸದೇ ತಮ್ಮ ಸಲುವಾಗಿ ಏನು ಯೋಗ್ಯವಿದೆ ? ಇದನ್ನೇ ವಿಚಾರ ಮಾಡಿರಿ. ಆರ್ತಧ್ಯಾನ ಮತ್ತು ರೌದ್ರಧ್ಯಾನದ ಕಾರಣಗಳನ್ನು ಸ್ವೀಕರಿಸಬೇಡಿರಿ. ಮತ್ತು ಮರೆವಿನಿಂದ ಅನಾದಿಯ ಸಂಸ್ಕಾರ ವಶ ಆರ್ತಧ್ಯಾನ ಮತ್ತು ರೌದ್ರಧ್ಯಾನ ಆದರೆ ತಕ್ಷಣ ಅದರಲ್ಲಿಂದ ದೂರವಾಗು (ಪ್ರತಿಕ್ರಮಣ) ಅದರ ಕುರಿತು ಪಶ್ಚಾತ್ತಾಪ ಮಾಡಬೇಕು. (ಆಲೋಚನಾ) ಮತ್ತು ಭವಿಷ್ಯದಲ್ಲಿ ಹೀಗೆ ಎಂದೂ ಆಗಬಾರದು. (ಪ್ರತ್ಯಾಖ್ಯಾನ) ಹೀಗೆ ದೃಢನಿರ್ಧಾರ ಮಾಡುವದು. ಈ ಪ್ರಕಾರ ದುರ್ಧ್ಯಾನದಿಂದ ಉಳಿದು ಸಂಸಾರದ ಕೊನೆಯಾಗಲು ಪೂರ್ಣ ಯತ್ನ ಮಾಡಬೇಕು. ಹೀಗೆ

ಜಾಗೃತಿಯಾಗಿರುವುದು ಪೂರ್ಣ ಜೀವನದ ಸಲುವಾಗಿ ಆವಶ್ಯಕವಿದೆ. ಆಗ ಮರಣದ ಸಮಯ ಜಾಗೃತಿಸಹಿತ ಸಮಾಧಿ ಮತ್ತು ಸಮತಾಭಾವ ಇರುವ ಸಂಭಾವನೆ ಆಗುತ್ತದೆ. ಏನೆಂದರೆ ಯಾರಿಂದ ಸಮಾಧಿಮರಣ ಆಗುವದು. ಎಲ್ಲರಿಗೂ ಇಂತಹ ಸಮಾಧಿ ಮರಣ ಪ್ರಾಪ್ತವಾಗಲಿ. ಇದೇ ಭಾವನೆಯೊಂದಿಗೆ.....

ಜಿನಾಜ್ಞೆಯ ವಿರುದ್ಧ ಏನಾದರೂ ಬರೆದೆನಾದರೆ ತ್ರಿವಿಧ –ತ್ರಿವಿಧ ಮಿಚ್ಛಾಮಿ ದುಕ್ಕಡಂ!

ಓಂ ಶಾಂತಿ ಶಾಂತಿ ಶಾಂತಿಃ

## ಕಂದಮೂಲದ ಕುರಿತು

ನಾವು ಮೊದಲೇ ಕೇಳಿದ್ದೇವೆ. ಏನೆಂದರೆ ಕಂದಮೂಲ ಸೇವಿಸುವದರಿಂದ ಅನಂತ ಪಾಪ ತಗಲುತ್ತದೆ. ಕೆಲವರಿಗೆ ಪ್ರಶ್ನೆ ಏಳುತ್ತದೆ. ಏನೆಂದರೆ ಹೀಗೆ ಹೇಗೆ ಆಗುತ್ತದೆ ? ಅದರ ಕಾರಣ ಏನಿದೆ ?

ಉತ್ತರ : ನಾವು ಮೊದಲು ಕೇಳಿದ್ದೇವೆ. ನಾವು ಬೇರೆಯವರಿಗೆ ಯಾವುದನ್ನು ಕೊಡುತ್ತೇವೆ. ಅದುವೇ ನಮಗೆ ಪ್ರಾಪ್ತವಾಗುತ್ತದೆ. ಆದ್ದರಿಂದ ನಾವು ನಮ್ಮ ಜೀವನ ಕಳೆಯುವಲ್ಲಿ ಬೇರೆ ಜೀವಿಗಳಿಗೆ ಯಾವ ದುಃಖವನ್ನು ಕೊಡುತ್ತೇವೆ. ಆ ದುಃಖವೇ ನಮಗೆ ಮರಳಿ ದೊರೆಯುವದು. ಹೇಗೆಂದರೆ ಯಾವಾಗ ನಾವು ಪ್ರತಿಯೊಂದು ವನಸ್ಪತಿಯನ್ನು ಊಟದಲ್ಲಿ ಉಪಯೋಗ ಮಾಡುತ್ತೇವೆ, ಆಗ ಅದರಲ್ಲಿ ಸಂಖ್ಯಾತ ಜೀವಿಗಳೂ ಇರುವವರಿಂದ ಎಷ್ಟು ಪಾಪ ತಗಲುತ್ತದೆ. ಅದರ ಅಪೇಕ್ಷೆಯಿಂದ ಕಂದಮೂಲ ಅಂದರೆ ಅನಂತಕಾಯ ವನಸ್ಪತಿಯನ್ನು ಊಟದಲ್ಲಿ ಉಪಯೋಗ ಮಾಡುವದರಿಂದ ಅದರಲ್ಲಿ ಅನಂತ ಜೀವಗಳು ಇರುವದರಿಂದ ಅನಂತಪಟ್ಟು ಪಾಪ ತಗಲುತ್ತದೆ ಮತ್ತು ಆದ್ದರಿಂದ ಅದರಿಂದ ಅನಂತದುಃಖ ಬರುತ್ತದೆ.

ಆದ್ದರಿಂದ ಏನು ಹೇಳಲಾಗಿದೆ ಎಂದರೆ ಪೂರ್ಣ ಜೀವನದಲ್ಲಿ ಪ್ರತಿಯೊಂದು ವನಸ್ಪತಿ ಕಾಯವನ್ನು ಊಟದಲ್ಲಿ ಉಪಯೋಗ ಮಾಡುವದರಿಂದ ಎಷ್ಟು ಪಾಪ ತಗಲುತ್ತದೆ, ಅದರಿಂದ ಅನಂತಪಟ್ಟು ಪಾಪ ಕಂದಮೂಲ ಅರ್ಥಾತ್ ಅನಂತಕಾಯ ವನಸ್ಪತಿಯ ಒಂದು ತುಕಡಿ ತಿನ್ನುವದರಿಂದ ತಗಲುತ್ತದೆ. ಏಕೆಂದರೆ ಆ ಕಂದಮೂಲ ಅರ್ಥಾತ್ ಅನಂತಕಾಯದ ಒಂದು ತುಕಡಿಯಲ್ಲಿ ಅಸಂಖ್ಯಾತ ಪ್ರತರಗಳು ಇರುತ್ತವೆ. ಪ್ರತಿಯೊಂದು ಪ್ರತರದಲ್ಲಿ ಅಸಂಖ್ಯಾತ ಶ್ರೇಣಿಗಳು ಆಗುತ್ತವೆ. ಪ್ರತಿಯೊಂದು ಶ್ರೇಣಿಯಲ್ಲಿ ಅಸಂಖ್ಯಾತ ಗೋಲಗಳು ಇರುತ್ತವೆ. ಪ್ರತಿಯೊಂದು ಗೋಲಗಳಲ್ಲಿ ಅಸಂಖ್ಯಾತ ಶರೀರಗಳು ಆಗುತ್ತವೆ. ಪ್ರತಿಯೊಂದು ಶರೀರದಲ್ಲಿ ಅಂದರೆ ಕಂದಮೂಲ, ಅನಂತಕಾಯ, ನಿಗೋದದ ಒಂದು ಶರೀರದಲ್ಲಿ ಅನಂತಾನಂತ ಜೀವಗಳು ಇರುತ್ತವೆ.

ಪ್ರಶ್ನೆ : ಅನಂತಾನಂತ ಅಂದರೆ ಎಷ್ಟು ?

.ಉತ್ತರ : ಎಲ್ಲ ಸಿದ್ಧರುಗಳಿಂದ ಅನಂತಾನಂತ ಪಟ್ಟು ಎಂದು ಹೇಳಲಾಗುತ್ತದೆ. ಏನೆಂದರೆ ಕಂದಮೂಲ ಅರ್ಥಾತ್ ಅನಂತಕಾಯಗಳ ಒಂದು ತುಕಡಿಯಲ್ಲಿ ಅಸಂಖ್ಯಾತ × ಅಸಂಖ್ಯಾತ×ಅಸಂಖ್ಯಾತ × ಅಸಂಖ್ಯಾತ × ಅನಂತಾನಂತ ಜೀವಗಳಾಗುತ್ತವೆ. ಆದ್ದರಿಂದ ಸುಖ ಬಯಸುವಂಥ ಜೀವರುಗಳಿಗೆ ಕಂದಮೂಲ ಸೇವನೆಯಿಂದ ಉಳಿದುಕೊಳ್ಳಲು ಪ್ರಯತ್ನಿಸಿರಿ. ಏಕೆಂದರೆ ಅವು ಅನಂತ ದುಃಖದ ಕಾರಣ ಉಂಟಾಗುವಲ್ಲಿ ಸಮರ್ಥ ಇರುತ್ತವೆ. ಅರ್ಥಾತ್ ಅವುಗಳ ಪ್ರಯೋಗದಿಂದ ಅನಂತ ಪಾಪಕರ್ಮದ ಬಂಧವಾಗುತ್ತದೆ. ಅದರಿಂದ ಅನಂತ ದುಃಖದ ಕಾರಣ ಉಂಟಾಗುವಲ್ಲಿ ಸಮರ್ಥ ಇವೆ.

# ರಾತ್ರಿಭೋಜನದ ಕುರಿತು

ರಾತ್ರಿಭೋಜನದ ತ್ಯಾಗ ಮೋಕ್ಷಮಾರ್ಗದ ದಾರಿಕಾರನ ಸಲುವಾಗಿ ಅವಶ್ಯಕವಾಗಿದೆ. ಆದರೆ ಆಧುನಿಕ ವಿಜ್ಞಾನದ ಅನುಸಾರವು ಸಹ ಅದರದು ಅನೇಕ ಲಾಭಗಳು ಇರುತ್ತವೆ. ಹೇಗೆಂದರೆ ರಾತ್ರಿ ಒಂಬತ್ತು ಗಂಟೆಗೆ ಶರೀರದ ಗಡಿಯಾರದ ಅನುಸಾರ ಹೊಟ್ಟೆಯಲ್ಲಿ ಇರುವಂಥ ವಿಷಮಯ ತತ್ವಗಳ ಸ್ವಚ್ಛತೆಯ ಸಮಯ ಆಗುತ್ತದೆ. ಆ ಸಮಯ ಒಂದು ವೇಳೆ ಹೊಟ್ಟೆಯು ತುಂಬಿದ್ದರೆ ಶರೀರವು ಆ ಸ್ವಚ್ಛತೆಯ ಕಾರ್ಯ ಮಾಡುವದಿಲ್ಲ. ಅಂದರೆ ಹೊಟ್ಟೆಯಲ್ಲಿ ಹೊಲಸು ಹೆಚ್ಚಾಗುತ್ತದೆ. ಯಾರು ರಾತ್ರಿಭೋಜನ ಮಾಡುವದಿಲ್ಲ. ಅವನ ಪಚನವು ಒಂಬತ್ತು ಗಂಟೆಯ ತನಕ ಆಗಿರುವದರಿಂದ ಅವನ ಶರೀರವು ವಿಷಮಯ ತತ್ವಗಳ ಸ್ವಚ್ಛತೆಯ ಕಾರ್ಯವನ್ನು ಒಳ್ಳೆಯ ಪ್ರಕಾರ ಮಾಡಿಕೊಳ್ಳುತ್ತದೆ. ಎರಡನೆಯದು ರಾತ್ರಿಯಲ್ಲಿ ಭೋಜನದ ನಂತರ ಎರಡರಿಂದ ಮೂರು ಗಂಟೆಗಳ ತನಕ ಮಲಗುವದು ನಿಷಿದ್ಧವಿದೆ. ಆದ್ದರಿಂದ ಯಾರು ರಾತ್ರಿಯಲ್ಲಿ ತಡಮಾಡಿ ಭೋಜನ ಮಾಡುತ್ತಾರೆ, ಅವರು ತಡಮಾಡಿಯೇ ಮಲಗುತ್ತಾರೆ. ರಾತ್ರಿಯಲ್ಲಿ ಹನ್ನೊಂದರಿಂದ ಒಂದು ಗಂಟೆಯ ನಡುವಿನ ಗಾಢನಿದ್ರೆಯು ಲೀವರದ ಸ್ವಚ್ಛತೆ ಮತ್ತು ಅದರ ಹಾನಿ ತುಂಬಿಕೊಳ್ಳುವ ಸಲುವಾಗಿ ಅತ್ಯಂತ ಆವಶ್ಯಕವಿದೆ. ಏಕೆಂದರೆ ರಾತ್ರಿಭೋಜನ ಮಾಡುವವನ ಸಲುವಾಗಿ ಸ್ವಚ್ಛವಾಗುವ ಸಂಭವ ಇರುವದಿಲ್ಲ. ಆದ್ದರಿಂದ ಇದೂ ಸಹ ರಾತ್ರಿ ಭೋಜನದ ದೊಡ್ಡ ಹಾನಿ ಇದೆ. ಆರೋಗ್ಯದ ದೃಷ್ಟಿಯಿಂದ ಇದರ ಹೊರತಾಗಿಯೂ ಸಹ ರಾತ್ರಿಭೋಜನ ತ್ಯಾಗದಿಂದ ಅನೇಕ ಲಾಭಗಳಿರುತ್ತವೆ.

ಆಯುರ್ವೇದ, ಯೋಗಶಾಸ್ತ್ರ ಮತ್ತು ಜೈನೇತರ ದರ್ಶನಗಳ ಅನುಸಾರ ಸಹ ರಾತ್ರಿಭೋಜನ ನಿಷಿದ್ಧವಿದೆ. ಜೈನೇತರ ದರ್ಶನಗಳಲ್ಲಿಯಂತೂ ರಾತ್ರಿಭೋಜನವು ಮಾಂಸ ಊಟದ ಸಮಾನ ಮತ್ತು ರಾತ್ರಿಯಲ್ಲಿ ನೀರು ಕುಡಿಯುವದು, ರಕ್ತ ಕುಡಿಯುವದರ

ಸಮಾನವೆಂದು ಹೇಳಿದ್ದಾರೆ. ರಾತ್ರಿಭೋಜನ ಮಾಡುವಂಥವನ ಎಲ್ಲ ತಪ-ಜಪ-ಯಾತ್ರಾ ವ್ಯರ್ಥವಾಗುತ್ತವೆ ಮತ್ತು ರಾತ್ರಿಭೋಜನದ ಪಾಪವು ನೂರಾರು ಚಂದ್ರಾಯತನ ತಪಗಳಿಂದಲೂ ಸಹ ಸ್ವಚ್ಛವಾಗುವದಿಲ್ಲ ಎಂದು ಹೇಳಿದ್ದಾರೆ.

ಜೈನದರ್ಶನದ ಅನುಸಾರವೂ ಸಹ ರಾತ್ರಿಭೋಜನದಲ್ಲಿ ಬಹಳ ಪಾಪ ಎಂದು ಹೇಳಿದ್ದಾರೆ. ಇಲ್ಲಿ ಯಾರೋ ಹೀಗೆ ಹೇಳಿದ್ದಾರೆ. ಏನೆಂದರೆ ರಾತ್ರಿಭೋಜನ ತ್ಯಾಗ ಮುಂತಾದ ವ್ರತಗಳು ಅಥವಾ ಪ್ರತಿಮೆಗಳು ಸಮ್ಯಗ್ದರ್ಶನದ ನಂತರವೇ ಆಗುತ್ತವೆ. ನಮಗೆ ಈ ರಾತ್ರಿಭೋಜನದಿಂದ ಯಾವ ದೋಷ ತಗಲುತ್ತದೆ ? ಅವರಿಗೆ ನಮ್ಮ ಉತ್ತರ ಹೀಗಿದೆ - ಏನೆಂದರೆ ರಾತ್ರಿಭೋಜನದಿಂದ ದೋಷವು ಸಮ್ಯಗ್ದೃಷ್ಟಿಯ ಅಪೇಕ್ಷೆಯಿಂದ ಮಿಥ್ಯಾದೃಷ್ಟಿಗೆನೇ ಹೆಚ್ಚು ತಗಲುತ್ತದೆ. ಏಕೆಂದರೆ ಮಿಥ್ಯಾದೃಷ್ಟಿ ಅದನ್ನು ಆಸಕ್ತಿಯಿಂದ ಸೇವಿಸುತ್ತಾನೆ. ಯಾವಾಗ ಸಮ್ಯಗ್ದೃಷ್ಟಿಗೆ ಆವಶ್ಯಕ ಇರದಿದ್ದರೆ ಅನಿವಾರ್ಯವೂ ಇರದಿದ್ದರೆ ಇಂತಹ ದೋಷಗಳ ಸೇವನೆ ಮಾಡುವದೇ ಇಲ್ಲ ಮತ್ತು ಒಂದು ವೇಳೆ ಯಾವುದೇ ಕಾಲದಲ್ಲಿ ಇಂತಹ ದೋಷಗಳ ಸೇವನೆ ಮಾಡಿಯೂ ಸಹ ತೆಗೆದುಕೊಂಡರೆ ಅವನು ಭಯಭಾವದಿಂದ ಮತ್ತು ರೋಗದ ಔಷಧ ರೂಪದಿಂದ ಮಾಡುತ್ತಾನೆ. ಆನಂದದಿಂದ ಅಥವಾ ಸ್ವಚ್ಛಂದತೆಯಿಂದ ಮಾಡುವದಿಲ್ಲ. ಈ ಕಾರಣ ಧರ್ಮಶಾಸ್ತ್ರಗಳಿಂದ ಯಾವುದೇ ಪ್ರಕಾರದ ಕಪಟತನ ಮಾಡಬೇಡಿರಿ. ಧರ್ಮಶಾಸ್ತ್ರಗಳಲ್ಲಿ ಪ್ರತಿಯೊಂದು ಮಾತಿನ ಅಪೇಕ್ಷೆಯಿಂದ ಹೇಳಲಾಗುತ್ತದೆ. ವ್ರತ ಮತ್ತು ಪ್ರತಿಮೆಗಳು ಐದನೆಯ ಗುಣಸ್ಥಾನದಲ್ಲಿ ಹೇಳಿದ್ದಾರೆ. ಇದರ ಈ ಅರ್ಥ ಇರುವದಿಲ್ಲ. ಏನೆಂದರೆ ಬೇರೆ ಯಾವುದೇ ಕೆಳಗಿನ ಭೂಮಿಕೆಯುಳ್ಳಂಥವನು ವ್ರತ ಮತ್ತು ಪ್ರತಿಮೆಗಳನ್ನು ಅಭ್ಯಾಸದ ಸಲುವಾಗಿ ಅಥವಾ ಪಾಪದಿಂದ ಉಳಿದುಕೊಳ್ಳುವ ಸಲುವಾಗಿ ಸ್ವೀಕಾರ ಮಾಡುವದಿಲ್ಲ. ಆದರೆ ಎಲ್ಲರಿಗೂ ಅವಶ್ಯವಾಗಿ ಸ್ವೀಕಾರ ಮಾಡಲೇಬೇಕಾಗುತ್ತದೆ. ಯಾರಿಗೆ ದುಃಖವು ಪ್ರಿಯ ಇರುವದಿಲ್ಲವೋ ಅವರು ದುಃಖದ ಕಾರಣರೂಪವಾದ ಪಾಪಗಳ ಆಚರಣೆ ಹೇಗೆ ಮಾಡಲು ಸಾಧ್ಯವಿದೆ ? ಅವರು ಇಂತಹ ಆಚರಣೆ ಮಾಡುವದೇ ಇಲ್ಲ. ಇದನ್ನು ವಿಚಾರ ಮಾಡಿ ಎಲ್ಲರನ್ನು ರಾತ್ರಿಭೋಜನದ ಅವಶ್ಯವಾಗಿಯೇ ಮಾಡಬೇಕು. ಇದುವೇ ತಮಗೆ ನಮ್ಮ ಆಗ್ರಹವಿದೆ.

ಆತ್ಮಾರ್ಥಿಯು ಒಂದೇ ಮಾತು ಧ್ಯಾನದಲ್ಲಿ ಇಡಬೇಕಾಗಿದೆ. ಏನೆಂದರೆ ನನ್ನ ಜೀವನದ ಕೊನೆಯ ದಿನವಿದೆ ಮತ್ತು ಒಂದು ವೇಳೆ ಈ ಮನುಷ್ಯಭವದಲ್ಲಿ ನಾನು ಆತ್ಮಪ್ರಾಪ್ತಿ ಮಾಡಲಿಲ್ಲ. ಆದರೆ ಈಗ ಅನಂತ, ಅನಂತ, ಅನಂತಕಾಲದ ನಂತರವೂ ಸಹ ಮನುಷ್ಯಜನ್ಮ, ಪೂರ್ಣ ಇಂದ್ರಿಯಗಳ ಪ್ರಾಪ್ತಿ, ಆರ್ಯದೇಶದಲ್ಲಿ ಜನ್ಮ, ಉಚ್ಚಕುಲ, ಧರ್ಮದ ಪ್ರಾಪ್ತಿ, ಧರ್ಮದ ಉಪದೇಶ ಮುಂತಾದವು ದೊರಕುವದಿಲ್ಲ. ಆದರೆ ಅನಂತ, ಅನಂತ, ಅನಂತ ಕಾಲಪರ್ಯಂತ ಅನಂತ, ಅನಂತ, ಅನಂತ ದುಃಖವೇ ದೊರಕುತ್ತದೆ. ಆದ್ದರಿಂದ ಈ ಅಮೂಲ್ಯ ದುರ್ಲಭ ಮನುಷ್ಯ ಜನ್ಮ, ಕೇವಲ ಶಾರೀರಿಕ ಇಂದ್ರಿಯ ಜನಿತ ಸುಖ ಮತ್ತು ಅದರ ಪ್ರಾಪ್ತಿಯ ಸಲುವಾಗಿ ಖರ್ಚು ಮಾಡುವದು ಯೋಗ್ಯ ಇರುವದಿಲ್ಲ. ಅದರ ಒಂದು ಕ್ಷಣವೂ ಕೂಡ ವ್ಯರ್ಥ ಕಳೆಯಬೇಡಿರಿ. ಕೇವಲ ಬೇಗನೇ ಅಶಾಶ್ವತ ಸುಖವೊಂದನ್ನು ಆತ್ಮೀಕ ಸುಖದ ಅಂದರೆ ಸಮ್ಯಗ್ದರ್ಶನದ ಪ್ರಾಪ್ತಿಯ ಸಲುವಾಗಿ ತಕ್ಷಣ ತೊಡಗಬೇಕು.

# ಹನ್ನೆರಡು ಭಾವನೆಗಳು (ಅನುಪ್ರೇಕ್ಷೆಗಳು)

**೧. ಅನಿತ್ಯ ಭಾವನೆ :**

ಸಂಯೋಗಗಳು ಎಲ್ಲವೂ ಅನಿತ್ಯ ಇವೆ. ಯಾವವೂ ನನ್ನೊಂದಿಗೆ ಯಾವಾಗಲೂ ಇರುವಂಥವಲ್ಲ. ಆದ್ದರಿಂದ ಜನರ ಹಾಗೂ ಪರಿಗ್ರಹದ ಕುರಿತು ಮೋಹವನ್ನು ತ್ಯಾಗ ಮಾಡಬೇಕು. ಅವುಗಳಲ್ಲಿ 'ನನ್ನತನ' ಮತ್ತು 'ನನ್ನದು' ಎನ್ನುವದನ್ನು ತ್ಯಾಗ ಮಾಡಬೇಕು.

**೨. ಅಶರಣ ಭಾವನೆ :**

ನನ್ನ ಪಾಪಗಳ ಉದಯದ ಸಮಯ ನನಗೆ ತಾಯಿ-ತಂದೆ, ಪತ್ನಿ-ಪುತ್ರ-ಸಂಪತ್ತು ಮುಂತಾದ ಯಾರೂ ಸಹ ನನಗೆ ಆಶ್ರಯ ಕೊಡುವದಿಲ್ಲ. ಅವರು ನನ್ನ ದುಃಖವನ್ನು ಕಡಿಮೆ ಮಾಡುತ್ತಾರೆ. ಹೀಗೂ ಸಹ ಇರುವದಿಲ್ಲ. ಆದ್ದರಿಂದ ಅವರ ಕುರಿತು ಮೋಹ ತ್ಯಾಗ ಮಾಡು. ಅವರಲ್ಲಿ ನನ್ನವರು ಎನ್ನುವದನ್ನು ತ್ಯಾಗ ಮಾಡಬೇಕು. ಆದರೆ ಅವರ ಕುರಿತು ಕರ್ತವ್ಯಪೂರ್ಣ ರೂಪದಿಂದ ಪಾಲಿಸಬೇಕು.

**೩. ಸಂಸಾರ ಭಾವನೆ :**

ಸಂಸಾರ ಅಂದರೆ ಜನ್ಮ-ಮರಣದಲ್ಲಿ ವ್ಯರ್ಥ ಅಲೆದಾಡುವದು. ಅದರಲ್ಲಿ ಒಂದು ಸಮಯದ ಸುಖದ ಎದುರು ಅನಂತಕಾಲದ ದುಃಖವು ದೊರೆಯುತ್ತದೆ. ಆದ್ದರಿಂದ ಇಂತಹ ಸಂಸಾರವು ಯಾರಿಗೆ ರುಚಿಸುವದು ? ರುಚಿಸುವದಿಲ್ಲ. ಆದ್ದರಿಂದ ಕೇವಲ ಒಂದು ಲಕ್ಷ್ಯ ಇರಬೇಕು. ಅದೆಂದರೆ ಈ ಸಂಸಾರದಿಂದ ಬಿಡುಗಡೆಯನ್ನೇ ಬಯಸಬೇಕು.

**೪. ಏಕತ್ವ ಭಾವನೆ :**

ಅನಾದಿಯಿಂದ ನಾನು ಒಬ್ಬಂಟಿಗನಾಗೇ ಅಲೆಯುತ್ತಿದ್ದೇನೆ. ಒಬ್ಬಂಟಿಗನಾಗಿಯೇ ದುಃಖವನ್ನು ಭೋಗಿಸುತ್ತಿದ್ದೇನೆ. ಮರಣದ ಸಮಯ ನನ್ನೊಂದಿಗೆ ಯಾರೂ ಬರುವವರಿಲ್ಲ. ಆದ್ದರಿಂದ ನನಗೆ ಎಷ್ಟು ಸಾಧ್ಯವೋ ಅಷ್ಟು ನನ್ನಲ್ಲಿಯೇ (ಆತ್ಮನಲ್ಲಿಯೇ) ಇರಲು ಪ್ರಯತ್ನ ಮಾಡಬೇಕು.

೫. ಅನ್ಯತ್ವ ಭಾವನೆ :

ನಾನು ಯಾರು? ಇದನ್ನು ಚಿಂತನ ಮಾಡಬೇಕು. ಅಂದರೆ ಮೊದಲು ಹೇಳಿದ ಅನುಸಾರ ಪುದ್ಗಲ ಮತ್ತು ಪುದ್ಗಲ (ಕರ್ಮ) ಆಶ್ರಿತ ಭಾವನೆಗಳಿಂದ ತನ್ನನ್ನು ಬೇರೆ ಎಂದು ತಿಳಿಯಬೇಕು ಮತ್ತು ಇದೇ ಭಾವದಲ್ಲಿ 'ನನ್ನತನ' (ತನ್ನತನ) ಮಾಡಬೇಕು. ಇದರದೇ ಅನುಭವ ಮಾಡಬೇಕು. ಇದನ್ನೇ ಸಮ್ಯಗ್ದರ್ಶನ ಎಂದು ಹೇಳಲಾಗುತ್ತದೆ. ಈ ಜೀವನದಲ್ಲಿ ಕೇವಲ ಇದೊಂದೇ ಕರ್ತವ್ಯವಾಗಬೇಕು.

೬. ಅಶುಚಿತ್ವ ಭಾವನೆ :

ನಮ್ಮಲ್ಲಿ ನಮ್ಮ ಶರೀರವನ್ನು ಸುಂದರವಾಗಿಡಬೇಕೆಂಬ ಭಾವನೆ ಇದೆ ಮತ್ತು ಬೇರೆಯವರ ಶರೀರದ ಕುರಿತು ಆಕರ್ಷಣೆ ಇದೆ. ಆ ಶರೀರದ ತೊಗಲನ್ನು ಸರಿಸಿದರೆ ಕೇವಲ ಮಾಂಸ, ರಕ್ತ, ಕೀವು, ಮಲಮೂತ್ರ ಮುಂತಾದವು ಕಾಣುತ್ತವೆ. ಇವೆಲ್ಲವೂ ಅಶುಚಿ ಇವೆ. ಹೀಗೆ ವಿಚಾರ ಮಾಡಿ ತಮ್ಮ ಶರೀರದ ಮತ್ತು ಬೇರೆಯವರ ಶರೀರದ ಮೋಹ ತ್ಯಾಗ ಮಾಡಬೇಕು.

೭. ಆಸ್ರವ ಭಾವನೆ :

ಪುಣ್ಯ ಮತ್ತು ಪಾಪ ಈ ಎರಡೂ ನನ್ನ (ಆತ್ಮನ) ಸಲುವಾಗಿ ಆಸ್ರವ ಇವೆ. ಆದ್ದರಿಂದ ವಿವೇಕದ ಮೂಲಕ ಮೊದಲು ಪಾಪಗಳನ್ನು ತ್ಯಾಗ ಮಾಡಬೇಕು. ಮತ್ತು ನಂತರ ಕೇವಲ ಆತ್ಮಪ್ರಾಪ್ತಿಯ ಲಕ್ಷ್ಯದಿಂದ ಶುಭಭಾವದಲ್ಲಿ ಇರುವದು ಕರ್ತವ್ಯವಾಗಿದೆ.

೮. ಸಂವರ ಭಾವನೆ :

ನಿಜವಾದ (ಕಾರ್ಯಕಾರಿ) ಸಂವರದ ಪ್ರಾರಂಭವು ಸಮ್ಯಗ್ದರ್ಶನದಿಂದಲೇ ಆಗುತ್ತದೆ. ಆದ್ದರಿಂದ ಅದರ ಲಕ್ಷ್ಯದಿಂದ ಪಾಪಗಳ ತ್ಯಾಗ ಮಾಡಿ ಕೇವಲ ಒಂದೇ ನಿಜವಾದ ಸಂವರದ ಲಕ್ಷ್ಯದಿಂದ ದ್ರವ್ಯ ಸಂವರ ಪಾಲಿಸಬೇಕು.

೯. ನಿರ್ಜರ ಭಾವನೆ :

ನಿಜವಾದ (ಕಾರ್ಯಕಾರಿ) ನಿರ್ಜರೆಯು ಪ್ರಾರಂಭವು ಸಮ್ಯಗ್ದರ್ಶನದಿಂದಲೇ ಆಗುತ್ತದೆ. ಆದ್ದರಿಂದ ಅದರ ಲಕ್ಷ್ಯದಿಂದ ಪಾಪಗಳ

ತ್ಯಾಗ ಮಾಡಿ ಕೇವಲ ಒಂದೇ ನಿಜವಾದ ನಿರ್ಜರೆಯ ಲಕ್ಷ್ಯದಿಂದ ಯಥಾಶಕ್ತಿ ತಪ ಮಾಡಬೇಕು.

**೧೦. ಲೋಕ ಸ್ವರೂಪ ಭಾವನೆ :**

ಮೊದಲು, ಲೋಕದ ಸ್ವರೂಪವನ್ನು ತಿಳಿಯಬೇಕು. ಇದರ ನಂತರ ಇದನ್ನು ಚಿಂತನೆ ಮಾಡಬೇಕು. ಏನೆಂದರೆ ನಾನು ಅನಾದಿಯಿಂದ ಈ ಲೋಕದ ಎಲ್ಲ ಪ್ರದೇಶಗಳಲ್ಲಿ ಅನಂತ ಸಲ ಹುಟ್ಟಿದ್ದೇನೆ ಮತ್ತು ಸತ್ತಿದ್ದೇನೆ. ಅನಂತ ದುಃಖ ಭೋಗಿಸಿದ್ದೇನೆ. ಈಗ ಎಲ್ಲಿಯ ತನಕ ಈ ವ್ಯವಸ್ಥೆ ನಡೆಯುತ್ತದೆ ? ಇದರ ಕೊನೆ ಆಗುವ ಸಲುವಾಗಿ ಸಮ್ಯಗ್ದರ್ಶನದ ಆವಶ್ಯಕತೆ ಇದೆ. ಆದ್ದರಿಂದ ಅದರ ಪ್ರಾಪ್ತಿಯ ಉಪಾಯ ಮಾಡಬೇಕು. ಎರಡನೆಯದು ಲೋಕದಲ್ಲಿ ಇರುವಂಥ ಅನಂತಸಿದ್ಧ ಭಗವಾನರು ಮತ್ತು ಸಂಖ್ಯಾತ ಅರಹಂತರು ಮತ್ತು ಸಾಧುಗಳ ವಂದನೆ ಮಾಡುವದು ಮತ್ತು ಅಸಂಖ್ಯಾತ ಶ್ರಾವಕ-ಶ್ರಾವಿಕೆಯರು ಹಾಗೂ ಸಮ್ಯಗ್ದೃಷ್ಟಿ ಜೀವರುಗಳ ಅನುಮೋದನೆ ಮಾಡಬೇಕು ಹಾಗೂ ಪ್ರಮೋದ ಮಾಡಬೇಕು.

**೧೧. ಬೋಧಿ ದುರ್ಲಭ ಭಾವನೆ :**

ಬೋಧಿ ಎಂದರೆ ಸಮ್ಯಗ್ದರ್ಶನ. ಅನಾದಿಯಿಂದ ನಾವು ಅಲೆಯುತ್ತಿರುವದಕ್ಕೆ ಯಾವುದೇ ಕಾರಣವಿದ್ದರೂ ಸಮ್ಯಗ್ದರ್ಶನದ ಅಭಾವವೇ ಆಗಿದೆ ಎಂದು ಇದರಿಂದ ತಿಳಿದು ಬರುತ್ತದೆ. ಏನೆಂದರೆ ಸಮ್ಯಗ್ದರ್ಶನವು ಎಷ್ಟು ದುರ್ಲಭವಿದೆ. ಒಬ್ಬ ಆಚಾರ್ಯರು ಇಲ್ಲಿಯ ತನಕ ಏನು ಹೇಳಿದ್ದಾರೆಂದರೆ ವರ್ತಮಾನ ಕಾಲದಲ್ಲಿ ಸಮ್ಯಗ್ದೃಷ್ಟಿಗಳು ಬೆರಳಿನ ತುದಿಯ ಮೇಲೆ ಎಣಿಸುವಷ್ಟೇ ಜನರು ಇರುತ್ತಾರೆ.

**೧೨. ಧರ್ಮ ಭಾವನೆ :**

ವರ್ತಮಾನ ಕಾಲದಲ್ಲಿ ಧರ್ಮದ ಸ್ವರೂಪದಲ್ಲಿ ಬಹಳ ವಿಕೃತಿಗಳು ಪ್ರವೇಶ ಮಾಡಿವೆ. ಆದ್ದರಿಂದ ಸತ್ಯಧರ್ಮದ ಶೋಧ ಮತ್ತು ಅದರದೇ ಚಿಂತನ ಮಾಡಬೇಕು. ಸಂಪೂರ್ಣ ಪುರುಷಾರ್ಥ ಇದರಲ್ಲಿಯೇ ತೊಡಗಿಸಿರಿ.

ಆತ್ಮಾರ್ಥಿಗೆ ಯಾವುದೇ ಮತ-ಪಂಥ-ಸಂಪ್ರದಾಯ ವ್ಯಕ್ತಿವಿಶೇಷದ ಆಗ್ರಹ, ಹಠಾಗ್ರಹ, ಕದಾಗ್ರಹ, ಪೂರ್ವಾಗ್ರಹ ಅಥವಾ ಯಾವುದೇ ಪಕ್ಷ ಇವು ಬೇಕಾಗಿರುವುದಿಲ್ಲ. ಏಕೆಂದರೆ ಆತ್ಮನ ಸಲುವಾಗಿ ಇವು ಅನಂತ ಕಾಲದ ಬೇಡಿ ಸಮಾನ ಇವೆ. ಅಂದರೆ ಅವು ಆತ್ಮನಿಗೆ ಅನಂತಕಾಲದ ತನಕ ದಾರಿ ತಪ್ಪಿಸಿ ಅಲೆದಾಡುತ್ತಿವೆ. ಆತ್ಮಾರ್ಥಿಯ ಸಲುವಾಗಿ 'ಒಳ್ಳೆಯದು, ಅದು ನನ್ನದು' ಮತ್ತು 'ನಿಜವಾದುದು. ಅದು ನನ್ನದು ಹೀಗೆ ವಿಚಾರ ಮಾಡುವದು ಅತಿ ಅವಶ್ಯಕವಿದೆ. ಇದರಿಂದ ಅವನು ತನ್ನ ಮಿಥ್ಯಾ ಮಾನ್ಯತೆಗಳನ್ನು ಬಿಟ್ಟು ಸತ್ಯವನ್ನು ಸರಳತೆಯಿಂದ ಸ್ವೀಕರಿಸಬಹುದು. ಇದುವೇ ಅದರ ಯೋಗ್ಯತೆ ಎಂದು ಹೇಳುತ್ತಾರೆ.

## ದಿನಾಲು ಚಿಂತಿಸಬೇಕಾದ ಬೀಜ ವಾಕ್ಯಗಳು

★ ಏಕ ಸಮಕಿತ ಪಾಯೆ ಬಿನಾ, ಜಪತಪ ಕ್ರಿಯಾ ಫೋಕ ।
ಜೈಸಾ ಮುರ್ದಾ ಸಿಂಗಾರನಾ, ಸಮಝು ಕಹೇ ತಿಲೋಕ ॥

ಅಂದರೆ ಸಮ್ಯಗ್ದರ್ಶನ ರಹಿತ ಎಲ್ಲ ಕ್ರಿಯೆಗಳು ಜಪ, ತಪ, ಶ್ರಾವಕ ವ್ರತಗಳು, ಕ್ಷುಲ್ಲಕತನ, ಸಾಧುತನ ಮುಂತಾದವು ಹೆಣಕ್ಕೆ ಶೃಂಗಾರ ಮಾಡಿದಂತೆ ನಿರರ್ಥಕವಿದೆ. ಭಾವಾರ್ಥ ಹೀಗಿದೆ : ಏನೆಂದರೆ ಸಮ್ಯಗ್ದರ್ಶನದ ಹೊರತು ಯಾವುದೇ ಕ್ರಿಯೆಯು ಜಪ, ತಪ, ಶ್ರಾವಕತ್ವ, ಕ್ಷುಲ್ಲಕತ್ವ, ಸಾಧುತ್ವ ಎಲ್ಲವೂ ಭವದ ಕೊನೆಗಾಣಿಸುವಲ್ಲಿ ಸಮರ್ಥ ಇರುವದಿಲ್ಲ. ಇದರ ಅರ್ಥ ಇದು ಅಲ್ಲ ಏನೆಂದರೆ ಸಮ್ಯಗ್ದರ್ಶನ ರಹಿತ ಜೀವಗಳು ಏನೂ ಮಾಡಲೇಬಾರದು ಎಂದಲ್ಲ. ಆದರೆ ಅವುಗಳಿಂದಲೇ ಸಂತುಷ್ಟ ಆಗಬಾರದು. ಅವುಗಳನ್ನು ಮಾಡಿ ತನ್ನನ್ನು ಕೃತಕೃತ್ಯನೆಂದು ತಿಳಿಯದೇ ಎಲ್ಲ ಪ್ರಯತ್ನ ಕೇವಲ ಒಂದು ನಿಶ್ಚಯ ಸಮ್ಯಗ್ದರ್ಶನದ ಪ್ರಾಪ್ತಿಯ ಸಲುವಾಗಿಯೇ ಪ್ರಯತ್ನಿಸಬೇಕು.

★ **ಭಗವಂತರ ದರ್ಶನ ಮಾಡುವ ವಿಧಿವಿಧಾನಗಳು** – ಭಗವಂತರ ಗುಣಗಳ ಚಿಂತನ ಮಾಡುವದು ಮತ್ತು ಅವರು ಭಗವಾನರಾಗುವ ಸಲುವಾಗಿ ಯಾವ ಮಾರ್ಗದ ಮೇಲೆ ನಡೆದರು. ಆ ಮಾರ್ಗದ ಮೇಲೆ ನಡೆಯುವ ದೃಢ ನಿರ್ಣಯ ಮಾಡುವದು ಇದುವೇ ನಿಜವಾದ ದರ್ಶನವಿದೆ.

★ ಸಂಪೂರ್ಣ ಸಂಸಾರ ಮತ್ತು ಸಾಂಸಾರಿಕ ಸುಖಗಳ ಕುರಿತು ವೈರಾಗ್ಯದ ಹೊರತು ಮೋಕ್ಷ ಮಾರ್ಗದ ಪ್ರಾರಂಭವಾಗುವದು. ಅತ್ಯಂತ ದುರ್ಲಭವಿದೆ. ಸಂಸಾರ ಮತ್ತು ಸಾಂಸಾರಿಕ ಸುಖಗಳ ಕುರಿತು ರುಚಿರಹಿತ ಸಮ್ಯಗ್ದರ್ಶನದ ಪ್ರಾಪ್ತಿಯಾಗುವದು ಅತ್ಯಂತ ದುರ್ಲಭವಿದೆ.

★ ಜೀವನಿಗೆ ನಾಲ್ಕು ಸಂಜ್ಞಾ / ಸಂಸ್ಕಾರಗಳಾದ ಆಹಾರ, ಮೈಥುನ, ಪರಿಗ್ರಹ ಮತ್ತು ಭಯ ಇವು ಅನಾದಿಯಿಂದ ಇವೆ. ಈ ಸಂಜ್ಞೆಗಳ

ವಿಚಾರ ಅವನಿಗೆ ಸಹಜವಾಗಿಯೇ ಆಗುತ್ತದೆ. ಈ ವಿಚಾರಗಳಿಂದ ಬಿಡುಗಡೆ ಪಡೆಯಬೇಕು. ಆದರೆ ಸ್ವತಃದ ರುಚಿಯ ಶೋಧನೆ ಮಾಡಬೇಕು. ಎಲ್ಲಿಯವರೆಗೆ ಈ ಸಂಜ್ಞೆಗಳು ರುಚಿಸುತ್ತವೆ ಅಥವಾ ಇವುಗಳಲ್ಲಿ ಸುಖವು ಕಂಡುಬರುವದು ಅಲ್ಲಿಯವರೆಗೆ ಅವುಗಳಿಂದ ಬಿಡುಗಡೆ ಸಿಗುವದು ಅತ್ಯಂತ ಕಠಿಣವಿದೆ. ಹೇಗೆಂದರೆ ನಾಯಿಯು ಎಲುಬನ್ನು ಜಗಿಯುತ್ತದೆ. ಆಗ ಒಸಡುಗಳಿಂದ ರಕ್ತ ಬರುತ್ತದೆ. ಅದರ ಸ್ವಾದದಿಂದ ನಾಯಿಗೆ ಆನಂದ ಎನಿಸುತ್ತದೆ. ರಕ್ತವು ಎಲುಬಿನಿಂದಲೇ ಬರುತ್ತದೆಂದು ತಿಳಿದಿರುತ್ತದೆ. ಇದು ಅದರ ಭ್ರಮೆಯಿದೆ. ಇದೇ ತರಹ ಜೀವವು ಅನಾದಿಯಿಂದ ಭ್ರಮೆಯಲ್ಲಿಯೇ ಬದುಕುತ್ತಿದೆ. ಈ ಪ್ರಕಾರ ಎಲ್ಲಿಯ ತನಕ ಅದಕ್ಕೆ ಆಹಾರ, ಮೈಥುನ, ಪರಿಗ್ರಹ ಮತ್ತು ಭಯ ಅಂದರೆ ಬಲವಾನರಿಂದ ಹೆದರಿಕೆ ಮತ್ತು ಅಶಕ್ತರಿಗೆ ಅಂಜಿಸುವದು / ಬೆದರಿಸುವದು ರುಚಿಸುತ್ತದೆ. ಅಲ್ಲಿಯವರೆಗೆ ಆ ಜೀವಕ್ಕೆ ಈ ವಸ್ತುಗಳ ವಿಚಾರ ಸಹಜವಾಗಿಯೇ ಆಗುತ್ತವೆ ಮತ್ತು ಆದ್ದರಿಂದ ಅವನ ಸಂಸಾರದ ಕೊನೆಯು ಆಗುವದೇ ಇಲ್ಲ. ಈ ಕಾರಣ ಮೋಕ್ಷ ಬಯಸುವವನಿಗೆ ಈ ಅನಾದಿಯ ವಿರುದ್ಧ ಸಂಸ್ಕಾರಗಳನ್ನು ಬೇರು ಸಹಿತ ಹೊರಹಾಕುವ ಪುರುಷಾರ್ಥ ಮಾಡಬೇಕು. ಅದರ ಸಲುವಾಗಿ ಮೊಟ್ಟಮೊದಲು ಈ ಸಂಜ್ಞೆಗಳ ಕುರಿತು ಆದರ ಭಾವ ಬಿಡುಗಡೆಯಾಗುವದು ಆವಶ್ಯಕವಿದೆ. ಆದ್ದರಿಂದ ಸಂಪೂರ್ಣ ಪುರುಷಾರ್ಥ ಅವುಗಳ ಕುರಿತು ವೈರಾಗ್ಯ ಉಂಟಾಗಬೇಕು. ಇದರ ಸಲುವಾಗಿ ಮನಸ್ಸನ್ನು ಹಚ್ಚುವದು ಆವಶ್ಯಕವಿದೆ. ಇದರ ಸಲುವಾಗಿ ಸತ್ಯಮಾತು ಮತ್ತು ನಿಜವಾದ ತಿಳಿವಳಿಕೆ ಸಹ ಆವಶ್ಯಕವಿದೆ.

★ ತಮಗೆ ಏನು ರುಚಿಸುತ್ತದೆ ? ಇದುವೇ ಆತ್ಮಪ್ರಾಪ್ತಿಯ ಥರ್ಮಾಮೀಟರ. ಇದೇ ಪ್ರಶ್ನೆಯ ಮೇಲೆ ವಿಚಾರ ಮಾಡಿರಿ. ಎಲ್ಲಿಯ ತನಕ ಉತ್ತರದಲ್ಲಿ – ಯಾವುದೇ ಸಂಸಾರದ ಇಚ್ಛೆ / ಅಪೇಕ್ಷೆ ಉಂಟಾದರೆ ಅಲ್ಲಿಯ ತನಕ ಅವನ ಗತಿ ಸಂಸಾರದ ಕಡೆಗೇನೇ ಇದೆ ಎಂದು ತಿಳಿಯುವದು ಮತ್ತು ಯಾವಾಗ ಉತ್ತರ ಕೇವಲ ಒಂದೇ ಆತ್ಮ ತೃಪ್ತಿ ಇದ್ದರೆ ತಿಳಿಯುತ್ತದೆ. ಏನೆಂದರೆ ತಮ್ಮ ಸಂಸಾರದ ದಂಡೆಯು ಬಹಳ ಸಮೀಪ ಬಂದಿರುತ್ತದೆ. ಅದರ ಸಲುವಾಗಿ ಪುರುಷಾರ್ಥ ಹೆಚ್ಚಿಸುವದೊಂದೇ ಕೇವಲ ಆತ್ಮತೃಪ್ತಿ ಎಂದು ತಿಳಿಯುವದು.

★ ಯಾರಿಗೆ ಆತ್ಮನ ರುಚಿ ಜಾಗೃತವಾಗಿದೆ ಮತ್ತು ಕೇವಲ ಅದರದೇ ವಿಚಾರ ಬರುತ್ತದೆ. ಅದರ ಪ್ರಾಪ್ತಿಯ ಉಪಾಯ ವಿಚಾರ ಮಾಡುತ್ತಾನೆಂದರೆ ಅವನ ಭಕ್ತಿ ಯಥಾರ್ಥವಿದೆ. ಅವನು ನಿಜವಾದ ಭಕ್ತಿಮಾರ್ಗದಲ್ಲಿ ಇದ್ದಾನೆ. ಆದ್ದರಿಂದ ಎಲ್ಲಿಯ ತನಕ ತಮಗೆ ಏನು ರುಚಿಸುತ್ತದೆ. ಇದರ ಉತ್ತರಲ್ಲಿ ಯಾವುದೇ ಸಾಂಸಾರಿಕ ಇಚ್ಛೆ / ಆಶೆ ಇದೆ ಅಥವಾ ಯಾವುದೇ ವ್ಯಕ್ತಿಯೇ ಇರಲಿ ಅಲ್ಲಿಯವರೆಗೆ ತನ್ನ ಭಕ್ತಿ ಸಂಸಾರದ ಕಡೆಗೆನೇ ಇದೆ ಎಂದು ತಿಳಿಯುವದು ಮತ್ತು ಯಾವಾಗ ಉತ್ತರ ಕೇವಲ ಒಂದೇ ಆತ್ಮತೃಪ್ತಿ ಇದ್ದರೆ ತಿಳಿಯುತ್ತದೆ ಏನೆಂದರೆ ಯಾವಾಗ ಉತ್ತರದಲ್ಲಿ ಕೇವಲ ಒಂದು ಆತ್ಮಪ್ರಾಪ್ತಿ ಇದ್ದರೆ ತಿಳಿಯುವದು ಏನೆಂದರೆ ಸಂವೇಗವನ್ನು ಭಕ್ತಿ ಎಂದು ತಿಳಿಯುವದು. ಏಕೆಂದರೆ ವೈರಾಗ್ಯವು ಅಂದರೆ ನಿರ್ವೇದ ಸಹಿತವೇ ಆತ್ಮಪ್ರಾಪ್ತಿಯ ಸಲುವಾಗಿ ಕಾರ್ಯಕಾರಿ ಇದೆ.

★ ಅಭಯದಾನ, ಜ್ಞಾನದಾನ, ಅನ್ನದಾನ, ಧನದಾನ, ಔಷಧದಾನ ಇವುಗಳಲ್ಲಿ ಅಭಯದಾನವು ಅತಿಶ್ರೇಷ್ಠವಿದೆ. ಆದ್ದರಿಂದ ಎಲ್ಲರಿಗೂ ಪ್ರತಿ ದಿವಸ ಜೀವನದಲ್ಲಿ ಪ್ರತಿಯೊಂದು ಕಾರ್ಯದಲ್ಲಿ ಜೀವಹಿಂಸೆ ಅತ್ಯಂತ ಕಡಿಮೆ ಆಗುವಂತೆ ಪ್ರಯತ್ನಪೂರ್ವಕ ಸಾವಧಾನದಿಂದ ಇರುವದು ಅತ್ಯಂತ ಅವಶ್ಯಕವಿದೆ.

ಪ್ರಶ್ನೆ : ಸಂಪತ್ತು ಪುಣ್ಯದಿಂದ ಪ್ರಾಪ್ತವಾಗುತ್ತದೆಯೋ ಅಥವಾ ಶ್ರಮದಿಂದ ಪ್ರಾಪ್ತವಾಗುತ್ತದೆಯೋ ? ಎಂದು ತಿಳಿಯುವುದಾದರೆ ಅದು ಮುಖ್ಯವಾಗಿ ಪುಣ್ಯದಿಂದಾಗುತ್ತದೆ. ಧನದ ಪ್ರಾಪ್ತಿಯಲ್ಲಿ ಪುಣ್ಯದ ಯೋಗದಾನ ಹೆಚ್ಚಾಗಿದ್ದು, ಶ್ರಮವು ಅಂದರೆ ಪುರುಷಾರ್ಥದ ಯೋಗದಾನವು ಕಡಿಮೆ ಇರುತ್ತದೆ. ಏಕೆಂದರೆ ಯಾವುದರ ಜನ್ಮವು ಶ್ರೀಮಂತ ಪರಿವಾರದಲ್ಲಿ ಆಗುತ್ತದೆ. ಅವನಿಗಂತೂ ಪ್ರಯತ್ನದ ಹೊರತು ಸಂಪತ್ತು ಪ್ರಾಪ್ತವಾಗುತ್ತದೆ ಮತ್ತು ಜನರು ವ್ಯಾಪಾರದಲ್ಲಿ ಬಹಳ ಶ್ರಮ ಮಾಡಿದ ಬಳಿಕವೂ ಸಹ ಸಂಪತ್ತು ಕಳೆಯುತ್ತಿರುವುದು ಕಂಡುಬರುತ್ತದೆ. ಧನ ಗಳಿಸುವ ಸಲುವಾಗಿ ಪ್ರಯತ್ನ ಅವಶ್ಯವಿದೆ. ಎಷ್ಟೋ ಜನರಿಗೆ ಅತಿ ಅಲ್ಪ ಪ್ರಯತ್ನದಿಂದ ಹೆಚ್ಚು ಸಂಪತ್ತು ದೊರೆಯುತ್ತದೆ. ಆದರೆ ಇನ್ನೊಬ್ಬನಿಗೆ ಬಹಳಷ್ಟು ಪ್ರಯತ್ನಪಟ್ಟರೂ ಕಡಿಮೆ ಸಂಪತ್ತು ಪ್ರಾಪ್ತವಾಗುತ್ತದೆ. ಇದರಿಂದ ಇದು ನಿಶ್ಚಿತವಾಗುತ್ತದೆ.

ಏನೆಂದರೆ ಸಂಪತ್ತು ಪ್ರಯತ್ನದ ಅಪೇಕ್ಷೆಗಿಂತ ಪುಣ್ಯವನ್ನು ವರಿಸುತ್ತದೆ. ಆದ್ದರಿಂದ ಯಾರಿಗೆ ಸಂಪತ್ತಿನ ಸಲುವಾಗಿ ಶ್ರಮ ಮಾಡುವದು ಆವಶ್ಯಕವಿರುತ್ತದೆ ಅವರು ಧರ್ಮದಿಂದ ನಡೆದುಕೊಂಡು ಬಹಳ ಹೆಚ್ಚಿನ ಶ್ರಮ ಪಡಬೇಕಾಗುತ್ತದೆ. ಇದರಿಂದ ಅನಂತಕಾಲದ ದುಃಖವು ದೂರವಾಗುತ್ತದೆ ಮತ್ತು ಜೊತೆ ಜೊತೆಗೆ ಪುಣ್ಯದ ಕಾರಣ ಧನವೂ ಸಹ ಸಹಜವಾಗಿಯೇ ಪ್ರಾಪ್ತಿಯಾಗುತ್ತದೆ. ಹೇಗೆ ಗೋದಿ ಬಿತ್ತಿದ ಬಳಿಕ ಜೊತೆಯಲ್ಲಿಯೇ ಹುಲ್ಲು ತನ್ನಿಂದ ತಾನೇ ಪ್ರಾಪ್ತವಾಗುತ್ತದೆ, ಅದೇ ಪ್ರಕಾರ ಸತ್ಯಧರ್ಮ ಮಾಡುವದರಿಂದ ಪಾಪವು ಹಗುರವಾಗುತ್ತದೆ ಮತ್ತು ಪುಣ್ಯವು ತೀವ್ರವಾಗುತ್ತದೆ. ಇದರಿಂದ ಭವಮುಕ್ತಿಯ ಜೊತೆ ಜೊತೆಗೆ ಧನ ಮತ್ತು ಸುಖ ತನ್ನಿಂದ ತಾನೇ ಪ್ರಾಪ್ತವಾಗುತ್ತವೆ. ಭವಿಷ್ಯದಲ್ಲಿ ಅವ್ಯಾಬಾಧ ಸುಖರೂಪಿ ಮುಕ್ತಿಯು ದೊರೆಯುತ್ತದೆ.

★ ಪುರುಷಾರ್ಥದಿಂದ ಧರ್ಮವಾಗುತ್ತದೆ ಮತ್ತು ಪುಣ್ಯದಿಂದ ಸಂಪತ್ತು ಸಿಗುತ್ತದೆ. ಅಂದರೆ ಪೂರ್ಣ ಪುರುಷಾರ್ಥವನ್ನು ಧರ್ಮದಲ್ಲಿ ತೊಡಗಿಸಬೇಕು ಮತ್ತು ಧನ ಗಳಿಸುವಲ್ಲಿ ಕಡಿಮೆ ಕಡಿಮೆ ಸಮಯ ಕಳೆಯಬೇಕು. ಏಕೆಂದರೆ ಸಂಪತ್ತು ಶ್ರಮದ ಅನುಪಾತದಲ್ಲಿ ದೊರೆಯುವದಿಲ್ಲ. ಆದರೆ ಪುಣ್ಯದ ಅನುಪಾತದಲ್ಲಿ ದೊರೆಯುತ್ತದೆ.

★ ಅನಾದಿಯಿಂದ ಪುದ್ಗಲದ ಮೋಹದಲ್ಲಿ ಮತ್ತು ಅದರದೇ ಶೋಧದಲ್ಲಿ ಜೀವವು ದಂಡ ಪಡೆಯುತ್ತಲೇ ಬಂದಿದೆ. ತನ್ನ ಮೋಹದ ಕಾರಣದಿಂದ ಅವನು ಅನಂತ ದುಃಖ ಭೋಗಿಸುತ್ತ ಬಂದಿದೆ. ಆದ್ದರಿಂದ ಶೀಘ್ರತೆಯಿಂದ ಪುದ್ಗಲದ ಮೋಹ ಬಿಡುವದು ಯೋಗ್ಯವಿದೆ. ಆದರೆ ಅವನು ಕೇವಲ ಮೌಖಿಕ ರೂಪದಿಂದ ವಾಸ್ತವದಲ್ಲಿ ಇಲ್ಲ. ಹೇಗೆಂದರೆ ಧರ್ಮದ ಎತ್ತರೆತ್ತರ ಮಾತುಗಳನ್ನು ಆಡುವವನೂ ಸಹ ಪುದ್ಗಲದ ಮೋಹದಲ್ಲಿ ಜಾಲದಲ್ಲಿ ಬಿದ್ದಂತೆ ಕಾಣುತ್ತದೆ. ಈ ಜೀವವು ಅನಾದಿಯಿಂದ ಇದೇ ಪ್ರಕಾರ ತನ್ನನ್ನೇ ಮೋಸ ಮಾಡುತ್ತ ಬಂದಿದೆ. ಆದ್ದರಿಂದ ಎಲ್ಲ ಆತ್ಮಾರ್ಥಿಗಳಿಂದ ನಮ್ಮ ಪ್ರಾರ್ಥನೆ ಎಂದರೆ ತಾವು ತಮ್ಮ ಜೀವನ ಅತ್ಯಂತ ಸರಳತನದಿಂದ ಜೀವಿಸಿ ಪುದ್ಗಲದ ಅವಶ್ಯಕತೆಯನ್ನು ಕಡಿಮೆ ಮಾಡುವ ಪ್ರಯತ್ನ ಮಾಡಿರಿ. ಜೀವನ ಪರ್ಯಂತ ಎಲ್ಲ ಪ್ರಕಾರದ

ಪರಿಗ್ರಹದ ಸೀಮೆಯನ್ನು ಇಡಿರಿ. ಸಂತೋಷವು ಅತಿಶಯ ಆವಶ್ಯಕವಿದೆ. ಸಂತೋಷಿ ವ್ಯಕ್ತಿ ಒಬ್ಬನೇ ಆತ್ಮಪ್ರಾಪ್ತಿಯ ಲಕ್ಷ್ಯದ ಸಲುವಾಗಿಯೇ ಜೀವನ ಸಾಗಿಸುತ್ತಾರೆ. ಸಂತೋಷಿ ವ್ಯಕ್ತಿಯು ತನ್ನ ಜೀವನಿಗೆ ಅನಂತ ದುಃಖಿಗಳಿಂದ ರಕ್ಷಿಸುತ್ತಾನೆ ಮತ್ತು ಅನಂತ ಅವ್ಯಾಬಾಧ ಸುಖವನ್ನು ಪ್ರಾಪ್ತ ಮಾಡಿಕೊಳ್ಳುತ್ತಾನೆ.

★ ಕರ್ಮಗಳ ಯಾವ ಬಂಧವಾಗುತ್ತದೆ. ಅದರ ಉದಯ ಕಾಲದಲ್ಲಿ ಆತ್ಮನ ಭಾವ ಹೇಗೆ ಆಗುವದು. ಅಂದರೆ ಆ ಕರ್ಮಗಳ ಉದಯಕಾಲದಲ್ಲಿ ಹೊಸ ಕರ್ಮಗಳು ಹೇಗೆ ಬಂಧಿಸುತ್ತವೆ, ಅದನ್ನು ಅನುಬಂಧ ಎಂದು ಹೇಳುತ್ತಾರೆ. ಆ ಅನುಬಂಧವು ಅಭಿಪ್ರಾಯದ ಫಲವಿದೆ. ಆದ್ದರಿಂದ ಎಲ್ಲ ಪುರುಷಾರ್ಥದ ಅಭಿಪ್ರಾಯ ಬದಲಿಸುವಲ್ಲಿ ತೊಡಗಬೇಕು. ಅಂದರೆ ಅದನ್ನು ಸಮ್ಯಕ್ ಮಾಡುವಲ್ಲಿ ಹಚ್ಚಬೇಕು.

★ ಸ್ವರೂಪದಿಂದ ನಾನು ಸಿದ್ಧಸಮಾನನಾಗಿದ್ದರೂ ಸಹ ರಾಗದ್ವೇಷಗಳು ನನ್ನ ಮೇಲೆ ಕಲಂಕ ಸಮಾನ ಇವೆ. ಆದ್ದರಿಂದ ಅವನ್ನು ತೊಳೆಯುವ (ನಾಶ ಮಾಡುವ) ಧ್ಯೇಯದಿಂದ ದೃಢತೆ ಮತ್ತು ಧೈರ್ಯದಿಂದ ಧರ್ಮರೂಪಿ ಪುರುಷಾರ್ಥ ಮಾಡಬೇಕು.

★ ಸಂತೋಷ, ಸರಳತೆ, ನಿಷ್ಕಪಟತನ, ಸಮತಾಭಾವ, ಸಹಿಷ್ಣುತೆ, ಸಹನಶೀಲತೆ, ನಮ್ರತೆ, ಚಿಕ್ಕತನ, ವಿವೇಕ ಈ ಗುಣಗಳು ಜೀವನದಲ್ಲಿ ಇರುವದು ಅತ್ಯಂತ ಆವಶ್ಯಕವಿದೆ.

★ ತಪಸ್ಸಿನಲ್ಲಿ ವಿಶುದ್ಧ ಬ್ರಹ್ಮಚರ್ಯವನ್ನು ಪಾಲಿಸುವದು ಅತಿ ಶ್ರೇಷ್ಠವಿದೆ.

★ ಸಂಸಾರಿಕ ಜೀವಗಳು ನಿಮಿತ್ತವಾಸಿ ಆಗುತ್ತವೆ. ನಿಯಮದಿಂದ ಉಪಾದಾನದಲ್ಲಿಯೇ ಕಾರ್ಯದ ಪರಿಣಮನವಾಗುತ್ತದೆ. ಆದರೆ ಆ ಉಪಾದಾನದಲ್ಲಿ ಕಾರ್ಯವಾಗುವಾಗ ನಿಮಿತ್ತದ ಉಪಸ್ಥಿತಿ ಅವಿನಾಭಾವಿ ಆಗೇ ಆಗುತ್ತದೆ. ಆದ್ದರಿಂದ ವಿವೇಕದಿಂದ ಮುಮುಕ್ಷು ಜೀವರು ತಿಳಿಯುತ್ತಾರೆ. ಏನೆಂದರೆ ಕಾರ್ಯವು ಉಪಾದಾನದಲ್ಲಿ ಆದರೂ ಆದರೆ ಈ ಕಾರಣದ್ಧಿಂದ ಅವರಿಗೆ ಸ್ವಚ್ಛಂದತೆಯಿಂದ ಯಾವುದೇ ನಿಮಿತ್ತ ಪಡೆದರೆ

ಅನುಮತಿ ದೊರೆಯುವುದಿಲ್ಲ. ಆದ್ದರಿಂದಲೇ ಅವರು ಕ್ಷುದ್ರ ನಿಮಿತ್ತಗಳಿಂದ ಭಯಭಾವದಿಂದ ದೂರವೇ ಇರುತ್ತಾರೆ.

★ ಸಾಧಕನು ಆತ್ಮನ ಸಲುವಾಗಿ ಟಿವಿ, ಸಿನೇಮಾ, ನಾಟಕ, ಮೊಬೈಲ್, ಇಂಟರನೆಟ್ ಮುಂತಾದ ಕ್ಷುದ್ರ ನಿಮಿತ್ತಗಳಿಂದ ದೂರ ಇರುವುದು ಆವಶ್ಯಕವಿದೆ. ಏಕೆಂದರೆ ಉತ್ತಮಗಳಿಂದ ಉತ್ತಮ ಭಾವಗಳನ್ನು ಸಹ ತಿರುಗಿಸುವಲ್ಲಿ ಬಹಳ ತಡವಾಗುವದಿಲ್ಲ. ಈ ಎಲ್ಲ ಕ್ಷುದ್ರ ನಿಮಿತ್ತಗಳು ಅನಂತ ಸಂಸಾರ ಅರ್ಥಾತ್ ಅನಂತ ದುಃಖದ ಪ್ರಾಪ್ತಿಯ ಕಾರಣವಾಗುವಲ್ಲಿ ಸಮರ್ಥ ಇರುತ್ತವೆ.

★ ತಾಯಿ ತಂದೆಯರ ಉಪಕಾರದ ಋಣ ತೀರಿಸುವದನ್ನು ಬೇರೆ ಯಾವುದೇ ಪ್ರಕಾರದಿಂದ ತಪ್ಪಿಸಬಾರದು. ಕೇವಲ ಅವರಿಗೆ ಧರ್ಮಪ್ರಾಪ್ತಿ ಮಾಡಿಸಿಯೇ ಬಿಡಬೇಕು. ಆದ್ದರಿಂದ ತಾಯಿ-ತಂದೆಯರ ಸೇವೆ ಮಾಡಲೇಬೇಕು. ಅವರ ಸ್ವಭಾವ ಅನುಕೂಲ ಇರದಿದ್ದರೂ ಸಹ ಅವರ ಪೂರ್ಣ ಸೇವೆ ಮಾಡಬೇಕು ಮತ್ತು ಅವರಿಗೆ ಧರ್ಮ ಪ್ರಾಪ್ತಿ ಮಾಡಿಸಬೇಕು. ಇದರ ಸಲುವಾಗಿ ಮೊದಲು ಸ್ವತಃ ಧರ್ಮವನ್ನು ಪ್ರಾಪ್ತಿ ಮಾಡಿಕೊಳ್ಳುವದು ಅವಶ್ಯಕವಿದೆ.

★ ಧರ್ಮದ ಅಪಮಾನ ಆಗಬಾರದು ಆದ್ದರಿಂದ ತನ್ನ ಸ್ವಂತದ ನಡತೆಯ ಮೇಲೆ ಎಲ್ಲ ಜನರು ತಮ್ಮ ಪರಿವಾರದಲ್ಲಿ, ಉದ್ಯೋಗದಲ್ಲಿ, ಸಂಘಟಿತ ಕಾರ್ಯಕ್ರಮಗಳಲ್ಲಿ ಮುಂತಾದ ಕಡೆಗಳಲ್ಲಿ ಹಾಗೂ ಸಮಾಜದಲ್ಲಿ ತಮ್ಮ ವ್ಯವಹಾರ ಒಳ್ಳೆಯದಾಗಲಿ ಎಂಬ ಧ್ಯಾನ ಇಡುವದು ಅತ್ಯಂತ ಅವಶ್ಯಕ ಇರುತ್ತದೆ.

★ ಅಪೇಕ್ಷೆ, ಆಗ್ರಹ, ಆಸಕ್ತಿ, ಅಹಂಕಾರ ಹೊರ ಹಾಕುವದು ಸಹ ಅತ್ಯಂತ ಅವಶ್ಯಕ ಇರುತ್ತದೆ.

★ ಸ್ವಂತದ ದೋಷಗಳನ್ನು ನೋಡು, ಪರರ ದೋಷಗಳನ್ನು ನೋಡಬೇಡ, ಪರರ ಉತ್ತಮ ಗುಣಗಳನ್ನು ನೋಡು ಮತ್ತು ಅವನ್ನು ಸ್ವೀಕಾರ ಮಾಡು. ಇದು ಅತ್ಯಂತ ಅವಶ್ಯಕ ಕಾರ್ಯವಾಗಿದೆ.

★ ಅನಾದಿಯಿಂದ ಬಂದ ಇಂದ್ರಿಯಗಳ ಗುಲಾಮಿತನ ಬಿಡುವದು ಯೋಗ್ಯವಿದೆ.

★ ಯಾವ ಇಂದ್ರಿಯದ ವಿಷಯದಲ್ಲಿ ಎಷ್ಟು ಹೆಚ್ಚು ಆಸಕ್ತಿ ಮತ್ತು ಯಾವ ಇಂದ್ರಿಯದ ದುರುಪಯೋಗ ಹೆಚ್ಚು ಆಗುವದು, ಅಷ್ಟು ಆ ಇಂದ್ರಿಯಗಳು ಭವಿಷ್ಯದಲ್ಲಿ ಅನಂತಕಾಲದ ತನಕ ದೊರೆಯಲಾರದ ಸಂಭಾವನೆ ಹೆಚ್ಚಾಗಿರುತ್ತದೆ.

★ ನನ್ನಲ್ಲಿಯ ಕ್ರೋಧ, ಮಾನ, ಮಾಯಾ ಹಾಗೂ ಲೋಭ ಇವು ದೃಢವಾದ ವೈರಿಗಳಿದ್ದಾರೆ. ಇವರ ಹೊರತು ವಿಶ್ವದಲ್ಲಿ ಯಾರೂ ನನ್ನ ವೈರಿಗಳು ಇಲ್ಲವೇ ಇಲ್ಲ.

★ ಒಂದೇ ಒಂದು ಕಷಾಯವು ಅನಂತ ಸಲ ಹಿಂತಿರುಗಿ ಬರುವಲ್ಲಿ ಸಮರ್ಥ ಇದೆ. ಒಂದು ವೇಳೆ ನನ್ನಲ್ಲಿ ಆ ಕಷಾಯಗಳ ವಾಸವಿದೆಯಾದರೆ ನನ್ನದೇನಾಗುವದು ? ಆದ್ದರಿಂದ ಬೇಗನೇ ಎಲ್ಲ ಕಷಾಯಗಳ ನಾಶವನ್ನು ಬಯಸುವದು ಮತ್ತು ಅದರದೇ ಪುರುಷಾರ್ಥ ಮಾಡಬೇಕು.

★ ಅಹಂಕಾರ ಮತ್ತು ಮಮಕಾರ ಇವು ಅನಂತ ಸಂಸಾರದ ಕಾರಣವಾಗಿರುವಲ್ಲಿ ಸಮರ್ಥ ಇರುತ್ತವೆ. ಆದ್ದರಿಂದ ಅವುಗಳಿಂದ ಉಳಿದುಕೊಳ್ಳುವ ಉಪಾಯ ಮಾಡಬೇಕು.

★ ಕೇವಲ ತನ್ನ ನಿಂದೆ ಮಾಡುವದು ಅಂದರೆ ತನ್ನ ದುರ್ಗುಣಗಳದೇ ನಿಂದೆ ಮಾಡುವದು, ಬೇರೆಯವರ ದುರ್ಗಣಗಳನ್ನು ನೋಡಿ ಮೊಟ್ಟ ಮೊದಲು ತಮ್ಮ ಭಾವನೆಯನ್ನು ಶೋಧಿಸುವದು ಮತ್ತು ಒಂದು ವೇಳೆ ಆ ದುರ್ಗುಣಗಳು ತನ್ನಲ್ಲಿ ಇದ್ದರೆ ಹೊರಹಾಕಬೇಕು ಮತ್ತು ಅವುಗಳ ಕುರಿತು ತಿರಸ್ಕಾರ ಅಥವಾ ಕರುಣಾಭಾವ ಇಡಬೇಕು. ಏಕೆಂದರೆ ಎರಡನೆಯವರ ನಿಂದೆಯಿಂದ ನಮಗೆ ಬಹಳ ಕರ್ಮಬಂಧ ಆಗುತ್ತದೆ. ಯಾರೂ ಎರಡನೆಯವರ ಮನೆಯ ಕಸವನ್ನು ತಮ್ಮ ಮನೆಯಲ್ಲಿ ತರುವದಿಲ್ಲ. ಇದೇ ಪ್ರಕಾರ ಎರಡನೆಯವರ ನಿಂದೆ ಮಾಡುವದರಿಂದ ಅವನ ಕರ್ಮ ಸ್ವಚ್ಛವಾಗುತ್ತದೆ ಮತ್ತು ನಮಗೆ ಕರ್ಮಗಳ ಬಂಧವಾಗುತ್ತದೆ.

★ ಈರ್ಷೆ ಮಾಡುವುದಾದರೆ ಕೇವಲ ಭಗವಾನರೊಂದಿಗೆ ಮಾಡಬೇಕು. ಕೇವಲ ಭಗವಾನ ಆಗುವ ಸಲುವಾಗಿ ಭಗವಾನರಿಂದ ಈರ್ಷೆ ಮಾಡಬೇಕು. ಬೇರೆ ಯಾವ ಕಾರಣದಿಂದಲೂ ಬೇಡ. ಇದರ ಹೊರತು ಯಾರೊಡನೆಯೂ ಈರ್ಷಾ ಮಾಡುವದರಿಂದ ಅತ್ಯಂತ ದುಃಖ ಕೊಡುವಂಥ ಅನಂತ ಕರ್ಮಗಳ ಬಂಧವಾಗುತ್ತದೆ ಮತ್ತು ಜೀವವು ವರ್ತಮಾನದಲ್ಲಿಯೂ ಸಹ ದುಃಖಿಯಾಗಿರುತ್ತದೆ.

★ ಪ್ರತಿ ಸಮಯದಲ್ಲಿಯೂ ಜಾಗೃತಿ ಇರಬೇಕು ಅಥವಾ ಪ್ರತಿಯೊಂದು ತಾಸು ತಮ್ಮ ಮನಸ್ಸಿನ ಪರಿಣಾಮಗಳ ತಪಾಸಣೆ ಮಾಡುತ್ತಿರಬೇಕು. ಮನಸ್ಸಿನ ಒಲವು ಯಾವ ಕಡೆ ಇದೆ ಅದನ್ನು ನೋಡಬೇಕು ಮತ್ತು ಅದರಲ್ಲಿ ಆವಶ್ಯಕ ಸುಧಾರಣೆ ಮಾಡಬೇಕು. ಲಕ್ಷ್ಯ ಮಾತ್ರ ಒಂದೇ ಆತ್ಮ ಪ್ರಾಪ್ತಿಯದೇ ಇರಬೇಕು ಮತ್ತು ಅದೇ ಭಾವನೆಯನ್ನು ದೃಢಗೊಳಿಸುತ್ತ ಇರಬೇಕು.

★ ಅನಂತಕಾಲದ ತನಕ ಇರಲು ಸ್ಥಾನಗಳು ಎರಡೇ ಇವೆ. ಒಂದು ಸಿದ್ಧ ಅವಸ್ಥೆ ಮತ್ತು ಇನ್ನೊಂದು ನಿಗೋದ. ಮೊದಲನೆಯದರಲ್ಲಿ ಅನಂತ ಸುಖ ಇದೆ ಮತ್ತು ಎರಡನೆಯದರಲ್ಲಿ ಅನಂತ ದುಃಖವಿದೆ. ಆದ್ದರಿಂದ ನಿಮ್ಮ ಭವಿಷ್ಯವನ್ನು ಲಕ್ಷ್ಯದಲ್ಲಿ ಇಟ್ಟುಕೊಂಡು ಎಲ್ಲರಿಗೂ ತಮ್ಮ ಪ್ರಯತ್ನ / ಪುರುಷಾರ್ಥವನ್ನು ಕೇವಲ ಒಂದು ಮೋಕ್ಷದ ಸಲುವಾಗಿಯೇ ಮಾಡಬೇಕು.

★ ಯಾವುದು ಆಗುತ್ತದೆಯೋ ಅದು ಒಳ್ಳೆಯದಕ್ಕಾಗಿಯೇ ಆಗುತ್ತದೆ. ಹೀಗೆ ಮನ್ನಿಸಬೇಕು. ಇದರಿಂದ ಆರ್ತಧ್ಯಾನ ಮತ್ತು ರೌದ್ರಧ್ಯಾನದಿಂದ ಉಳಿದುಕೊಳ್ಳಬಹುದು. ಅಂದರೆ ಹೊಸ ಕರ್ಮಗಳ ಆಸ್ರವದಿಂದ ಉಳಿದುಕೊಳ್ಳಲು ಸಾಧ್ಯವಾಗುತ್ತದೆ.

★ ಪ್ರಶ್ನೆ – ನಾನು ಯಾರ ಪಕ್ಷ ಹಿಡಿಯಲಿ ? ಯಾವ ಸಂಪ್ರದಾಯವನ್ನು ಅಥವಾ ಯಾವ ವ್ಯಕ್ತಿ ವಿಶೇಷವನ್ನು ನನ್ನದೆಂದು ಮನ್ನಿಸಲಿ ?

ಉತ್ತರ – ಕೇವಲ ತನ್ನದೇ ಅಂದರೆ ತನ್ನ ಆತ್ಮನದೇ ಪಕ್ಷ ಹಿಡಿಯಬೇಕು. ಏಕೆಂದರೆ ಅದರಲ್ಲಿಯೇ ನನ್ನ ಕಲ್ಯಾಣ / ಉದ್ಧಾರವಿದೆ.

ಬೇರೆ ಯಾರದೇ ಪಕ್ಷ ಹಿಡಿಯಬಾರದು. ಏಕೆಂದರೆ ಅದರಲ್ಲಿ ನನ್ನ ಉದ್ಧಾರ ಸ್ವಲ್ಪವೂ ಇರುವದಿಲ್ಲ. ಪಕ್ಷ ಹಿಡಿಯುವದು ರಾಗ-ದ್ವೇಷದ ಕಾರಣವಿದೆ. ಯಾವಾಗ ಕೇವಲ ತಮ್ಮ ಆತ್ಮನ ಪಕ್ಷ ಹಿಡಿದುಕೊಂಡರೋ ಆಗ ಅದರಲ್ಲಿ ಎಲ್ಲ ಜ್ಞಾನಿಗಳ ಪಕ್ಷ ಸಮಾವೇಶವಾಗುತ್ತದೆ.

★ ಕಡಿಮೆ ಕಡಿಮೆ ಎಂದರೂ ಜೈನರು ರಾತ್ರಿಯಲ್ಲಿ ಯಾವುದೇ ಕಾರ್ಯಕ್ರಮ ಭೋಜನ-ಸಮಾರಂಭ ಇಟ್ಟುಕೊಳ್ಳಬಾರದು. ಯಾವುದೇ ಪ್ರಸಂಗದಲ್ಲಿ ಹೂ ಮತ್ತು ಮದ್ದು ಸುಡುವದು ಇವನ್ನು ಮಾಡಬಾರದು.

★ ವಿವಾಹವು ಸಾಧಕನ ಸಲುವಾಗಿ ಅನಿವಾರ್ಯ ಎಂದಾಗುವದು, ಮಹೋತ್ಸವ ಅಲ್ಲ, ಯಾವ ಸಾಧಕನು ಪೂರ್ಣ ಬ್ರಹ್ಮಚರ್ಯ ಪಾಲಿಸುವದಾಗದಿದ್ದರೆ ಅವನ ಸಲುವಾಗಿ ವಿವಾಹ ವ್ಯವಸ್ಥೆಯ ಸಹಾಯ ತೆಗೆದುಕೊಳ್ಳುವದು ಯೋಗ್ಯವಿದೆ. ಅದರಿಂದ ಸಾಧಕನು ತನ್ನ ಸಂಸಾರವನ್ನು ನಿರ್ವಿಘ್ನವಾಗಿ ಶ್ರಾವಕ ಧರ್ಮದ ಅನುಸಾರ ಕಳೆಯಬಹುದು ಮತ್ತು ತನ್ನ ಅನಿವಾರ್ಯತೆಯನ್ನೂ ಸಹ ಯೋಗ್ಯ ಮರ್ಯಾದೆ ಸಹಿತ ಪೂರ್ಣ ಮಾಡಬಹುದು. ಹೀಗೆ ವಿವಾಹವು ಮಹೋತ್ಸವ ಆಗುವದಿಲ್ಲ. ಏಕೆಂದರೆ ಯಾವನೋ ತನ್ನ ಅನಿವಾರ್ಯತೆಗೆ ಉತ್ಸವವನ್ನಾಗಿ ಮಾಡಿಕೊಂಡು ಮಹೋತ್ಸವ ಮಾಡುತ್ತಾನೆ. ಆದ್ದರಿಂದ ಸಾಧಕನಿಗೆ ವಿವಾಹವು ಬಹಳ ಅವಶ್ಯಕತೆ ಅನಿಸಿದರೇನೇ ಮಾಡಬೇಕು ಮತ್ತು ಅದು ಸಹ ಬಹಳ ಸರಳವಾಗಿ ಮಾಡಬೇಕು. ಎರಡನೆಯದು ಇಲ್ಲಿ ಹೇಳಿದ ಅನುಸಾರವಾಗಿ ವಿವಾಹವನ್ನು ಅನಿವಾರ್ಯ ಎಂದು ತಿಳಿದು ಯಾರಿಗೋ ವಿವಾಹ ದಿವಸ ಮುಂತಾಗಿ ಮಹೋತ್ಸವ ಮಾಡುವದು ಯೋಗ್ಯವಲ್ಲ. ಆದರೆ ಆ ದಿವಸ ವಿಶೇಷವಾಗಿ ಧರ್ಮ ಮಾಡಲು ಯೋಗ್ಯವಿದೆ ಮತ್ತು ಎಂಥ ಭಾವನೆ ಭಾವಿಸಬೇಕೆಂದರೆ ನನಗೆ ಈ ವಿವಾಹರೂಪಿ ಅನಿವಾರ್ಯವು ಭವಿಷ್ಯದಲ್ಲಿ ಎಂದೂ ಆಗಬಾರದು. ಅದರಿಂದ ನಾನು ಬೇಗನೆ ಅತ್ಮಕಲ್ಯಾಣ ಮಾಡಿಕೊಂಡು ಸಿದ್ಧತ್ವವನ್ನು ಪಡೆಯುವೆನು.

★ ಜನ್ಮವಂತೂ ಆತ್ಮನಿಗೆ ಅನಾದಿಕಾಲದಿಂದ ಅಂಟಿಕೊಂಡ ಭವರೋಗವೇ ಆಗಿದೆ. ಆದರೆ ಮಹೋತ್ಸವವಲ್ಲ. ಯಾರಿಗೆ ಜನ್ಮವಿದೆ ಅವನಿಗೆ ಮರಣವೂ ಅವಶ್ಯವಿದೆ. ಆತ್ಮನ ಜನ್ಮಮರಣರೂಪಿ ಚಕ್ರವು

ತಿರುಗುತ್ತಲೇ ಇರುತ್ತದೆ. ಅಲ್ಲಿಯವರೆಗೆ ಅವನಿಗೆ ಅನಂತ ದುಃಖಗಳಿಂದ ಬಿಡುಗಡೆ ಸಿಗುವದಿಲ್ಲ. ಪ್ರತಿಯೊಂದು ಜೀವನಿಗೆ ಕೇವಲ ಒಂದು ಸಿದ್ಧತ್ವದ ಅಂದರೆ ಜನ್ಮಮರಣದಿಂದ ಶಾಶ್ವತವಾಗಿ ಬಿಡುಗಡೆಯ ಇಚ್ಛೆ ಮಾಡಬೇಕು. ಆದ್ದರಿಂದ ಇಂತಹ ಜನ್ಮದ ಮಹೋತ್ಸವ ಆಗಬಾರದು. ಏಕೆಂದರೆ ಯಾವನೋ ತನ್ನ ರೋಗವನ್ನು ಉತ್ಸವ ಮಾಡಿ ಮಹೋತ್ಸವ ಮಾಡುವದಿಲ್ಲ. ಆದ್ದರಿಂದ ಸಾಧಕನಿಗೆ ಇಲ್ಲಿ ಹೇಳಿದ ಅನುಸಾರ ಜನ್ಮವನ್ನು ಅನಂತ ದುಃಖದ ಕಾರಣ ಅಂದರೆ ಭವರೋಗವೆಂದು ತಿಳಿದುಕೊಂಡು ಜನ್ಮದಿವಸ ಮುಂತಾಗಿ ಮಹೋತ್ಸವ ಆಚರಿಸುವದು ಯೋಗ್ಯವಲ್ಲ. ಆ ದಿವಸ ವಿಶೇಷ ಧರ್ಮ ಮಾಡುವದು ಯೋಗ್ಯವಿದೆ. ಇಂಥ ಭಾವನೆ ಭಾವಿಸಿರಿ. ಏನೆಂದರೆ ಈಗ ನನಗೆ ಈ ಜನ್ಮವು ಹೇಗೆಂದರೆ ಅನಂತ ದುಃಖಗಳ ಕಾರಣ ಭವರೋಗವಿದೆ. ಭವಿಷ್ಯದಲ್ಲಿ ಎಂದೂ ಸಹ ಇದು ಸಿಗಬಾರದು. ಸಾಧಕನಿಗೆ ಕೇವಲ ಒಂದು ಸಿದ್ಧತ್ವದ ಪ್ರಾಪ್ತಿಯ ಸಲುವಾಗಿ ಜನ್ಮರಹಿತನಾಗುವ ಸಲುವಾಗಿಯೇ ಸಂಪೂರ್ಣ ಪುರುಷಾರ್ಥ ಮಾಡಬೇಕು.

★ ಪ್ರಶ್ನೆ : ಛದ್ಮಸ್ಥ ಆತ್ಮನ ಪ್ರತಿಯೊಂದು ಪ್ರದೇಶದಲ್ಲಿ ಅನಂತ ಕರ್ಮ ವರ್ಗಣೆಗಳು ಇರುವದರಿಂದ ಅವನು ಅಶುದ್ಧ ಆತ್ಮನ ರೂಪದಲ್ಲಿಯೇ ಪರಿಣಮಿತ ಆಗುತ್ತಾನೆ. ಆದರೆ ಅದರಲ್ಲಿ ಶುದ್ಧಾತ್ಮನು ಎಲ್ಲಿ ಇರುತ್ತಾನೆ?

ಉತ್ತರ : ಭೇದಜ್ಞಾನದಿಂದ (ಪ್ರಜ್ಞಾಛನ್ನಿಯಿಂದ) ಅಂದರೆ ಜೀವದ ಲಕ್ಷಣದಿಂದ ಜೀವನನ್ನು ಸ್ವೀಕರಿಸಬೇಕು ಮತ್ತು ಪುದ್ಗಲದ ಲಕ್ಷಣದಿಂದ ಪುದ್ಗಲವನ್ನು ದೂರ ಮಾಡಬೇಕು. ಮತ್ತೆ ಅದರಲ್ಲಿ ಪ್ರಜ್ಞಾರೂಪಿ ಉಳಿಯಿಂದ (ತೀವ್ರ ಬುದ್ಧಿಯಿಂದ) ವಿಭಾವವನ್ನು ಗೌಣ ಮಾಡಿ ಭೇದಜ್ಞಾನ ಮಾಡುತ್ತಲೇ ಶುದ್ಧಾತ್ಮನ ಪ್ರಾಪ್ತಿಯಾಗುತ್ತದೆ.

★ ಒಂದು ವೇಳೆ ಯಾರೋ ಏನು ಹೇಳಿದರೆಂದರೆ ಆತ್ಮನು ಹೊರಗಿನಿಂದ ಅಶುದ್ಧ ಮತ್ತು ಒಳಗಿನಿಂದ ಶುದ್ಧ ಇದ್ದಾನೆ. ಆದರೆ ಹೀಗೆ ಹೇಳುವದು ಅಪೇಕ್ಷೆಯಿಂದ ತಿಳಿಯಬೇಕು. ಏಕಾಂತದಿಂದ ಅಂದರೆ ವಾಸ್ತವಿಕ ಅಲ್ಲ. ಆತ್ಮನು ಹೇಗೆ ಹೊರಗೆ ಇರುವನು ಹಾಗೆಯೇ ಒಳಗೂ

ಇರುವನು. ಆತ್ಮನು ಒಳಗೆ ಮತ್ತು ಹೊರಗೆ ಪ್ರತಿಯೊಂದು ಪ್ರದೇಶ / ಕ್ಷೇತ್ರದಲ್ಲಿ ಅನಂತಾನಂತ ಕಾರ್ಮಾಣ ವರ್ಗಣೆಗಳು ಹಾಲು-ನೀರಿನಂತೆ ಸೇರಿಕೊಂಡಿರುವದರಿಂದ ಹೇಗೆ ಅಶುದ್ಧಿಯು ಹೊರಗಿನ ಕ್ಷೇತ್ರದಲ್ಲಿ ಇದೆ, ಅದೇ ರೀತಿ ಅಶುದ್ಧಿಯು ಒಳಗಿನ ಕ್ಷೇತ್ರದಲ್ಲಿಯೂ ಸಹ ಇರುತ್ತದೆ. ಈ ಅಪೇಕ್ಷೆಯಿಂದ ಹೊರಗೆ ಅಂದರೆ ವಿಶೇಷಭಾವ (ವಿಭಾವಭಾವ) ಮತ್ತು ಒಳಗೆ ಅಂದರೆ ಸಾಮಾನ್ಯಭಾವ (ಪರಮಪಾರಿಣಾಮಿಕ ಭಾವ) ಯಾವದು ಮೂರೂ ಕಾಲಗಳಲ್ಲಿ ಶುದ್ಧವೇ ಇರುತ್ತದೆ ಮತ್ತು ಆದ್ದರಿಂದಲೇ ವ್ಯಕ್ತ ಆತ್ಮನು ಅಶುದ್ಧ ಮತ್ತು ಅವ್ಯಕ್ತ ಆತ್ಮನು ಶುದ್ಧ ಇರುವನು ಇದೇ ಅಪೇಕ್ಷೆಯಿಂದ ಆತ್ಮನಿಗೆ ಒಳಗಿನಿಂದ ಶುದ್ಧ ಮತ್ತು ಹೊರಗಿನಿಂದ ಅಶುದ್ಧ ಎಂದು ಹೇಳಲಾಗುತ್ತದೆ. ಬೇರೆ ಇಲ್ಲ. ಯಾವದೋ ಆತ್ಮನಲ್ಲಿ ಒಳಗೆ ಏಕಾಂತ ಶುದ್ಧ ಧ್ರುವಭಾವ ಶೋಧಿಸಿದರೆ ಹಾಗೆಯೇ ಏಕಾಂತ ಶುದ್ಧ ಧ್ರುವಭಾವ ಆತ್ಮನಲ್ಲಿ ಇರುವದಿಲ್ಲ. ಯಾವುದೇ ಕಥನವು ಅದರ ಅಪೇಕ್ಷೆಯಿಂದಲೇ ತಿಳಿಯುವದು ಅನಿವಾರ್ಯವಿದೆ. ಇಲ್ಲವಾದರೆ ಹೀಗೆ ಮನ್ನಿಸುವವನು ನಿಯಮದಿಂದ ಭ್ರಮೆಯಲ್ಲಿಯೇ ಇರುವನು.

★ ಒಂಬತ್ತು ತತ್ವಗಳಿಂದ ಭಿನ್ನವಾದ ಸಂಪೂರ್ಣ ಶುದ್ಧ ದ್ರವ್ಯದ ಸಿದ್ಧಿಯಾಗುವದಿಲ್ಲ. ಆದ್ದರಿಂದ ಯಾರಿಗಾದರೂ ಹೀಗೆ ಭ್ರಮೆಯಲ್ಲಿ ಇರುವಂಥ ಆವಶ್ಯಕತೆ ಇರುವದಿಲ್ಲ. ಏನಂದರೆ ಪರ್ಯಾಯದಿಂದ ಭಿನ್ನ ಸರ್ವಥಾ ಶುದ್ಧ ದ್ರವ್ಯದ ಪ್ರಾಪ್ತವಾಗುವದು. ಏಕೆಂದರೆ ಸಾಧನದ ಅಭಾವ ಆಗಿರುವದರಿಂದ ಶುದ್ಧ ದ್ರವ್ಯದ ಪ್ರಾಪ್ತಿಯಾಗುವದಿಲ್ಲ. ಕೇವಲ ಒಂಬತ್ತು ತತ್ವ ಸಂಬಂಧಿ ವಿಕಾರಗಳನ್ನು ಕಡಿಮೆ / ಗೌಣ ಮಾಡುತ್ತಲೇ ಅದು ಶುದ್ಧಾತ್ಮ ಆಗುತ್ತದೆ.

★ ಪ್ರಶ್ನೆ : ಬಹಳ ಸಾಧಕರ ಪ್ರಶ್ನೆ ಇರುತ್ತದೆ ಏನೆಂದರೆ ಯಾವಾಗ ತಮಗೆ ಆತ್ಮನ ಅನುಭವ ಆಯಿತು ? ಆಗ ಏನು ಅನಿಸುತ್ತದೆ ?

ಉತ್ತರ : ಸ್ವಾತ್ಮಾನುಭೂತಿಯ ಕಾಲದಲ್ಲಿ ಶರೀರದಿಂದ ಬೇರೆಯಾದ ಇಂಥ ಸಿದ್ಧಸಮಾನ ಆತ್ಮನ ಆಂಶಿಕ ಅನುಭವ ಆಗುತ್ತದೆ. ಅದರಲ್ಲಿ ಶರೀರದ ಯಾವುದೇ ಪ್ರಕಾರದ ಅನುಭವ ಆಗುವದಿಲ್ಲ. ಬಹಳ ಸಾಧಕರು ನಮಗೆ ಪ್ರಶ್ನೆ ಮಾಡುತ್ತಾರೆ. ಏನೆಂದರೆ ನಮಗೆ ಪ್ರಕಾಶಮಯ ಆತ್ಮನ

ಅನುಭವ ಆಯಿತು. ಅಥವಾ ಕೆಲವರು ಹೇಳುತ್ತಾರೆ. ಏನೆಂದರೆ ನಮಗೆ ರೋಮಾಂಚನ ಉಂಟಾಯಿತು ಮುಂತಾಗಿ ಹೇಳುತ್ತಾರೆ. ಇಂತಹ ಸಾಧಕರಿಗೆ ನಾವು ಹೇಳುತ್ತೇವೆ. ಇಂಥ ಭ್ರಮೆಗಳಿಂದ ಮೋಸ ಹೋಗುವದು ಯೋಗ್ಯವಲ್ಲ. ಏಕೆಂದರೆ ಸ್ವಾತ್ಮಾನುಭೂತಿಯ ಕಾಲದಲ್ಲಿ ಶರೀರದ ಯಾವುದೇ ಪ್ರಕಾರದ ಅನುಭವ ಆಗುವದೇ ಇಲ್ಲ. ಕೇವಲ ಸಿದ್ಧಸದೃಶ ಆತ್ಮನ ಅನುಭವ ಅಥವಾ ಆಂಶಿಕ ಸಿದ್ಧಸದೃಶ ಆನಂದದ ಅನುಭವವೇ ಆಗುತ್ತದೆ. ಅಂದರೆ ಆಂಶಿಕ ಸಿದ್ಧತ್ವದ್ದೇ ಬಹಳ ಸ್ಪಷ್ಟವಾದ ಅನುಭವ ಆಗುತ್ತದೆ. ಅದು ಹೇಗೆಂದರೆ ಮತ್ತೆ ಆತ್ಮನ ಸಲುವಾಗಿ ಯಾವುದೇ ಪ್ರಶ್ನೆ ಉಳಿಯುವುದೇ ಇಲ್ಲ. ಎಲ್ಲವೂ ತನ್ನಿಂದ ತಾನೇ ಸ್ಪಷ್ಟವಾಗುತ್ತದೆ. ಸ್ವಾತ್ಮಾನುಭೂತಿಯ ನಂತರ ಶರೀರದ ಕುರಿತು ಭೇದಜ್ಞಾನವು ವರ್ತಿಸುತ್ತದೆ. ಸ್ವಾನುಭೂತಿಯ ನಂತರ ತಾವು ಯಾವಾಗಲಾದರೂ ಸಹ ಕನ್ನಡಿಯ ಎದುರಿಗೆ ಹೋಗುತ್ತೀರಿ. ಆಗ ನಿಮಗೇ ಅನಿಸುತ್ತದೆ, ತಾವು ಯಾವುದೇ ಎರಡನೆಯ ವ್ಯಕ್ತಿ ನೋಡುತ್ತಿರುವಿರಿ ಎಂದು.

★ ಯಾರೋ ಹೀಗೆ ಮನ್ನಿಸುವ ಪ್ರಕಾರ ಮುಮುಕ್ಷು ಜೀವದ ಯೋಗ್ಯತೆಯು ಅದರ ಸಮಯವು ಪಕ್ವವಾದ ಬಳಿಕ ತನ್ನಿಂದ ತಾನೇ ಆಗುವದು, ಅದರ ಸಲುವಾಗಿ ಪ್ರಯತ್ನದ ಅವಶ್ಯಕತೆ ಇರುವದಿಲ್ಲ. ಆದರೆ ಅವರಿಗೆ ನಾವು ಪ್ರಶ್ನೆ ಮಾಡುತ್ತೇವೆ. ಏನೆಂದರೆ ಏನು ತಾವು ಹಣ, ಪ್ರತಿಷ್ಠೆ, ಪರಿವಾರ ಮುಂತಾದವುಗಳನ್ನು ಪಡೆಯುವ ಸಲುವಾಗಿ ಪ್ರಯತ್ನ ಮಾಡುತ್ತೀರಿ ಅಥವಾ ಮತ್ತೆ ತಾವು ಹೇಳುವುದೆಂದರೆ ಅವರು ಸಮಯ ಪಕ್ವವಾದೊಡನೆ ತಮ್ಮಿಂದ ತಾವೇ ಬರುತ್ತಾರೆ. ಆಗ ಉತ್ತರವು ಅಪೇಕ್ಷಿತವೇ ದೊರೆಯುತ್ತದೆ. ಏನೆಂದರೆ ನಾವು ಅದರ ಸಲುವಾಗಿ ಪ್ರಯತ್ನ ಮಾಡುತ್ತೇವೆ. ಆದರೆ ಮತ್ತೆ ನಾವು ಅವರಿಗೆ ಪ್ರಶ್ನೆ ಮಾಡುತ್ತೇವೆ, ಏನೆಂದರೆ ಯಾವುದೇ ವಸ್ತು ಅಥವಾ ಸಂಯೋಗಗಳು ಕರ್ಮಾನುಸಾರ ತಮ್ಮಿಂದ ತಾವೇ ಬಂದು ಸಿಗುವಂಥವಾಗಿವೆ. ಅದರ ಸಲುವಾಗಿ ತಾವು ಬಹಳ ಒತ್ತಾಯಪೂರ್ವಕವಾಗಿ ಪ್ರಯತ್ನ ಮಾಡುತ್ತೀರಿ. ಆದರೆ ಆತ್ಮನ ಹಿತದ ಸಲುವಾಗಿ ಮೊದಲು ಹೇಳಿದ ಅನುಸಾರ ಸತ್ಯ ಆಚರಣೆಯು ಜೀವನದಲ್ಲಿ ಮಾಡಲು ಅಪೇಕ್ಷಿಸಬೇಕು. ಆದರೆ ತಾವು ಜೈನ ಸಿದ್ಧಾಂತದ ಅಪೇಕ್ಷೆಯನ್ನು ತಿಳಿದುಕೊಳ್ಳದೇ ಅದನ್ನು ತಪ್ಪು ತಿಳಿದುಕೊಳ್ಳುತ್ತಿದ್ದೀರಿ. ಜೈನ ಸಿದ್ಧಾಂತದ

ಅನುಸಾರ ಯಾವುದೇ ಕಾರ್ಯ ಆಗುವ ಸಲುವಾಗಿ ಐದು ಸಮವಾಯಗಳಾಗುವದು ಆವಶ್ಯಕವಿದೆ ಮತ್ತು ಅವುಗಳಲ್ಲಿ ಆತ್ಮಸ್ವಭಾವದಲ್ಲಿ ಮಾಡುವ ಪುರುಷಾರ್ಥವು ಈ ಉಪಾದಾನ ಕಾರಣ ಆಗುವದರಿಂದ ಒಂದು ವೇಳೆ ತಾವು ಅದನ್ನು ಗೌಣ ಮಾಡಿ ಕೇವಲ ನಿಮಿತ್ತದ ದಾರಿ ನೋಡುತ್ತ ಅಥವಾ ನಿಯತಿಯಿಂದ ಆಶೆ ಹಚ್ಚಿಕೊಂಡು ಕುಳಿತಿರುತ್ತೀರಿ. ಆದರೆ ಆತ್ಮ ಪ್ರಾಪ್ತಿಯು ಅತ್ಯಂತ ಕಠಿಣವಿದೆ. ಪ್ರತಿಯೊಬ್ಬ ಮುಮುಕ್ಷುವಿಗೆ ತನ್ನ ಪುರುಷಾರ್ಥ ಹೆಚ್ಚೆಂದರೆ ಹೆಚ್ಚು ಆತ್ಮಧರ್ಮ ಕ್ಷೇತ್ರದಲ್ಲಿ ಮಾಡುವದು ಆವಶ್ಯಕ ಇರುತ್ತದೆ. ಸ್ವಲ್ಪ ಸಮಯವನ್ನು ಜೀವನದ ಆವಶ್ಯಕತೆಗಳನ್ನು ಸಂಗ್ರಹ ಮಾಡುವಲ್ಲಿ ತೊಡಗಿಸಬೇಕು.

★ ಈ ಪುಸ್ತಕದಲ್ಲಿ ನಮ್ಮಿಂದ ಯಾವುದೇ ಮರೆವು ಆಗಿದ್ದರೆ ತಾವು ಸುಧಾರಿಸಿಕೊಂಡು ಓದಿರಿ. ನಮ್ಮಿಂದ ಜಿನಾಜ್ಞೆಯ ವಿರುದ್ಧ ಏನಾದರೂ ಅಲ್ಪ ಸ್ವಲ್ಪ ಬರೆಯಲಾಗಿದ್ದರೆ ನಮ್ಮ ತ್ರಿವಿಧ ತ್ರಿವಿಧ ಮಿಚ್ಛಾಮಿ ದುಕ್ಕಡಂ ಅಂದರೆ ಮನ-ವಚನ-ಕಾಯಗಳಿಂದ ಕ್ಷಮೆಯನ್ನು ಯಾಚಿಸುತ್ತೇವೆ.

ಓಂ ಶಾಂತಿ ಶಾಂತಿ ಶಾಂತಿಃ

## ನಿಸರ್ಗದ ನಿಯಮ – ಯುನಿವರ್ಸಲ್ ಲಾ

## ಎಲ್ಲರಿಗೂ ಸಾಮಾನ್ಯ ರೂಪದಿಂದ ಅನ್ವಯಿಸುವ ವಿಶ್ವವನ್ನು ನಡೆಸುವಂಥ ವ್ಯವಸ್ಥೆ

1. ನಾನು ಯಾವುದನ್ನು ಕೊಟ್ಟಿದ್ದೆನು, ಅದುವೇ ನನಗೆ ದೊರೆಯುತ್ತದೆ. ನಾನು ಬೇರೆಯವರ ಸಲುವಾಗಿ ಏನನ್ನು ಬಯಸುತ್ತೇನೆ, ಅದುವೇ ನನ್ನ ಜೊತೆಗೆ ಬರುವದು.
2. ನಾನು ಆತ್ಮನಿದ್ದೇನೆ. ಈ ಶರೀರವು ನನಗೆ ದೊರೆತಂತಹ ಪಾತ್ರವಿದೆ. ಸಾಮಾನ್ಯವಾಗಿ ನನ್ನಿಂದ ಯಾವುದನ್ನು ಬಯಸಲಾಗಿತ್ತು ಅದೇ ಪಾತ್ರವು ದೊರಕುತ್ತದೆ.
3. ನನ್ನ ಜೊತೆಗೆ ಯಾವುದು ಸಂಭವಿಸುತ್ತದೆಯೋ ಅದು ನನ್ನ ಭೂತಕಾಲದ್ದೇ ಪ್ರತಿಬಿಂಬ ಇರುತ್ತದೆ. ಅದು ನನ್ನ ಭೂತಕಾಲದ ಕರ್ಮಗಳ ಫಲವಿದೆ. ನಾನು ಯಾವ ಕಾರ್ಯವನ್ನು ಮನ–ವಚನ–ಕಾಯಗಳಿಂದ ಮಾಡಿಲ್ಲವೋ ಅಥವಾ ಮಾಡಿಸಿಲ್ಲವೋ ಅದು ನನ್ನ ಜೊತೆಗೆ ಎಂದೂ ಸಂಭವಿಸುವುದೇ ಇಲ್ಲ.
4. ಇದರಿಂದ ನಿಶ್ಚಿತವಿದೆ ಏನೆಂದರೆ ನನ್ನ ಜೊತೆಗೆ ಭೂತ, ವರ್ತಮಾನ ಅಥವಾ ಭವಿಷ್ಯದಲ್ಲಿ ಎಂದೂ ಅನ್ಯಾಯ ಆಗಿರುವದಿಲ್ಲ. ಆಗುವದೂ ಇಲ್ಲ. ಆದ್ದರಿಂದ ನಾನು 'ತಕರಾರು ರಹಿತ ಭಾವ'ದಲ್ಲಿ ಇರಬಹುದಾಗಿದೆ. ನನ್ನ ಜೊತೆಗೆ ಯಾವದು ಸಹ ಆಗುತ್ತದೆಯೋ ಅದು ನನ್ನ ಭೂತಕಾಲದ ಕಾರಣವೇ ಆಗುತ್ತದೆ. ಆದ್ದರಿಂದ 'ನನ್ನ ಜೊತೆಗೇನೇ ಏಕೆ?' ಎಂಬ ಈ ಪ್ರಶ್ನೆ ಉಪಯುಕ್ತ ಇರುವದಿಲ್ಲ.
5. ನಾನು ಪುಣ್ಯ ಮಾಡಿ ಸಪ್ತವ್ಯಸನಗಳಿಂದ (ಜೂಜು, ಸೆರೆ ಸೇವನೆ, ಮಾಂಸ ಸೇವನೆ, ವೇಶ್ಯಾಗಮನ, ಕಳ್ಳತನ, ಬೇಟೆಯಾಡುವದು, ಪರಸ್ತ್ರೀಗಮನ ಅಥವಾ ಪರಪುರುಷಗಮನ) ರಹಿತರಾಗಿ ಹಾಗೂ ಕಂದಮೂಲ ಸೇವನೆ, ರಾತ್ರಿಭೋಜನ ಮತ್ತು ಅಭಕ್ಷ್ಯ ಭಕ್ಷಣ

(ಉಪ್ಪಿನಕಾಯಿ, ಜೇನುತುಪ್ಪ, ಪಂಚ ಔದುಂಬರ ಫಲ, ಬೆಣ್ಣೆ ಮುಂತಾದ) ಇವುಗಳ ತ್ಯಾಗ ಮಾಡಿ ನನ್ನ ಸಲುವಾಗಿ ಸೌಭಾಗ್ಯ ನಿರ್ಮಿಸಿಕೊಳ್ಳಬಹುದಾಗಿದೆ.

6. ಪಾಪ = ದುಃಖ ; ಪುಣ್ಯ = ಸುಖ ಈ ಸಮೀಕರಣ ನೆನಪಿನಲ್ಲಿ ಇಡಬೇಕು.

7. ನನಗೆ ದುಃಖದಿಂದಲೂ ಸಹ ಲಾಭ ಮಾಡಿಕೊಳ್ಳುವ ಪದ್ಧತಿ ಕಲಿಯುವದಿದೆ.

8. ನಾನು ಇಲ್ಲಿ ಕೇವಲ ಕೊಡುವ ಸಲುವಾಗಿ ಬಂದಿದ್ದೇನೆ. ಅದೂ ಸಹ ಯಾವುದೇ ಕರಾರು ರಹಿತ ಅಥವಾ ಅಪೇಕ್ಷಾ ರಹಿತರಾಗಿ ಕೊಟ್ಟು ನಾನು ನನ್ನ ಹಿಂದಿನ ಸಾಲವನ್ನು ತೀರಿಸುತ್ತಿದ್ದೇನೆ ಅಥವಾ ಮತ್ತೆ ಹೊಸ ಸಂಪತ್ತನ್ನು ಕೂಡಿಸುತ್ತಿದ್ದೇನೆ. ಎರಡೂ ಪರಿಸ್ಥಿತಿಗಳಲ್ಲಿ ಲಾಭವು ನನಗೇ ಇದೆ.

9. ನನಗೆ ನನ್ನ ಕರ್ತವ್ಯವನ್ನು ಉತ್ಸಾಹದಿಂದ, ಯಾವುದೇ ಅಪೇಕ್ಷೆಯಿಲ್ಲದೇ ಪೂರ್ಣ ಮಾಡುವದಿದೆ. ಉಳಿದ ಎಲ್ಲವೂ ಹೀಗೆಯೇ ಮಾಡುವೆನು. ಯಾವುದೇ ಆಗ್ರಹ ಸಹ ಇಡುವದಿಲ್ಲ. ನಾನು ನಮ್ಮ ಪರಿವಾರ, ಮಿತ್ರ ಸಹಯೋಗಿಗಳು, ಸಮಾಜ ಮತ್ತು ರಾಷ್ಟ್ರದ ಕುರಿತು ಎಲ್ಲರಿಗೂ ಸಲ್ಲಿಸಬೇಕಾದ ನಮ್ಮ ಕರ್ತವ್ಯವನ್ನು ಪೂರ್ಣ ನಿಷ್ಠೆಯಿಂದ ನಿರ್ವಹಿಸುವದಿದೆ.

10. ನನಗೆ ನನ್ನೊಂದಿಗೆ ಕಠೋರವಾಗಿಯೂ ಮತ್ತು ಬೇರೆಯವರೊಂದಿಗೆ ಮೃದುವಾಗಿಯೂ ದಯಾಳುವಾಗಿ ನಡೆಯುವದಿದೆ.

11. ಯಾವುದು / ಏನು ಆಗುತ್ತಿರುವದು ಅದು ಒಳ್ಳೆಯದಕ್ಕೇನೇ ಆಗಹತ್ತಿದೆ. ಒಂದು ವೇಳೆ ನಾನು ಇದನ್ನು ಮನ್ನಿಸಿದೆನೆಂದರೆ ಯಾವಾಗಲೂ ಸಕಾರಾತ್ಮಕವಾಗಿಯೇ ಇರುತ್ತೇನೆ.

12. ಜನರೊಂದಿಗೆ ನಾಲ್ಕು ಪ್ರಕಾರವಾಗಿ ವ್ಯವಹರಿಸುವದಿದೆ.

i) ಮೈತ್ರಿ : ನನಗೆ ಯಾರಿಂದಲೂ ವೈರತ್ವ ಇಲ್ಲದಿರುವ ಕಾರಣ ನಾನು ಪ್ರಸನ್ನತೆಯಿಂದ ಇರಲು ಸಾಧ್ಯವಾಗಿದೆ. ನಾನು

ಗೆಳೆಯರಿಗೆ / ಇತರರಿಗೆ ಒಳ್ಳೆಯದನ್ನು ಬಯಸುವದರಿಂದ ನನ್ನ ಕಲ್ಯಾಣವಾಗುವದು ಸುನಿಶ್ಚಿತವಾಗಿದೆ.

ii) ಪ್ರಮೋದ : ಬೇರೆಯವರ ಉತ್ತಮ ಗುಣಗಳನ್ನು ನೋಡುವದರಿಂದ ಆ ಗುಣಗಳು ನನ್ನಲ್ಲಿಯೂ ಪ್ರಕಟವಾಗುವವು.

iii) ಕರುಣೆ : ಪಾಪಿಗಳ ಕುರಿತು ನಾನು ಕರುಣೆಯಿಂದ ವರ್ತಿಸಿದರೆ ನನ್ನಲ್ಲಿ ಪ್ರಸನ್ನತೆ ಉಂಟಾಗುತ್ತದೆ.

iv) ಮಾಧ್ಯಸ್ಥ : ಯಾವಾಗ ನನಗೆ ಯಾರೋ ತೊಂದರೆ ಮಾಡಿದರೆ ಆಗ ನಾನು ಯಾವುದೇ ಪ್ರತಿಕ್ರಿಯೆ ಮಾಡದೇ ಶಾಂತವಾಗಿ ಇರಬೇಕಾಗುವದು. ನಾನೇ ಮನಸ್ಸಿನಲ್ಲಿ ಅವರಿಗೆ ಧನ್ಯವಾದ ಹೇಳಬೇಕು. ಈ ಧನ್ಯವಾದ ಹೇಳುವದೂ ಸಹ ಮೂರು ಚರಣಗಳಿವೆ.

ಪ್ರಥಮ ಚರಣ : ನನ್ನ ಭೂತಕಾಲದ ಮರೆವಿನ ಸಲುವಾಗಿ ಕ್ಷಮೆ ಬೇಡುವದು.

ದ್ವಿತೀಯ ಚರಣ : ಮತ್ತೊಮ್ಮೆ ಹೀಗೆ ಎಂದೂ ಮರೆಯುವದಿಲ್ಲ. ಹೀಗೆ ಇದನ್ನು ನಿಶ್ಚಿತ ಮಾಡುವದು.

ತೃತೀಯ ಚರಣ : ಎದುರಿಗಿರುವವರು, ನನಗೆ ಸ್ವಚ್ಛ ಮಾಡುವಂತಹ ಮತ್ತು ಉಪಕಾರಿ ಎಂದು ಮನ್ನಿಸಿ ಮನಸ್ಸಿನಲ್ಲಿ ಧನ್ಯವಾದ ಹೇಳಬೇಕು. ಇದರಿಂದ ನನಗೆ ಅವರ ಕುರಿತು ತಿರಸ್ಕಾರ ಅಥವಾ ತುಚ್ಛಭಾವ ಬರುವದಿಲ್ಲ. ಅದರಿಂದ ನಾನು ಈ ತಿರಸ್ಕಾರ ಅಥವಾ ತುಚ್ಛಭಾವದ ವಿಷಚಕ್ರದಿಂದ ಉಳಿದುಕೊಳ್ಳುತ್ತೇನೆ. ಈ ಮೂರೂ ಚರಣಗಳು ನಮಗೆ ಪ್ರಸನ್ನತೆಯ ಸಲುವಾಗಿ ರಕ್ಷಾಕವಚದಂತಿವೆ. ಆದ್ದರಿಂದ ಈ ಸಿದ್ಧಾಂತವು ಸ್ವಾಗತಿಸಲು ಯೋಗ್ಯ ಇದೆ. ಈ ರೀತಿ ನಾನು ನನ್ನಿಂದ ನಾನೇ ನಕಾರಾತ್ಮಕ ಭಾವನೆಗಳಿಂದ ಉಳಿದುಕೊಂಡು ಸಕಾರಾತ್ಮಕ ವಿಚಾರಗಳನ್ನು ಮಾಡುತ್ತೇನೆ.

13. ನಮ್ಮ ವಿಚಾರಗಳು ಸಕಾರಾತ್ಮಕವಾಗಿಯೂ ವಿಚಾರಪೂರ್ವಕವಾಗಿಯೂ ಬದಲಿಸಬೇಕು. ಬಲಪೂರ್ವಕವಾಗಬಾರದು. ಇದರಿಂದ ನಮ್ಮ ಪ್ರಸನ್ನತೆಗೆ ಭಂಗ ಬರುವುದಿಲ್ಲ. ಆದ್ದರಿಂದ ನಮ್ಮ ಮಾರ್ಗವು 'ಸಹಜಯೋಗ'ದ್ದಾಗಿರುತ್ತದೆ. ಹಠಯೋಗದ್ದಾಗಿರಬಾರದು.

14. ಈ ಜೀವನದಲ್ಲಿ ನನಗೆ ನನ್ನ ಶರೀರ ಮತ್ತು ಮನಸ್ಸಿನ ಉಪಯೋಗ ಮಾಡಿಕೊಂಡು ಸಂಸಾರದಿಂದ ಬಿಡುಗಡೆಯಾಗಿ ಮುಕ್ತಿ ಪಡೆಯಬೇಕೆಂಬ ಉದ್ದೇಶ ಇರುವದರಿಂದ ಸಮ್ಯಗ್ದರ್ಶನ ಪ್ರಾಪ್ತ ಮಾಡುವದಿದೆ.

15. ಸತ್ಯವು ನಮ್ಮೊಳಗೇ ಇರುತ್ತದೆ. ಅದನ್ನು ಎಲ್ಲಿಯೂ ಹೊರಗೆ ಹುಡುಕುವ ಅವಶ್ಯಕತೆ ಇಲ್ಲ. ನಮಗೆ ನಮ್ಮಿಂದ ನಾವೇ ಒಳಗಿನಿಂದ ಬದಲಾಗುವ ಅವಶ್ಯಕತೆಯಿದೆ.

16. ಯಾರು ಸತ್ಯವನ್ನು ಪ್ರಾಪ್ತ ಮಾಡಿಕೊಂಡಿರುವರು. ಅದೇ ಮಾರ್ಗವನ್ನು ಹೇಳುತ್ತಾರೆ. ಅಂಥ ಜನರು ಯಶಸ್ಸು, ಕೀರ್ತಿ, ಸಂಪತ್ತು, ವೈಭವ, ಸನ್ಮಾನ ಮುಂತಾದವುಗಳ ಹಿಂದೆ ಓಡುವದಿಲ್ಲ.

17. ಸಮ್ಯಗ್ದರ್ಶನದ ಪ್ರಾಪ್ತಿಯ ಸಲುವಾಗಿ ನಾವು ಯಾವಾಗಲೂ ಸತ್ಯ ಸ್ವೀಕರಿಸಲು ತಯಾರ ಇರಬೇಕು. ಸತ್ಯವನ್ನು ತಿಳಿದುಕೊಂಡು ನಮ್ಮಿಂದ ನಾವೇ ಬದಲಾಗಲು ತಯಾರ ಇರಬೇಕು. ಸಮ್ಯಗ್ದರ್ಶನದ ಸಲುವಾಗಿ ಸಂಸಾರದ ಇಚ್ಛೆ, ಆಕಾಂಕ್ಷೆ, ಅಪೇಕ್ಷೆ ಮುಂತಾದವುಗಳನ್ನು ಬಿಡುವದು ಅತ್ಯಂತ ಅವಶ್ಯಕವಿದೆ. ಮನೆ, ಪರಿವಾರ, ಸಂಪತ್ತು ಮುಂತಾದವನ್ನು ಬಿಡುವ ಅವಶ್ಯಕತೆಯಿಲ್ಲ. ಸಂಸಾರದ ಇಚ್ಛೆ, ಆಕಾಂಕ್ಷೆ, ಅಪೇಕ್ಷೆಗಳನ್ನು ಬಿಡುವ ಸಲುವಾಗಿ ನಮಗೆ ನಾವೇ ಪ್ರತಿ ಎರಡು ತಾಸುಗಳಿಗೊಮ್ಮೆ ಪರೀಕ್ಷಿಸಿಕೊಳ್ಳಬೇಕು. ಮೇಲಿಂದ ಮೇಲೆ ಹನ್ನೆರಡು ಭಾವನೆಗಳ ಚಿಂತನೆ ಮಾಡಿ ಸಂಸಾರದ ಭಾವನೆಗಳನ್ನು ಬೇರು ಸಹಿತ ಕಿತ್ತುಹಾಕಬೇಕು.

18. ನಾನು ನನ್ನಿಂದಲೇ ಬದಲಾಗಬೇಕಿದೆ. ಬೇರೆಯವರನ್ನು ಬದಲಿಸುವೆನೆಂಬ ಆಗ್ರಹ ಇಡಬಾರದು. ಇದು ಬಹಳ ಕಠಿಣವಿದೆ. ನಿರಾಶಾದಾಯಕ, ಶೋಕ, ಸಂತಾಪ, ಕಷ್ಟ ಮುಂತಾದವುಗಳ

ಜನಕವಿದೆ. ಬೇರೆಯವರಿಗೆ ನಾವು ಕೇವಲ ಪ್ರೇರಣೆ ಮಾತ್ರ ಕೊಡಬಹುದು.

19. ಎಲ್ಲ ಸಂಸಾರಿ ಜೀವಿಗಳ ಹತ್ತಿರ ಅನಂತಕಾಲದ ತನಕ ಇರಲು ಎರಡೇ ಸ್ಥಾನಗಳಿವೆ. 1. ಮೋಕ್ಷ (ಅನಂತ ಸುಖ) ಮತ್ತು 2. ನಿಗೋದ (ಅನಂತ ದುಃಖ) ಒಂದು ವೇಳೆ ಮೋಕ್ಷ ದೊರೆಯದಿದ್ದರೆ ನಿಗೋದದ ಹೊರತು ಯಾವುದೇ ಬೇರೆ ಗತಿಯು ಪ್ರಯತ್ನದಿಂದ ದೊರೆಯಬಹುದು. ಆದ್ದರಿಂದ ನಮಗೆ ಮೋಕ್ಷದ ಸಲುವಾಗಿಯೇ ಸಂಪೂರ್ಣ ಪ್ರಯತ್ನ ಮಾಡುವದಿದೆ.

20. ನಮ್ಮನ್ನು ಬೇರೆಯವರೊಡನೆ ಹೋಲಿಸದೇ ನಮ್ಮ ಭೂತಕಾಲದ ಹೋಲಿಕೆಯನ್ನು ವರ್ತಮಾನ ಕಾಲದಿಂದ ಮಾಡಬೇಕು ಮತ್ತು ಅದನ್ನು ಉತ್ತಮವಾಗಿ ಮಾಡುವದಿದೆ. ಈ ತರಹ ನಾವು ದೈನಿಕ ಪ್ರಗತಿ ಮಾಡಿಕೊಳ್ಳಬೇಕು.

21. ಈ ನಿಯಮಗಳನ್ನು ದಿನಪೂರ್ತಿ ಪಾಲಿಸಬೇಕು ಮತ್ತು ರಾತ್ರಿ ಮಲಗುವ ಮೊದಲು ನಾವು ಮರೆತಿರುವವುಗಳನ್ನು ತಿದ್ದಿಕೊಳ್ಳಬೇಕು. ನಮ್ಮಿಂದಾದ ತಪ್ಪುಗಳಿಗೆ ಜಿನೇಂದ್ರ ಭಗವಂತರಲ್ಲಿ ಕ್ಷಮೆ ಯಾಚಿಸಬೇಕು.

# ಜೈನ ನಿತ್ಯ ಜಪ ಸಂಗ್ರಹ

## ಓಂ ಹ್ರೀಂ ಶ್ರೀಂ ವೃಷಭಾದಿ ವೀರಾಂತ ಚತುರ್ವಿಂಶತಿ ತೀರ್ಥಂಕರೇಭ್ಯೋ ನಮಃ

**ಭಕ್ತಾಮರ ಮಂತ್ರ ಪುಷ್ಪ ಮಂತ್ರ :**

ಓಂ ಹ್ರೀಂ ಮಮ ಸರ್ವ ವಿಘ್ನ ದೋಷ ಹರಾಯ ಶ್ರೀ ವೃಷಭಜಿನ ದೇವಾಯ ನಮಃ ಸ್ವಾಹಾ

ಓಂ ಹ್ರೀಂ ಶ್ರೀಂ ಕ್ಲೀಂ ಐಂ ವೃಷಭನಾಥ ತೀರ್ಥಂಕರಾಯ ಸಮವಸರಣ ವಿಭೂತಿಸಹಿತಾಯ ನಮಃ ಸ್ವಾಹಾ

**ಪದ್ಮಪ್ರಭ ತೀರ್ಥಂಕರ :**

ಓಂ ನಮೋ ಅರ್ಹತೇ ಭಗವತೇ ಪದ್ಮಪ್ರಭ ತೀರ್ಥಂಕರಾಯ ಪುಷ್ಪಯಕ್ಷ ಮೋಹಿನೀ ಯಕ್ಷಿ ಸಹಿತಾಯ ಓಂ ಹ್ರೀಂ ಅರ್ಹತೆ ಫಟ್ ರಕ್ತವರ್ಣ ರವಿ ಮಹಾಗ್ರಯಾ ಮಮ ದುರಿತೋಪ ಶಾಂತಿಂ ಕುರು ಕುರು ತುಷ್ಟಿಂ ಕುರು ಕುರು ಪುಷ್ಟಿಂ ಕುರು ಕುರು ಸೌಭಾಗ್ಯಂ ಆಯುಷ್ಯಾರೋಗ್ಯ ಭೀಷ್ಟ ಸಿದ್ಧಿಂ ಕುರು ಕುರು ಸರ್ವಾಪ ಮೃತ್ಯುಂಜಯಂ ಕುರು ಕುರು ಸ್ವಾಹಾ.

**ಚಂದ್ರಪ್ರಭ ತೀರ್ಥಂಕರ :**

ಓಂ ನಮೋ ಅರ್ಹತೇ ಭಗವತೇ ಚಂದ್ರಪ್ರಭ ತೀರ್ಥಂಕರಾಯ ಶ್ಯಾಮ ಯಕ್ಷ ಜ್ವಾಲಾಮಾಲಿನೀ ಯಕ್ಷಿ ಸಹಿತಾಯ ಓಂ ಹ್ರೀಂ ಅರ್ಹತೆ ಫಟ್ ಶ್ವೇತವರ್ಣ ಚಂದ್ರ ಮಹಾಗ್ರಹ ಮಮ ಸರ್ವ ದುರಿತೋಪಶಾಂತಿಂ ಕುರು ಕುರು ತುಷ್ಟಿಂ ಕುರು ಕುರು ಪುಷ್ಟಿಂ ಕುರು ಕುರು ಸೌಭಾಗ್ಯಂ ಆಯುರಾರೋಗ್ಯಾಭೀಷ್ಟ ಸಿದ್ಧಿಂ ಕುರು ಕುರು ಸರ್ವಾಪ ಮೃತ್ಯುಂಜಯಂ ಕುರು ಕುರು ಸ್ವಾಹಾ.

**ಶ್ರೀ ಶಾಂತಿನಾಥ ಮಂತ್ರ :**

ಓಂ ಹ್ರೀಂ ಶ್ರೀಂ ಶಾಂತಿನಾಥಾಯ ನಮಃ ಮಮ ಸರ್ವ ಅಭೀಷ್ಟ ಸಿದ್ಧಿಂ ಕುರು ಕುರು ನಮಃ ಸ್ವಾಹಾ

**ಮುನಿಸುವೃತ ತೀರ್ಥಂಕರ :**

ಶನಿಗೃಹ ಮಂತ್ರ ಓಂ ನಮೋ ಅರ್ಹತೇ ಭಗವತೇ ಶ್ರೀಮತೇ ಮುನಿಸುವೃತ ತೀರ್ಥಂಕರಾಯ ವರುಣಯಕ್ಷ ಬಹುರೂಪಿಣೀ ಯಕ್ಷೀ ಸಹಿತಾಯ ಓಂ ಹ್ರೀಂ ಅರ್ಹತೇ ಫಟ್, ಕೃಷ್ಣ ವ್ಯೃಗವರ್ಣ ಶನಿಮಹಾಗ್ರಹದೇವಾಯ..... ನಕ್ಷತ್ರ..... ನಾಮಧೇಯಸ್ಯ ಸರ್ವಶಾಂತಿಂ ಕುರು ಕುರು ಸ್ವಾಹಾ

**ಶ್ರೀ ಕಲಿಕುಂಡ ಪಾರ್ಶ್ವನಾಥ ಮಂತ್ರ ಜಪ :**

ಓಂ ಹ್ರೀಂ ಶ್ರೀಂ ಕ್ಲೀಂ ಐಂ ಅರ್ಹಂ ಕಲಿಕುಂಡ ದಂಡ ಪಾರ್ಶ್ವನಾಥ ಸ್ವಾಮಿನ್ ಅತುಲ ಬಲ ವೀರ್ಯ ಪರಾಕ್ರಮ ಆತ್ಮವಿದ್ಯಾಂ ರಕ್ಷ ರಕ್ಷ ಪರವಿದ್ಯಾಂ ಭಿಂದ ಭಿಂದ ಭಿಂದ ಭಿಂದ ಸ್ರಾಂ ಸ್ರೀಂ ಸ್ರೂಂ ಸ್ರೇಂ ಸ್ರೈಂ ಸ್ರೋಂ ಸ್ರೌಂ ಸ್ರಂ ಸ್ರಃ ವಂವಂ ಸರ್ವರೋಗಾಪಮೃತ್ಯುವಿನಾಶನಂ ಕುರು ಕುರು ಹೂಂ ಫಟ್ ಸ್ವಾಹಾ ॥

**ಚಂಡೋಗ್ರ ಪಾರ್ಶ್ವನಾಥಸ್ವಾಮಿ ಮಂತ್ರ :**

ಓಂ ಹ್ರೀಂ ಶ್ರೀಂ ಕ್ಲೀಂ ಐಂ ಅರ್ಹಂ ಕಲಿಕುಂಡದಂಡ ಸ್ವಾಮಿನ್ ಅತುಲಬಲವೀರ್ಯ ಪರಾಕ್ರಮಾಯ ಚೋರಾರಿಮಾರೀಶಾಕಿನೀಪ್ರಭೃತಿ ಘೋರೋಪಸರ್ಗ ವಿಜಯ ಚಂಡೋಗ್ರ ಪಾರ್ಶ್ವತೀರ್ಥಂಕರಾಯ ಧರಣೇಂದ್ರ–ಪದ್ಮಾವತೀ ಯಕ್ಷಯಕ್ಷೀ ಸಹಿತಾಯ ಅನಂತ ಸಂಸಾರ ಚಕ್ರಪ್ರಿಮರ್ದನಾಯ ಚತುಸ್ತ್ರಿಂಶದತಿಶಯಸಹಿತಾಯ ಪರಮ್ ದಾರಿಕ ದಿವ್ಯದೇಹಾಯ ಸಮಸ್ತಜೀವಸಂತಾಪ ನಿವಾರಣಕಾರಣಸ್ವರೂಪಾಯ ಅಕ್ಷಯಮೋಕ್ಷಲಕ್ಷ್ಮೀ ಸುಖಫಲಪ್ರದಾಯ ಶ್ರೀ ಕಲಿಕುಂಡಯಂತ್ರಾದಿ ಪತಯೇ ಮಮ ಸರ್ವರಾಜಭಯ ಚೋರಭಯ ಶತ್ರುಭಯ ರೋಗಭಯ ವಿನಾಶನಂ ಕುರು ಕುರು ಸರ್ವಶಾಂತಿಂ ಕುರು ಕುರು ನಮಃ

**ಶ್ರೀ ಚಂಡೋಗ್ರ ಪಾರ್ಶ್ವನಾಥ ಮಂತ್ರ :**

ಓಂ ಹ್ರೀಂ ಶ್ರೀಂ ಕ್ಲೀಂ ಐಂ ಅರ್ಹಂ ಕಲಿಕುಂಡದಂಡ ಸ್ವಾಮಿನ್ ಅತುಲಬಲವೀರ್ಯ ಪರಾಕ್ರಮಾಯ ಚೋರಾರಿಮಾರೀ ಶಾಕಿನೀಪ್ರಭೃತಿ ಘೋರೋಪಸರ್ಗ ವಿನಾಶನಾಯ, ಶ್ರೀಮತ್ ಚಂಡೋಗ್ರ ಪಾರ್ಶ್ವನಾಥಾಯ, ಅನಂತ ಸಂಸಾರಚಕ್ರ ಪ್ರಮರ್ದನಾಯ ಸಮಸ್ತ ಜೀವ ಸಂತಾಪಕಾರಣ ನಿವಾರಣಾಯ, ಅಕ್ಷಯಮೋಕ್ಷ, ಲಕ್ಷ್ಮೀಪ್ರಾಪ್ತಿಕಾರಣಾಯ, ಭೂತಪ್ರೇತ, ಪಿಶಾಚ ಬ್ರಹ್ಮರಾಕ್ಷಸ ಉಪಸರ್ಗ ವಿನಾಶನಾಯ, ಶ್ರೀ ಪಾರ್ಶ್ವಪ್ರಭು ಧರಣೇಂದ್ರ ಪದ್ಮಾವತಿ ಸಹಿತಾಯ ಹೂಂ ಫಟ್ ಸ್ವಾಹಾ

**ಶ್ರೀ ಮಹಾವೀರ ಮಂತ್ರ :**

ಓಂ ಹ್ರೀಂ ಶ್ರೀಂ ಕ್ಲಿಂ ಐಂ ಅರ್ಹಂ ಶ್ರೀ ಮಹಾವೀರ ತೀರ್ಥಂಕರಾಯ ಮಾತಂಗಯಕ್ಷ ಸಿದ್ಧಾಯಿನಿ ಯಕ್ಷಿ ಸಹಿತಾಯ ನಮಃ

**ಶ್ರೀ ಋಷಿ ಮಂಡಲ ಮಂತ್ರ :**

ಓಂ ಹ್ರಾಂ ಹ್ರೀಂ ಹ್ರುಂ ಹ್ರೂಂ ಹ್ರೇಂ ಹ್ರೈಂ ಹ್ರೌಂ ಹ್ರಂ ಹ್ರಃ ಅಸಿಆಉಸಾ ಸಮ್ಯಗ್ದರ್ಶನ ಜ್ಞಾನ ಚಾರಿತ್ರೇಭ್ಯೋ ಹ್ರೀಂ ನಮಃ ಮಮ ದುರಿತಗ್ರಹವ್ಯಾದಿ ವಿಘ್ನೋಪದ್ರವ ಶಾಂತಿಂ ಕುರು ಕುರು ವಷಟ್ ಸ್ವಾಹಾ

**ಶ್ರೀ ಮಹಾ ಮೃತ್ಯುಂಜಯ ಪುಷ್ಪ ಮಂತ್ರ :**

ಓಂ ನಮೋ ಅರ್ಹತೇ ಭಗವತೇ ದೇವಾಧಿ ದೇವಾಯ ಸರ್ವೋಪದ್ರವ ವಿನಾಶನಾಯ ಸರ್ವಾಪಮೃತ್ಯುಂಜಯ ಕಾರಣ ಸ್ವರೂಪಾಯ ಸರ್ವಯಂತ್ರ ಮಂತ್ರ ತಂತ್ರ ಸಿದ್ಧಿಂಕರಾಯ ಹ್ರೀಂ ಹ್ರೀಂ ದ್ರೀಂ ದ್ರೀಂ ಓಂ ಓಂ ಕ್ರೋಂ ಕ್ರೋಂ ಠಠ ಮಮ ಸರ್ವಾಪಮೃತ್ಯುಂ ಘಾತಯ ಘಾತಯ ಆಯುಷ್ಯ ಆಯುಷ್ಯ ವರ್ಧಯ ವರ್ಧಯ ಝುಂ ವಂ ಹ್ವಃ ಪಃ ಹಃ ಕ್ಷೀಂ ಝ್ವಿಂ ಕ್ಲೀಂ ಹಂ ಸಃ ಅಸಿಆಉಸಾ ಅರ್ಹಂ ನಮಃ ಸ್ವಾಹಾ

**ಶ್ರೀ ಗ್ರಹ ಶಾಂತಿ ಮಂತ್ರ :**

ಓಂ ನಮೋ ಭಗವತೋ ಅರಹಂತೋ ಉರಗ ಕುಳ ಪಾಸೋ ಸಿಜ್ಜೆ ಧಮ್ಮೋ ಭಗವತೋ ವಿಜ್ಜಾಟ ಮಹಾ ವಿಜ್ಜಾಟ ವಿಗ್ಗೇ ಮಹಾಉಗ್ಗೆ

ಶೇ ಪಾಶೇ ಸನಿಹತೋ ಓಂ ಹ್ರೀಂ ಅರ್ಹ ಗ್ರಹ ಶಾಂತಿ ಕುರು ಕುರು ಸ್ವಾಹಾ

**ಮಹಾಶಾಂತಿ ಮಂತ್ರ :**

ಓಂ ನಮೋರ್ಹತೆ ಭಗವತೇ ಶ್ರೀಮತೇ ಪ್ರಕ್ಷೀಣಾಶೇಷ-ದೋಷಕಲ್ಮಷಾಯ, ದಿವ್ಯತೇಜೋಮೂರ್ತಯೇ ನಮಃ ಶ್ರೀ ಶಾಂತಿನಾಥಾಯ, ಶಾಂತಿಕರಾಯ, ಸರ್ವಪಾಪ ಪ್ರಣಾಶನಾಯ, ಸರ್ವ ವಿಘ್ನವಿನಾಶನಾಯ ಸರ್ವ ರೋಗೋಪಸರ್ಗ ವಿನಾಶನಾಯ, ಸರ್ವ ಪರಕೃತಕ್ಷುದ್ರೋಪದ್ರವಿನಾಶನಾಯ, ಸರ್ವಕ್ಷಾಮಢಾಮರ ವಿನಾಶನಾಯ, ಓಂ ಹ್ರಾಂ ಹ್ರೀಂ ಹ್ರೂಂ ಹ್ರೌಂ ಹ್ರಃ ಅಸಿಆಉಸಾ ಮಮ ಸರ್ವ ಶಾಂತಿ ಕುರು ಕುರು ವಷಟ್ ಸ್ವಾಹಾ

**ನವಗ್ರಹ ಮಂತ್ರ :**

ಓಂ ಆಂ ಕ್ರೋಂ ಹ್ರೀಂ ಹ್ರಂ ಫಟ್ ಅಸಿಆಉಸಾ ಆದಿತ್ಯಾದಿ ನವಗ್ರಹಭ್ಯೋ ನಮಃ

**ಶ್ರೀ ಜ್ವಾಲಾಮಾಲಿನಿ ಜಪ ಮಂತ್ರ :**

ಓಂ ಆಂ ಕ್ರೋಂ ಹ್ರೀಂ ಶ್ರೀ ಜ್ವಾಲಾಮಾಲಿನ್ಯೈ ನಮಃ

ಓಂ ಹ್ರಾಂ ಹ್ರೀಂ ಹ್ರೂಂ ಹ್ರೌಂ ಹ್ರಃ ಹಾಂ ಆಂ ಕ್ರೋಂ ಕ್ಷೀಂ ಕ್ಲೀಂ ಬ್ಲೂಂ ದ್ರಾಂ ದ್ರಿಂ ಜ್ವಾಲಾಮಾಲಿನೀ ಸರ್ವಗ್ರಹಾನುಚ್ಚಾಟಯ ಉಚ್ಚಾಟಯ ದಹ ದಹ ಹನ ಹನ ಶೀಘ್ರಂ ಶೀಘ್ರಂ ಹೂಂ ಫಟ್ ಫೇ ಫೇ ಸ್ವಾಹಾ

**ವಜ್ರ ಪಂಜರ ಮಂತ್ರ – ಪುಷ್ಪ ಮಂತ್ರ :**

ಓಂ ಹ್ರೀಂ ರಂ ರಂ ರಂ ರಂ ಜ್ವಾಲಾಮಾಲಿನಿ ಹಾಂ ಆಂ ಕ್ರೋಂ ಕ್ಷೀಂ ಹ್ರೀಂ ಕ್ಲೀಂ ಬ್ಲೂಂ ದ್ರಾಂ ದ್ರೀಂ ಹಮಲವರ್ಯ್ಯಂ ಹ್ರಾಂ ಹ್ರೀಂ ಹ್ರೂಂ ಹ್ರೌಂ ಹ್ರಃ ಜ್ವಲ ಜ್ವಲ ಪ್ರಜ್ವಲ ಪ್ರಜ್ವಲ ಧಗ ಧಗ ಧೂಂ ಧೂಂ ಧೂಮಾಂಧಕಾರಿಣಿ ಶ್ರೀಘ್ರಂ ಯಂತ್ರಾಧಿಪತಯೇ ಮಮ ಸರ್ವಗ್ರಹೋಚ್ಚಾಟನಂ ಕುರು ಕುರು ಹೂಂ ಫಟ್ ನಮಃ ಸ್ವಾಹಾ

**ಶ್ರೀ ಕೂಷ್ಮಾಂಡಿನಿ ದೇವಿ ಮಂತ್ರ :**

ಓಂ ನಮೋ ಭಗವತೇ ಅಂಬೇ ಅಂಬಾಲೇ ಅಂಬಿಕೇ ಆಮ್ರ ಕೂಷ್ಮಾಂಡಿನಿಯಕ್ಷಿ ಮಹಾಯಕ್ಷಿ ಸ್ವರ್ಣಯಕ್ಷಿ ಯಕ್ಷದೇವಿಯ್ಯೋಂ ವ್ಲೇಂ ಕ್ಲೀಂ ಝ್ವಿಂ ಹಿಸ್ತ್ಕ್ಲೀವ್ರ್ಯೂಂ ಹ್ಸಾಂ ರರರರ ರಾಂರಾಂ ನಿತ್ಯಕ್ಲಿನೇ ಮದನದ್ರವೇ ಮದನಾತುರೇ ಹ್ರೀಂ ಕ್ರೋಂ ಮಮ ವಶ್ಯಾಕೃಷ್ಟಿಂ ಕುರು ಕುರು ಸಂವೌಷಟ್ ಸ್ವಾಹಾ

ಓಂ ಹ್ರೀಂ ಕೂಷ್ಮಾಂಡಿನೀ ಕನಕಪ್ರಭೇ ಸಿಂಹಮಸ್ತ ಸಮಾರೂಢೇ ಜಿನಧರ್ಮ ಸಂವತ್ಸರೇ ಮಹಾದೇವಿ ಮಮ ಚಿಂತಿತಕಾರ್ಯಂ ಶುಭಾಶುಭಂ ಕಥಯ ಕಥಯ ಅಮೋಘ ವಾರೀಶ್ವರಿ ಸತ್ಯವಾದಿನೀ ಸತ್ಯಂದರ್ಶಯ ದರ್ಶಯ ಸ್ವಾಹಾ

**ಶ್ರೀ ಪದ್ಮಾವತಿ ಜಪ ಮಂತ್ರ :**

ಓಂ ಆಂ ಕ್ರೋಂ ಹ್ರೀಂ ಶ್ರೀಂ ಕ್ಲೀಂ ಬ್ಲೀಂ ಬ್ಲೂಂ ಬ್ಲಂ ಬ್ಲಃ ಮಮ ಸರ್ವಾಭೀಷ್ಟ ಸಿದ್ಧಿಂ ಕುರುಕುರು ಶ್ರೀ ಪದ್ಮಾವತ್ಯೈ ನಮಃ ಸ್ವಾಹಾ

ಓಂ ಹ್ರೀಂ ಹ್ರೌಂ ಹಸ್ತ್ಕ್ಲೌಮ್ ಪದ್ಮೆ ಪದ್ಮ ಕಠಿನೆ ನಮಃ

ಓಂ ಹ್ರೀಂ ಶ್ರೀ ಪದ್ಮಿನಿಯೇ ನಮಃ ಮಮ ಇಚ್ಛಿತ ಕಾರ್ಯ ಸಿದ್ಧಿ ಕುರು ಕುರು ಸ್ವಾಹಾ

ಓಂ ಹ್ರೀಂ ಶ್ರೀಂ ಕ್ಲೀಂ ಐಂ ಅರ್ಹಂ ಶ್ರೀ ಪಾರ್ಶ್ವನಾಥ ತೀರ್ಥಂಕರಾಯ ಧರಣೇಂದ್ರ ಯಕ್ಷ ಪದ್ಮಾವತಿ ಯಕ್ಷಿ ಸಹಿತಾಯ ನಮ ಸ್ವಾಹಾ

**ಶ್ರೀ ಪಂಚಕುಲದೇವತಾ ಮಂತ್ರ :**

ಶ್ರೀ ಚಕ್ರೇಶ್ವರಿ ನಿತ್ಯ ನಿಮ್ಮನಮಿಪೆಂ ಶ್ರೀ ಜ್ವಾಲಿನೀದೇವಿಯಂ
ಸಚ್ಚಾರಿತ್ರದ ಭಕ್ತಿಯಿಂ ದಿಟದಿ ಶ್ರೀ ಕೂಷ್ಮಾಂಡಿನೀಮಾತೆಯಿಂ
ಇಚ್ಛಾದಾಯಿನಿ ಪನ್ನಗಾಂಬೆ ಸತತಂ ಸಿದ್ದಾಯಿನೀ ತಾಯಿಯಂ
ಪಂಚಶ್ರೀ ಕುಲದೇವಿಯರ್ ಕರುಣಿಸಲ್ ಇಷ್ಟಾರ್ಥ ಸಂಸಿದ್ಧಿಯಂ

**ಶ್ರೀ ಲಕ್ಷ್ಮೀ ಪ್ರಾಪ್ತಿ ಮಂತ್ರ :**

ಓಂ ಹ್ರೀಂ ಕ್ರೀಂ ಕಲಿಕುಂಡ ಸ್ವಾಮಿನೆ ನಮಃ

ಓಂ ಶ್ರೀಂ ಹ್ರೀಂ ಕ್ಲೀಂ ಮಹಾಲಕ್ಷ್ಮಿಯೇ ನಮಃ

**ಶ್ರೀ ಸರಸ್ವತಿ ಮಂತ್ರ :**

ಓಂ ಹ್ರೀಂ ಐಂ ಹ್ರೀಂ ಓಂ ಸರಸ್ವತ್ಯೈ ನಮಃ

ಓಂ ಹ್ರೀಂ ಶ್ರೀಂ ಕ್ಲೀಂ ಐಂ ವದ ವದ ವಾಗ್ವಾದಿನಿ ಭಗವತೀ ಸರಸ್ವತಿ ಹ್ರೀಂ ನಮಃ

**ಅಷ್ಟಾಹ್ನಿಕ ಜಾಪ್ಯ :**

ಓಂ ಹ್ರೀಂ ನಂದೀಶ್ವರ ಸಂಜ್ಞಾಯ ನಮಃ

ಓಂ ಹ್ರೀಂ ಅಷ್ಟಮಹಾವಿಭೂತಿ ಸಂಜ್ಞಾಯ ನಮಃ

ಓಂ ಹ್ರೀಂ ತ್ರಿಲೋಕಸಾರ ಸಂಜ್ಞಾಯ ನಮಃ

ಓಂ ಹ್ರೀಂ ಚತುರ್ಮುಖಿ ಸಂಜ್ಞಾಯ ನಮಃ

ಓಂ ಹ್ರೀಂ ಪಂಚಕಲ್ಯಾಣ ಸಂಜ್ಞಾಯ ನಮಃ

ಓಂ ಹ್ರೀಂ ಸ್ವರ್ಗಸೋಪಾನ ಸಂಜ್ಞಾಯ ನಮಃ

ಓಂ ಹ್ರೀಂ ಸರ್ವಸಂಪತ್ತಿ ಸಂಜ್ಞಾಯ ನಮಃ

ಓಂ ಹ್ರೀಂ ಇಂದ್ರಧ್ವಜ ಸಂಜ್ಞಾಯ ನಮಃ

**ಶ್ರೀ ಕ್ಷೇತ್ರಪಾಲನ ಜಪಮಂತ್ರ ಪುಷ್ಪಮಂತ್ರ :**

ಓಂ ಆಂ ಕ್ರೋಂ ಹ್ರೀಂ ಕ್ಷೇತ್ರಪಾಲಾಯ ನಮಃ

ಓಂ ಕ್ಷಾಂ ಕ್ಷಿಂ ಕ್ಷುಂ ಕ್ಷ್ಯೌಂ ಕ್ಷೌಂ ಕ್ಷಃ ಕ್ಷೇತ್ರಪಾಲಾಯ ನಮಃ

ಓಂ ನಮೋ ಭಗವತೇ ಮಣಿಭದ್ರಾದ್ಯಷ್ಟ ದೇವಾಯ ಜಿನಶಾಸನ ವತ್ಸಲಾಯ ಭವ್ಯಜನ ಹಿತಂಕರಾಯ ದುಷ್ಟಜನ ಪ್ರಮರ್ಧನಾಯ ಹಿಳಿ ಹಿಳಿ ಖಿಳಿ ಖಿಳಿ ಬಾಳಯ ಬಾಳಯ ಜಲ ಗಂಧಾಕ್ಷತ ಪುಷ್ಪ ದೀಪಧೂಪ ಫಲಾದೀನ್ ಗೃಹ್ಣನ್ ಗೃಹ್ಣನ್ ಮುಂಚ ಮುಂಚ ಭಯಂಕರ ರೂಪಾಯ ಧರ ಧರ ಘುರು ಘುರು ಆಂ ಕ್ರೋಂ ಹ್ರೀಂ ಆಜಪಾಲ ದೇವರಾಜ ನಾಗಪಾಶ ಬಂಧಬಂಧ ಹಮಲವರ್ಯಾಂ ಓಂ ಹ್ರಾಂ ಹ್ರೀಂ ಹ್ರೂಂ ಹ್ರೌಂ ಹ್ರಃ ಸರ್ವಗ್ರಹನಾಕರ್ಷಯ ನಾಕರ್ಷಯ ಸಾಭಯ ಸಾಭಯ ಮಾರಯ ಮಾರಯ ಫೇ ಫೇ ಹೂಂ ಫಟ್ ಸ್ವಾಹಾ

# ನಮಸ್ಕಾರ ಮಂತ್ರ

| | |
|---|---|
| ಣಮೋ ಅರಿಹಂತಾಣಂ | – ಮೂರೂ ಕಾಲಗಳ ತೀರ್ಥಂಕರರಿಗೆ, ಅರಹಂತರಿಗೆ ನಮಸ್ಕಾರಗಳು. |
| ಣಮೋ ಸಿದ್ಧಾಣಂ | – ಮೂರೂ ಕಾಲಗಳ ಸಿದ್ಧಭಗವಂತರಿಗೆ, ಮೇಲಿಂದ ಮೇಲೆ ನಮಸ್ಕಾರಗಳು. |
| ಣಮೋ ಆಯರಿಯಾಣಂ | – ಮೂರೂ ಕಾಲಗಳ ಗಣಧರ ಪ್ರಮುಖ ಆಚಾರ್ಯ ಭಗವಂತರಿಗೆ ನಮಸ್ಕಾರಗಳು. |
| ಣಮೋ ಉವಜ್ಝಾಯಾಣಂ | – ಮೂರೂ ಕಾಲಗಳ ಉಪಾಧ್ಯಾಯ ಭಗವಂತರಿಗೆ ನಮಸ್ಕಾರಗಳು. |
| ಣಮೋ ಲೋಏ ಸವ್ವಸಾಹೂಣಂ | – ಲೋಕದಲ್ಲಿರುವ ಮೂರೂ ಕಾಲಗಳ ಎಲ್ಲ ಸಾಧು ಭಗವಂತರಿಗೆ ನಮಸ್ಕಾರಗಳು. |
| ಏಸೋ ಪಂಚ ಣಮೋಕ್ಕಾರೋ | – ಈ ಪಂಚನಮಸ್ಕಾರ ಮಂತ್ರವು |
| ಸವ್ವಪಾಪ ಪಣಾಸಣೋ | – ಎಲ್ಲ ಪಾಪಗಳ ನಾಶ ಮಾಡುವಂತಹದು ಇರುತ್ತದೆ. |
| ಮಂಗಲಾಣಂ ಚ ಸವ್ವೇಸಿಂ | – ಎಲ್ಲ ಮಂಗಲಗಳಲ್ಲಿ |
| ಪಢಮಂ ಹವಈ ಮಂಗಲಂ | – ಉತ್ಕೃಷ್ಟ ಮಂಗಲ ಇರುತ್ತದೆ. |

**ಪಂಚಪರಮೇಷ್ಠಿ ವಂದನೆ :**

ಅರ್ಹಂತೋ ಭಗವಂತ ಇಂದ್ರ ಮಹಿತಾಃ ಸಿದ್ಧಾಶ್ಚ ಸಿದ್ಧೀಶ್ವರಾಃ
ಆಚಾರ್ಯಾ ಜಿನಶಾಸನೋನ್ನತಿಕರಾಃ ಪೂಜಾ ಉಪಾಧ್ಯಾಯಕಾಃ
ಶ್ರೀಸಿದ್ಧಾಂತಸುಪಾಠಕಾ ಮುನಿವರಾ ರತ್ನತ್ರಯಾರಾಧಕಾಃ
ಪಂಚೈತೇ ಪರಮೇಷ್ಠಿನಃ ಪ್ರತಿದಿನಂ ಕುರ್ವಂತು ತೇ ಮಂಗಲಮ್ ॥

**ಮೈತ್ರಿ ಭಾವನೆ :**

ಎಲ್ಲ ಜೀವಿಗಳ ಕುರಿತು ನಿರ್ವೈರ ಬುದ್ಧಿ ಇಡುವದು, ಮಿತ್ರತ್ವದ ಚಿಂತನೆ ಮಾಡುವದು, ನನಗೆ ಯಾರೂ ವೈರಿಗಳೇ ಇರುವದಿಲ್ಲ. ಹೀಗೆ ಚಿಂತನೆ ಮಾಡುವದು. ಎಲ್ಲ ಜೀವಗಳ ಹಿತವನ್ನೇ ಬಯಸುವದು.

**ಪ್ರಮೋದ ಭಾವನೆ :**

ಉಪಕಾರಿ ಹಾಗೂ ಗುಣವಂತರ ಕುರಿತು ಉತ್ತಮ ಗುಣಗಳ ಕುರಿತು ಹಾಗೂ ವೀತರಾಗ ಧರ್ಮದ ಕುರಿತು ಪ್ರಮೋದ ಭಾವ ಇಡುವದು.

**ಕಾರುಣ್ಯ ಭಾವನೆ :**

ಅಧರ್ಮಿ ಜೀವಗಳ ಕುರಿತು, ವಿಪರೀತ ಧರ್ಮದಿಂದ ನಡೆಯುವ ಜೀವಗಳ ಕುರಿತು ಹಾಗೂ ಅನಾರ್ಯ ಜೀವಗಳ ಕುರಿತು ಕರುಣಾ ಭಾವ ಇಡುವದು.

**ಮಾಧ್ಯಸ್ಥ ಭಾವನೆ :**

ವಿರೋಧಿಗಳ ಕುರಿತು ಮಧ್ಯಸ್ಥ ಭಾವನೆ ಇರುವದು.

**ಮುಖಪುಟದ ವಿವರಣೆ :**

ನಮ್ಮ ಜೀವನದಲ್ಲಿ ಸಮ್ಯಗ್ದರ್ಶನದ ಸೂರ್ಯೋದಯವಾಗಲಿ. ಮತ್ತು ಅದರ ಫಲಸ್ವರೂಪವಾಗಿ ಅವ್ಯಾಬಾಧ ಸುಖಸ್ವರೂಪ ಸಿದ್ಧ-ಅವಸ್ಥೆಯು ಪ್ರಾಪ್ತಿಯಾಗಲಿ - ಇದೇ ಭಾವನೆಯಿದೆ.